ಬೆಳ್ಳಿ ಮಾಲಿಕೆ



## ಬಾಗಲಕೋಟ ಜಿಲ್ಲೆಯ

# ಜನಪದ ಕಲಾವಿದರು

ಶಿವಾನಂದ ಶೆಲ್ಲಿಕೇರಿ



# ಬಾಗಲಕೋಟ ಜಿಲ್ಲೆಯ

# ಜನಪದ ಕಲಾವಿದರು

•

ಶಿವಾನಂದ ಶೆಲ್ಲಿಕೇರಿ

•

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು-೦೨

"BAGALKOT JILLEYA JANAPADA KALAVIDARU"
Written by Shivanand Shellikeri

Published by : B. N. Paraddi,
Registrar,
Karnataka Janapada and
Yakshagana Academy;
Kannada Bhavan, J. C. Road,
Bangalore -02

Pages : 12 + 133 = 145

Price : Rs. 60-00

Rights : Author

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨
ದೂರವಾಣಿ : ೦೮೦–೨೨೨೧೫೫೦೯

ಪರಿಶೀಲನಾ ಸಮಿತಿ :

ಶ್ರೀ ಕೆರೆಮನೆ ಶಂಭು ಹೆಗಡೆ

ಶ್ರೀ ಗವೀಶ ಹಿರೇಮಠ ಡಾ. ಹಂಪನಹಳ್ಳಿ ತಿಮ್ಮೇಗೌಡ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಡಾ. ಕೆ. ಚೆನ್ನಪ್ಪಗೌಡ

ಶ್ರೀ ಅರಾಟೆ ಮಂಜುನಾಥ ಡಾ. ಬಿ. ಎಸ್. ತಲ್ವಾಡಿ

ಮುಖಪುಟ ವಿನ್ಯಾಸ, ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [೦೮೩೭೨] ೨೩೮೧೮೧ ಮೊ : ೯೪೪೮೧೮೬೦೬೩, ೯೮೮೯೦೯೪೭೦೭

# ಅಧ್ಯಕ್ಷರ ನುಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಿಸುತ್ತಿರುವ ಕಲಾವಿದರ ಪರಿಚಯ ಪುಸ್ತಕಕ್ಕೆ ಮುನ್ನುಡಿ ರೂಪದಲ್ಲಿ ಕೆಲವು ಮಾತುಗಳನ್ನು ಇಲ್ಲಿ ದಾಖಲಿಸಲು ಅಣಿಯಾಗುತ್ತಿದ್ದೇನೆ.

ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ-ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ. ಕಲಾವಿದರ ಪರ ಈ ಧೋರಣೆಯನ್ನು ಅಕಾಡೆಮಿಯ ಸರ್ವ ಸದಸ್ಯರ ಸಮ್ಮುಖದಲ್ಲಿ ಇಟ್ಟಾಗ ಎಲ್ಲರೂ ಉತ್ಸಾಹದಿಂದಲೇ ಬೆಂಬಲಿಸಿದರು. ಅದರ ಫಲವೇ ಈ "ಬೆಳ್ಳಿ ಮಾಲಿಕೆ."

ಯೋಜನೆಯ ಕಾರ್ಯಸ್ವರೂಪವನ್ನು ವ್ಯವಸ್ಥಿತವಾಗಿ ಯೋಜಿಸಿದಾಗ ಜಿಲ್ಲೆಗೊಬ್ಬೊಬ್ಬ ಲೇಖಕರನ್ನು ನಿಯೋಜಿಸಿ, ಅಕಾಡೆಮಿ ಕಾರ್ಯಪ್ರವೃತ್ತವಾಯಿತು. ಆದರೆ ಕೆಲವು ಜಿಲ್ಲೆಗಳ ಕಲಾವಿದರ ಪರಿಚಯ ಕೃತಿಗಳು ಮಾತ್ರ ಬಂದಿದ್ದು, ಅವುಗಳನ್ನು ಪ್ರಕಟಿಸುತ್ತಿದ್ದೇವೆ. ಕಲಾವಿದರ ಪರಿಚಯ ಪುಸ್ತಕಗಳನ್ನು ಹೊರತರುತ್ತಿರುವ ಸಂದರ್ಭದಲ್ಲಿ, ಈ ಮಾಲಿಕೆಗೆ ಅಕಾಡೆಮಿಯು ಪುಟಗಳ ಮಿತಿ ಹಾಕಿಕೊಳ್ಳುವುದರೊಂದಿಗೆ ಹಿರಿಯ ವಯಸ್ಸಿನ ಕಲಾವಿದರನ್ನು ಮಾತ್ರ ದಾಖಲಿಸುವ ಉದ್ದೇಶದಿಂದ ವಯಸ್ಸಿನ ಮಿತಿಯನ್ನೂ ಹಾಕಿಕೊಂಡಿತು. ಜೊತೆಗೆ ಈ ಮಿತಿಯೊಳಗಿನ ಎಲ್ಲಾ ಕಲಾವಿದರನ್ನೂ ಪರಿಚಯಿಸಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಕ್ಷಮೆ ಇರಲಿ. ಉಳಿದ ಕಲಾವಿದರ ಪರಿಚಯ ಮುಂದೆ ಅಕಾಡೆಮಿಯಿಂದ ಆಗಲಿ ಎಂಬ ನಿರೀಕ್ಷೆ ನನ್ನದು.

ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವಲ್ಲಿ ನೆರವಾದ ಎಲ್ಲರನ್ನೂ ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ. ಅಕಾಡೆಮಿಯ ಎಲ್ಲ ಸದಸ್ಯರೂ ಉತ್ಸಾಹದಿಂದ ಪ್ರೋತ್ಸಾಹಿಸಿದ್ದಾರೆ. ಕೆಲವು ಜಿಲ್ಲೆಯ ಕಲಾವಿದರ ಮಾಹಿತಿಯನ್ನು ಲೇಖಕರು ಬರೆದುಕೊಟ್ಟಿರುತ್ತಾರೆ. ಮುದ್ರಣದ ಹೊಣೆಗಾರಿಕೆಯನ್ನು ಶ್ರೀ ಗವೀಶ ಹಿರೇಮಠ ಎಚ್ಚರದಿಂದ ನಿರ್ವಹಿಸಿದ್ದಾರೆ. ಯೋಜನೆ ಪ್ರಸ್ತಾಪದ ಹಂತದಲ್ಲಿದ್ದಾಗ ರಿಜಿಸ್ಟ್ರಾರ್ ಆಗಿದ್ದ ಶ್ರೀ ಎಂ. ಮುನಿರಾಜು ಅವರು, ಕಾರ್ಯರೂಪಕ್ಕೆ ಬರುವಾಗ ರಿಜಿಸ್ಟ್ರಾರ್ ಆಗಿರುವ ಶ್ರೀ ಬಿ. ಎನ್. ಪರಡ್ಡಿ ಅವರೂ, ಕಛೇರಿಯ ಸಿಬ್ಬಂದಿ ವರ್ಗದವರಾದ ಶ್ರೀ ಹೆಚ್. ಪ್ರಕಾಶ್, ಶ್ರೀಮತಿ ಎಂ. ನಾಗರತ್ನ, ಶ್ರೀ ಶಿವಲಿಂಗಯ್ಯ ಇವರುಗಳು ಎಲ್ಲಾ ಹಂತಗಳಲ್ಲಿಯೂ ನೆರವಾಗಿದ್ದಾರೆ. ಇವರೆಲ್ಲರಿಗೂ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳು.

ಅಕಾಡೆಮಿಯ ಎಲ್ಲ ಪ್ರಕಟಣೆಗಳನ್ನು ಆದರದಿಂದ ಬರಮಾಡಿಕೊಂಡಂತೆ ಕಲಾವಿದರ ಪರಿಚಯ ಪುಸ್ತಕಗಳನ್ನು ಓದುಗರು ಬರಮಾಡಿಕೊಳ್ಳುತ್ತಾರೆಂಬ ಭರವಸೆ ನನ್ನದು.

ದಿನಾಂಕ : ೧೬-೧-೨೦೦೮ — ಕೆರೆಮನೆ ಶಂಭು ಹೆಗಡೆ
ಬೆಂಗಳೂರು — ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಬೆಳ್ಳಿಮಾಲಿಕೆಗೆ ಬಂಗಾರದ ತೋರಣ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ 25 ವರ್ಷ ತುಂಬಿದ್ದರಿಂದ ಬೆಳ್ಳಿಹಬ್ಬ ಆಚರಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಅಧ್ಯಕ್ಷರ ಸಂಕಲ್ಪ, ಸದಸ್ಯರ ಹುಮ್ಮಸ್ಸಿನ ಕಾರ್ಯತತ್ಪರತೆ ಬೆಳ್ಳಿಹಬ್ಬಕ್ಕೆ ಹೊಸ ಮೆರುಗು ತಂದಿದೆ. ಹೊರಗಡೆ ಅಕಾಡೆಮಿಯ ಕಾರ್ಯಕಲಾಪಗಳ ಸಾಧನೆ ಬಗ್ಗೆ ಮಾತನಾಡಿದ್ದು ಕೇಳಿದಾಗ ಹೆಮ್ಮೆ ಎನಿಸುತ್ತದೆ.

25 ವರ್ಷಗಳ ಹಿಂದಿನ ಪುಟಗಳನ್ನು ತಿರುಗಿಸಿದಾಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿ ಅನೇಕ ಸಮಸ್ಯೆಗಳ ನಡುವೆಯೂ ಸಾಧಿಸಿ, ಅಕಾಡೆಮಿಗೊಂದು ರೂಪ ಕೊಟ್ಟು ಮಹತ್ವದ ಸ್ಥಾನ ಕಲ್ಪಿಸಿಕೊಟ್ಟ ದಿ : ಶ್ರೀ ಹೆಚ್. ಎಲ್. ನಾಗೇಗೌಡ ಅವರ ಸ್ಮರಣೆ ಅಗತ್ಯವಾದುದು. ಮುಂದೆ ದಿ. ಡಾ. ಎಸ್. ಕೆ. ಕರೀಂಖಾನ್, ದಿ : ಡಾ. ಜೀ ಶಂ. ಪರಮಶಿವಯ್ಯ, ಡಾ. ಕಾಳೇಗೌಡ ನಾಗವಾರ, ಡಾ. ಎಚ್. ಜೆ. ಲಕ್ಕಪ್ಪಗೌಡ, ಡಾ. ಹಿ. ಶಿ. ರಾಮಚಂದ್ರೇಗೌಡ ಈ ವಿದ್ವಾಂಸರುಗಳ ಸಾಂದರ್ಭಿಕ ಸಾಧನೆಗಳು, ಪ್ರಕಟಣೆಗಳು, ಅಕಾಡೆಮಿಯನ್ನು ಹೊಸದಿಕ್ಕಿನತ್ತ ಬೆಳೆಸುವಲ್ಲಿ ಪ್ರೇರಕವಾಗಿವೆ. ಇವರೆಲ್ಲರ ಸಹಾಯದಿಂದ ಅಕಾಡೆಮಿ ಇಂದು ಸಶಕ್ತವಾಗಿ ಬೆಳೆದಿದೆಯೆಂದು ಭಾವಿಸುತ್ತೇನೆ ಮತ್ತು ಈ ಎಲ್ಲ ಮಹನೀಯರನ್ನು ಬೆಳ್ಳಿಹಬ್ಬದ ಆಚರಣೆಯ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

25 ವರ್ಷಗಳ ಅಕಾಡೆಮಿಯ ಸಾಧನೆಗಳ ಬಗ್ಗೆ ನಮಗೆ ತೃಪ್ತಿ ಇದೆ. ಇದುವರೆವಿಗೆ ನಾಡಿನಲ್ಲಿ, ಹೊರನಾಡಿನಲ್ಲಿ ಜನಪದ ಸಾಹಿತ್ಯ, ಕಲೆ, ಕಲಾವಿದರನ್ನು ಕುರಿತು ನಡೆಸಿದ ವಿಚಾರ ಸಂಕಿರಣಗಳು, ಚರ್ಚೆಗಳು, ಶಿಬಿರಗಳು, ಪ್ರದರ್ಶಿಸಿದ ಕಲೆಗಳು ಜಾನಪದದ ಬೆಳವಣಿಗೆಗೆ ಕಾರಣವಾಗಿವೆ. ನಾಡಿನ, ಹೊರನಾಡಿನ ವಿದ್ವಾಂಸರನ್ನು, ಕಲಾವಿದರನ್ನು

ಗುರುತಿಸಿ, ಅವರ ಸೇವೆಯನ್ನು ಪರಿಗಣಿಸಿ, ಪ್ರಶಸ್ತಿ ಪಾರಿತೋಷಕ ನೀಡಿ ಗೌರವಿಸುತ್ತಾ ಬಂದಿದೆ.

ಅಕಾಡೆಮಿಯ ಇಡೀ ಸಾಧನೆಗೆ ಹಿಂದಿನ ಅಧ್ಯಕ್ಷರು, ಸದಸ್ಯರು, ರಿಜಿಸ್ಟ್ರಾರ್ ಹಾಗೂ ಅಕಾಡೆಮಿಯ ಸಿಬ್ಬಂದಿಗಳ ಪರಿಶ್ರಮವಿದೆ. ಸರಕಾರ, ಸಂಘ-ಸಂಸ್ಥೆಗಳ ಸಹಕಾರಗಳನ್ನು ನಾವು ಮರೆಯುವಂತಿಲ್ಲ.

"ಜಾನಪದ ತಲೆಮಾರು" ಮಾಲಿಕೆಯಲ್ಲಿ ನಾಡಿನ ವಿದ್ವಾಂಸರ, ತಜ್ಞರ ಬದುಕು, ಸಾಧನೆ, ಕೊಡುಗೆಗಳನ್ನೊಳಗೊಂಡಂತೆ ಅವರ ಪರಿಚಯದ ಲೇಖನಗಳನ್ನು ಪ್ರಕಟಿಸಿ ನೂರಾರು ಜನರನ್ನು ದಾಖಲಿಸಿದೆ.

ಜೊತೆಗೆ ಜಾನಪದ ಕಲೆ ಸಾಹಿತ್ಯ ಕುರಿತು ಮೌಲಿಕ ಗ್ರಂಥಗಳನ್ನು ಹೊರತರುತ್ತಾ ಪ್ರಕಟಣೆಯ ಕಾರ್ಯದಲ್ಲಿಯೂ ಸಾಕಷ್ಟು ಕೆಲಸ ಮಾಡುತ್ತಲೇ ಬಂದಿರುವುದು ಸಮಾಧಾನದ ಸಂಗತಿಯಾಗಿದೆ.

ನಮ್ಮ ಜನಪದ ಕಲೆ ಸಂಸ್ಕೃತಿ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಪ್ರತಿಭಾನ್ವಿತ ಕಲಾವಿದರ ಪರಿಚಯ ಪುಸ್ತಕ ಬರಬೇಕೆನ್ನುವ ಆಲೋಚನೆ ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಶ್ರೇಷ್ಠ ಪ್ರತಿಭಾನ್ವಿತ ಯಕ್ಷಗಾನ ಕಲಾವಿದರು, ನಮ್ಮ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ಕೆರೆಮನೆ ಶಂಭು ಹೆಗಡೆಯವರ ಅಧ್ಯಕ್ಷರ ಅವಧಿಯಲ್ಲಿ ಬಂದದ್ದು ಸಮಂಜಸವಾದದ್ದು. ಅಧ್ಯಕ್ಷರು ಸ್ವತಃ ಕಲಾವಿದರಾಗಿದ್ದರಿಂದಲೇ ಕಲಾವಿದರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಅವರಿಗಾಗಿ ಹತ್ತಾರು ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುವತ್ತ ಈಗ ಸಮಗ್ರ ನಾಡಿನ ಕಲಾವಿದರ ಪರಿಚಯ ಪುಸ್ತಕ ತರುತ್ತಿರುವುದು ಅಭಿಮಾನದ ಸಂಗತಿಯಾಗಿದೆ.

ನಾಡಿನ ಎಲ್ಲಾ ಜಿಲ್ಲೆಗಳಿಂದ ಆಸಕ್ತಿಯುಳ್ಳ ಲೇಖಕರನ್ನು ಕರೆಯಿಸಿ ಗ್ರಂಥದ ರೂಪು-ರೇಷೆಯ ಬಗ್ಗೆ, ಪುಟಗಳ ಸಂಖ್ಯೆ ಬಗ್ಗೆ ಸಭೆಯಲ್ಲಿ ತಿಳಿಸಿ, ಹಸ್ತಪ್ರತಿ ಕಳುಹಿಸಲು ಸಾಕಷ್ಟು ಸಮಯ ನೀಡಲಾಯಿತು. ಆದರೂ ಕೆಲವು ಜಿಲ್ಲೆಗಳ ಲೇಖಕರು ಕೊನೆಯವರೆಗೂ ಹಸ್ತಪ್ರತಿ ಕಳಿಸದಿದ್ದದು ನಿರಾಶೆಯನ್ನುಂಟುಮಾಡಿದೆ. ಬಂದ ಹಸ್ತಪ್ರತಿಗಳನ್ನೆಲ್ಲಾ ಪರಿಶೀಲಾ ಸಮಿತಿ ಪರಿಶೀಲಿಸಿ, ತಕ್ಷಣ ಅಕಾಡೆಮಿಯು ಮುದ್ರಣಕಾರ್ಯ ಕೈಗೆತ್ತಿಕೊಂಡು 10 ಜಿಲ್ಲಾ ಕಲಾವಿದರ ಪರಿಚಯ ಪುಸ್ತಕ ಹಾಗೂ 3 ವಿಶೇಷ ಗ್ರಂಥಗಳು ಸೇರಿದಂತೆ ಒಟ್ಟು 13 ಪುಸ್ತಕಗಳನ್ನು ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಹೊರತರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಕೊನೆಯದಾಗಿ ಕೃತಜ್ಞತೆಯ ಒಂದೆರೆಡು ಮಾತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಐ. ಎಂ. ವಿಠ್ಠಲಮೂರ್ತಿಯವರನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಅವರು ಈ ಬೆಳ್ಳಿಹಬ್ಬದ ಕಾರ್ಯಕ್ರಮಕ್ಕೆ ಆಸಕ್ತಿ ತೋರಿಸಿ,

ಹೆಚ್ಚಿನ ಧನ ಸಹಾಯ ಮಾಡಿದ್ದರಿಂದಲೇ ಪ್ರಕಟಣೆಗಳು, ವಿಶೇಷ ಕಾರ್ಯಕ್ರಮಗಳು ಜರುಗುತ್ತಿವೆ. ಅವರಿಗೆ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಸಮಯಕ್ಕೆ ಸರಿಯಾಗಿ ಸಹಾಯ, ಸಹಕಾರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮಾನ್ಯ ಶ್ರೀ ಮನು ಬಳಿಗಾರ ಅವರಿಗೂ ಅಕಾಡೆಮಿ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಗೊತ್ತುಪಡಿಸಿದ ಅವಧಿಯಲ್ಲಿ ತಮ್ಮ ತಮ್ಮ ಜಿಲ್ಲೆಯ ಹಿರಿಯ ಹಾಗೂ ಪ್ರತಿಭಾನ್ವಿತ ಕಲಾವಿದರ ಮಾಹಿತಿ ಸಂಗ್ರಹಿಸಿ, ಹಸ್ತಪ್ರತಿ ಸಿದ್ಧಪಡಿಸಿಕೊಟ್ಟ ಲೇಖಕರಿಗೆ, ಆಗಾಗ ಸಭೆ ಸೇರಿ ಈ ಪ್ರಕಟಣಾ ಕಾರ್ಯಕ್ಕೆ ಚಾಲನೆ ನೀಡಿ ಸಹಕರಿಸಿದ ಪ್ರಕಟಣಾ ಸಮಿತಿ ಅಧ್ಯಕ್ಷರು, ಸದಸ್ಯರಿಗೆ, ಪ್ರಕಟಣೆಯ ಜವಾಬ್ದಾರಿ ಹೊತ್ತು ಎಲ್ಲ ಪುಸ್ತಕಗಳ ವಿನ್ಯಾಸ, ಕರಡು ತಿದ್ದುವಿಕೆ, ಮುದ್ರಣ ಸಮೀಕ್ಷೆಯ ಕಾರ್ಯ ನಿರ್ವಹಿಸಿದ ಅಕಾಡೆಮಿ ಸದಸ್ಯರಾದ ಶ್ರೀ ಗವೀಶ್ ಹಿರೇಮಠ ಅವರಿಗೆ, ಕಡಿಮೆ ಅವಧಿಯಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಪ್ರಭು ಗ್ರಾಫಿಕ್ಸ್ ಮಾಲೀಕರಾದ ಶ್ರೀ ಶಾಂತವೀರ ಜಂಗಮನಿಯವರಿಗೆ ಹಾಗೂ ಅಕಾಡೆಮಿಯ ಪ್ರಕಟಣೆಗಳನ್ನು ಆಸಕ್ತಿಯಿಂದ ಬರಮಾಡಿಕೊಳ್ಳುವ ಸಹೃದಯಿಗಳಿಗೆ ಅನಂತ ಕೃತಜ್ಞತೆಗಳು.

– ಬಿ. ಎಸ್. ಪರಡ್ಡಿ

ರಿಜಿಸ್ಟ್ರಾರ್,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು.

# ಕಲ್ಲಕೊಟ್ಟವ್ಗ ಎಲ್ಲ ಭಾಗ್ಯ ಬರಲಿ

ಬಾಗಲಕೋಟೆ ಜಿಲ್ಲೆ ಪುಟ್ಟದಾದರೂ ತನ್ನದೆ ಆದ ಹಿರಿಮೆ, ಗರಿಮೆಯನ್ನು ಹೊಂದಿದ ವಿಶೇಷವಾದ ಜಿಲ್ಲೆ. ಈ ನಾಡಿನಲ್ಲಿ ಹುಟ್ಟಿ ಬೆಳೆದ ಹಲವರು ರಾಷ್ಟ್ರಮಟ್ಟದಲ್ಲಿ ಕಲಾ ಪ್ರದರ್ಶನ ನೀಡಿ ನಮ್ಮ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಜಾನಪದ ಕಲಾವಿದರಿಗೆ ಕೊಡ ಮಾಡುವ ಶ್ರೇಷ್ಠ ಪ್ರಶಸ್ತಿ "ಜಾನಪದ ಶ್ರೀ" ಪ್ರಶಸ್ತಿ ಜಿಲ್ಲೆಯ ಮೂರು ಜನ ಹಿರಿಯ ಜಾನಪದ ಕಲಾವಿದರಿಗೆ ದೊರಕಿರುವುದು ಹೆಮ್ಮೆಯ ಸಂಗತಿಯೇ ಸರಿ. ಜಾನಪದ ಕಲೆ ಉಳಿವಿಗಾಗಿ ಮತ್ತು ಪ್ರಸಾರಕ್ಕಾಗಿ ಶತಶತಮಾನಗಳಿಂದ ಕುಣಿದು ಕುಪ್ಪಳಿಸಿದ್ದಾರೆ. ಅಷ್ಟೆ ನೋವುಗಳನ್ನುಂಡು ಬೆಳೆದಿದ್ದಾರೆ. ಅಂತಹ ಶ್ರಮ ಜೀವಿಗಳ ಕುರಿತು ಪರಿಚಯಾತ್ಮಕ ಪುಸ್ತಕ ಪ್ರಕಟಿಸುವ ಸಹಾಸಕ್ಕೆ ಕೈ ಹಾಕಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರ ಕೆಲಸ ಮೆಚ್ಚುವಂತಹದು ಎಂಬುದು ಜಾನಪದ ಕಲೆ ಮತ್ತು ಕಲಾವಿದರನ್ನು ಪ್ರೀತಿಸುವ ಜೀವಗಳ ಅಂಬೋಣವಾಗಿದೆ.

ಜಿಲ್ಲೆಯಲ್ಲಿ ಬಹಳಷ್ಟು ಕಲಾವಿದರು ಸುಮಾರು ಎಪ್ಪತ್ತು ಎಂಬತ್ತು ವರ್ಷಗಳಿಂದ ಕಲಾಸೇವೆಯಲ್ಲಿ ತೊಡಗಿಸಿಕೊಂಡು ಈ ಕಲೆ ಬೆಳವಣಿಗೆಗಾಗಿ ಕಂಕಣ ಬದ್ಧರಾಗಿದ್ದಾರೆ. ಇದರ ಪ್ರತಿಫಲವಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಜೊತೆಗೆ ಕರ್ನಾಟಕ ಘನ ಸರ್ಕಾರ ಕೊಡಮಾಡುವ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜಾನಪದಶ್ರೀ ಪ್ರಶಸ್ತಿಗಳು ಜಿಲ್ಲೆಯ ಕಲಾವಿದರಿಗೆ ಸಂದಿವೆ. ಇಂತಹ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸುವುದರ ಜೊತೆಗೆ ಎಲೆ ಮರೆಕಾಯಿಯಂತಿರುವ ಹಿರಿಯ ಕಲಾವಿದರನ್ನು ಪರಿಚಯಿಸುವದು ಅಕಾಡೆಮಿಯ ಉದ್ದೇಶ. ಅವರ ಮಾರ್ಗದರ್ಶನದಂತೆ ಉತ್ತಮ

ಕೆಲಸ ಮಾಡಿದ ಸಂತೃಪ್ತಿ ನನಗಿದೆ. ಇನ್ನುಳಿದ ಕಲಾವಿದರುಗಳನ್ನು ಮತ್ತೊಂದು ದಿಸೆಯಲ್ಲಿ ಪರಿಚಯಿಸುವ ಕೆಲಸ ನಡೆದರೆ ನನಗೆ ಇನ್ನಷ್ಟು ಆನಂದವೆನಿಸುತ್ತದೆ.

ಶ್ರೀಕೃಷ್ಣ ಪಾರಿಜಾತ ಪ್ರಥಮ ರಂಗನಟಿ ಕೌಜಲಗಿ ನಿಂಗಮ್ಮ ಮತ್ತು ಜಾನಪದ ಸಿರಿ ಗೌರಮ್ಮ ಚಲವಾದಿ ಇವರ ಕುರಿತು ಇಲ್ಲಿ ಪರಿಚಯ ಮಾಡಿರುವುದಿಲ್ಲ ಯಾಕೆಂದರೆ, ಬೆಳಗಾವಿ ಹಾಗೂ ಬಿಜಾಪೂರ ಜಿಲ್ಲೆ ಅವರ ಜನ್ಮ ಭೂಮಿಯಾಗಿರುವುದರಿಂದ ಆ ಜಿಲ್ಲೆಯ ಲೇಖಕರು ಪರಿಚಯಿಸುವದಾಗಿ ಹೇಳಿರುತ್ತಾರೆ. ನನ್ನ ಮನವಿಗೆ ಸ್ಪಂದಿಸಿ ಹಲವಾರು ಕಲಾವಿದರು ನನಗೆ ಕ್ಷೇತ್ರ ಕಾರ್ಯದಲ್ಲಿ ಸಹಾಯ ನೀಡಿ ಮಾಹಿತಿ ನೀಡಿದ್ದಾರೆ. ಕೆಲವು ಕಲಾವಿದರು ಸರಿಯಾಗಿ ಮಾಹಿತಿ ನೀಡದೆ ತೊಂದರೆಯನ್ನು ಸಹ ಕೊಟ್ಟಿದ್ದಾರೆ. ಅಂತಹ ಎಲ್ಲ ಕ್ರೀಯಾಶೀಲ ಮನಸ್ಸುಗಳಿಗೆ ಅನಂತ ನಮಸ್ಕಾರಗಳನ್ನು ಸಲ್ಲಿಸುತ್ತೇನೆ. ಕಲಾವಿದರನ್ನು ಪರಿಚಯಿಸುವದರ ಜೊತೆಗೆ ಪುಸ್ತಕ ಬರೆದು ಕೊಡಲು ಅವಕಾಶಮಾಡಿಕೊಟ್ಟ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆ ಹಾಗೂ ಅಕಾಡೆಮಿಯ ಎಲ್ಲ ಸದಸ್ಯರುಗಳಿಗೆ ಹಿಂದಿನ ರಿಜಿಸ್ಟಾರ್ ಆದ ಶ್ರೀ ಎಂ. ಮುನಿರಾಜು ಹಾಗೂ ಈಗಿನ ರಿಜಿಸ್ಟಾರ್ ಆದ ಶ್ರೀ ಬಿ. ಎನ್. ಪರಡ್ಡಿ ಮತ್ತು ಸಲಹೆ ಸೂಚನೆ ನೀಡಿದ ಎಲ್ಲ ಸಿಬ್ಬಂದಿಯವರಿಗೆ ಅನಂತ ಧನ್ಯವಾದಗಳು.

**ಶಿವಾನಂದ ಶೆಲ್ಲಿಕೇರಿ**

ನವೆಂಬರ್, ೨೦೦೭

# ಪರಿವಿಡಿ


| | | |
|---|---|---|
| ೧. | ಮಹಾಲಿಂಗಯ್ಯ ಮ. ಗಣಾಚಾರಿ | ೧ |
| ೨. | ಇಬ್ರಾಹೀಮ್ ನ. ಸುತಾರ | ೩ |
| ೩. | ಪರಪ್ಪ ಸಲಬನ್ನವರ | ೫ |
| ೪. | ಬಸಗೌಡ ಶಿವನಗೌಡ ನ್ಯಾಮಗೌಡರ | ೭ |
| ೫. | ಶ್ರೀಶೈಲಯ್ಯ ನಿಂಗಯ್ಯ ಮರೆಗುದ್ದಿ | ೯ |
| ೬. | ಸದಾಶಿವ ಸಂಗಪ್ಪ ಯತ್ನಾಳ | ೧೧ |
| ೭. | ಮಲ್ಲಪ್ಪ ಗು. ಬಳಮಟ್ಟಿ | ೧೩ |
| ೮. | ಗುರುರಾಜ ಕೆಂದೂಳಿ | ೧೫ |
| ೯. | ಕುಶಾಲಪ್ಪ ತಿಪ್ಪಣ್ಣ ಸಣ್ಣಕ್ಕಿ | ೧೭ |
| ೧೦. | ರಂಗಪ್ಪ ಬಾಲಪ್ಪ ಹಲಕುರ್ಕಿ | ೧೯ |
| ೧೧. | ಇಬ್ರಾಹಿಂ ಅಲ್ಲಾಖಾನ | ೨೧ |
| ೧೨. | ಚನ್ನಪ್ಪ ವೀ. ಕರಡಿ | ೨೩ |
| ೧೩. | ಸಂಗಪ್ಪ ಹೂಗಾರ | ೨೫ |
| ೧೪. | ಶೇಷಪ್ಪ ನಾಗಪ್ಪ ಸೋನಾರ | ೨೭ |
| ೧೫. | ಸಂಗಯ್ಯ ಚಿನ್ನಯ್ಯ ಮಠಪತಿ | ೨೯ |
| ೧೬. | ಶಂಕ್ರಪ್ಪ ಸಾಬಣ್ಣ ಭಜಂತ್ರಿ | ೩೧ |
| ೧೭. | ಬಸವರಾಜ ಹ. ಭಜಂತ್ರಿ | ೩೩ |
| ೧೮. | ತಿಮ್ಮಣ್ಣ ಹಣಮಂತ ಭಜಂತ್ರಿ | ೩೫ |
| ೧೯. | ಬಾಗವ್ವ ಭೀಮರಿತೆವ್ವ ಕಮತಗಿ | ೩೭ |
| ೨೦. | ದಾನವ್ವ ಮುರುಗಯ್ಯ ಕಲ್ಮಠ | ೩೯ |
| ೨೧. | ಈಶ್ವರಪ್ಪ ಗು. ಅಂಗಡಿ | ೪೧ |
| ೨೨. | ಸೂರ್ಪಾಲಿ ಅಚ್ಯುತಾಚಾರ್ಯರು | ೪೩ |
| ೨೩. | ದಿ॥ ಗುರಪ್ಪ ಬಸೆಟ್ಟೆಪ್ಪ ಅನಂತಪೂರ | ೪೫ |
| ೨೪. | ಅಪ್ಪಾಲಾಲ್ ನದಾಫ್ | ೪೮ |

| | | |
|---|---|---|
| ೨೫. | ರಾಚಯ್ಯ ಮಠಪತಿ | ೫೨ |
| ೨೬. | ಮುರಿಗೆಪ್ಪ ಮ. ಸೋರಗಾಂವಿ | ೫೫ |
| ೨೭. | ವಿಠಲರಾವ್ ಸಿದ್ಧಪ್ಪ ನಾವ್ಹಿ | ೫೭ |
| ೨೮. | ರಾಮಣ್ಣಾ ವೆಂಕಪ್ಪ ಶಿರೋಳ | ೫೯ |
| ೨೯. | ರಾಚಯ್ಯ ಚನ್ನಯ್ಯ ಹಿರೇಮಠ | ೬೧ |
| ೩೦. | ಚಂಪಾಬಾಯಿ ಸುಳೆ | ೬೩ |
| ೩೧. | ದಿ|| ಕೃಷ್ಣಾಜಿ ದೇಶಪಾಂಡೆ | ೬೫ |
| ೩೨. | ಸತ್ಯಪ್ಪ ಚಿಗರಿ | ೬೯ |
| ೩೩. | ಮಲ್ಲಯ್ಯ ಗುರುಪಾದಯ್ಯ ಅಥಣಿ | ೭೧ |
| ೩೪. | ರಾಯಪ್ಪ ಸಂಗಪ್ಪ ಕುಂಬಾರ | ೭೩ |
| ೩೫. | ಸಿದ್ಧಪ್ಪ ಅಮ್ಮಣ್ಣ ತಳೇವಾಡ | ೭೫ |
| ೩೬. | ಯಮನವ್ವ ಸ. ಮಾದರ | ೭೭ |
| ೩೭. | ಮಾರುತೆಪ್ಪ ಪರಪ್ಪ ಪೆಟ್ಲೂರ | ೭೯ |
| ೩೮. | ಯಲ್ಲವ್ವ ರೊಡ್ಡಪ್ಪನವರ | ೮೧ |
| ೩೯. | ಮಲ್ಲಿಕಾರ್ಜುನ ರಾಚಪ್ಪ ಮುದಕವಿ | ೮೪ |
| ೪೦. | ಕಾಶಿಬಾಯಿ ದಾದನಟ್ಟಿ (ಭೂತಪ್ಪಗೋಳ) | ೮೬ |
| ೪೧. | ಕಮಲವ್ವಾ ರಾ. ಜಾನಪ್ಪಗೋಳ | ೮೮ |
| ೪೨. | ಲಕ್ಷ್ಮಣ ತಮ್ಮಣ್ಣಪ್ಪ ಅಗಸರ | ೯೦ |
| ೪೩. | ಕಲ್ಲಪ್ಪ ಚೆನ್ನಪ್ಪ ಪಟ್ಟಣಶೆಟ್ಟಿ | ೯೨ |
| ೪೪. | ಗಫೂರಸಾಬ ಪತ್ತೆಸಾಬ ವಾಲೀಕಾರ | ೯೪ |
| ೪೫. | ವಿಲಾಸಬಾಯಿ ಮ. ರಾಯಣ್ಣನವರ | ೯೬ |
| ೪೬. | ಸಿದ್ದಗಿರಿಸ್ವಾಮಿ ಮಠಪತಿ | ೯೮ |
| ೪೭. | ಮಲ್ಲಯ್ಯ ಬಸಲಿಂಗಯ್ಯ ಹಿಡಕಲ್ | ೧೦೧ |
| ೪೮. | ಮಲ್ಲಪ್ಪ ಬಸಪ್ಪ ಗಣಿ | ೧೦೩ |
| ೪೯. | ಶಿವಪ್ಪ ಕಳ್ಳೆನ್ನವರ | ೧೦೫ |
| ೫೦. | ಶಿವಪ್ಪ ಯಲ್ಲಪ್ಪ ಮರೆನ್ನವರ | ೧೦೭ |
| ೫೧. | ನಿಂಗಪ್ಪ ಕಲ್ಲಪ್ಪ ನಿರಾಣಿ | ೧೦೯ |
| ೫೨. | ಸದಾಶಿವ ಮಲ್ಲಪ್ಪ ಹೂಗಾರ | ೧೧೧ |
| ೫೩. | ವೆಂಕಪ್ಪ ಅಂಬಾಜಿ ಸುಗತೇಕರ | ೧೧೩ |
| ೫೪. | ಕಿಷ್ಟಪ್ಪ ಸೈದಪ್ಪ ಬೆಳ್ಳಟ್ಟಿ | ೧೧೫ |
| ೫೫. | ವೀರಪ್ಪ ಸಂಗಪ್ಪ ಶೆಟ್ಟರ | ೧೧೭ |
| ೫೬. | ಕರಿಯಪ್ಪ ನಿಂಗಪ್ಪ ಗದ್ದನಕೇರಿ | ೧೧೯ |

೫೭. ಮುದಕವ್ವ ಪೂಜಾರಿ . . . ೧೨೧
೫೮. ಸೋನುಬಾಯಿ ಗೋ. ಬೋಜಪ್ಪಗೋಳ . . . ೧೨೩
೫೯. ದುರ್ಗವ್ವ ತಿಮ್ಮಪ್ಪ ಗದಿಗೆಪ್ಪಗೋಳ . . . ೧೨೫
೬೦. ಜಕ್ಕವ್ವ ಸತ್ಯಪ್ಪ ಶಿರಬೂರ . . . ೧೨೭
೬೧. ಹಣಮಂತ ದುಂಡಪ್ಪ ಬಿರಾದಾರ . . . ೧೨೯
೬೨. ಸೈದುಸಾಬ ಹುಸೇನಸಾಬ ತೊನಿಶ್ಯಾಳ . . . ೧೩೧
ಗ್ರಂಥಋಣ . . . ೧೩೩

# ಮಹಾಲಿಂಗಯ್ಯ ಮ. ಗಣಾಚಾರಿ

ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಜಾನಪದ ಕ್ಷೇತ್ರಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಜಾನಪದ ಕಲಾಪ್ರಕಾರಗಳಲ್ಲಿ ಒಂದಾದ ಶಿವಭಜನೆಯು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಇದಕ್ಕೆ ತನ್ನದೆಯಾದ ವೈಶಿಷ್ಟತೆಯಿದೆ. ಇಂತಹ ಕಲೆಯನ್ನು ಕರಗತ ಮಾಡಿಕೊಂಡವರಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ರನ್ನ ಬೆಳಗಲಿಯ ಮಹಾಲಿಂಗಯ್ಯ ಗಣಾಚಾರಿಯವರು, ಇವರ ಹಾಡುಗಳನ್ನು ಕೇಳಿ ಸಂತೋಷ ಪಡದವರು ಉತ್ತರ ಕರ್ನಾಟಕದ ಭಾಗದಲ್ಲಿಲ್ಲವೆಂದರೆ ಅತಿಶಯೋಕ್ತಿ ಎನಿಸಲಾರದು.

ಶ್ರೀ ಮಹಾಲಿಂಗಯ್ಯನವರು ಮೂಲತಃ ಜಮಖಂಡಿ ತಾಲೂಕಿನ ಕುಂಚನೂರ ಗ್ರಾಮದ ಮಲ್ಲಯ್ಯ ರಾಚಮ್ಮ ಎಂಬ ಶರಣ ದಂಪತಿಗಳ ಪುತ್ರರಾಗಿ ಜನಿಸಿದರು. ಮಧ್ಯಮ ವರ್ಗದಲ್ಲಿ ಹುಟ್ಟಿಬಂದ ಮಹಾಲಿಂಗಯ್ಯ ಸ್ವಾಮಿಗಳು ಶಿಕ್ಷಣವನ್ನು ಪಡೆಯದೆ ಹಾಡಿನ ಗುಂಗು ಹಿಡಿದು ಸಂಗೀತದತ್ತ ತಮ್ಮನ್ನು ತೊಡಗಿಸಿಕೊಂಡು ಶ್ರೀ ಮಹಾದೇವಪ್ಪ ಕೋನೆಗೋಳ ಇವರ ಮಾರ್ಗದರ್ಶನದಲ್ಲಿ ಸಂಗೀತವನ್ನು ಕಲಿತುಕೊಂಡರು. ಮುಂದೆ ಹಲವು ಕಾರಣಾಂತರಗಳಿಂದ ಮುಧೋಳ ತಾಲೂಕಿನ ರನ್ನಬೆಳಗಲಿ ಗ್ರಾಮಕ್ಕೆ ಬಂದು ತಮ್ಮ ಕಲಾ ಸೇವೆಯನ್ನು ಪ್ರಾರಂಭಿಸಿದರು.

೧೯೮೦ರಲ್ಲಿ ಶ್ರೀರಾಮಲಿಂಗೇಶ್ವರ ಭಜನಾ ಮೇಳ ಬೆಳಗಲಿ ಎಂಬ ಸಂಘಕಟ್ಟಿ ನಾಡಿನಾದ್ಯಂತ ಸಂಚರಿಸಿ ಭಜನಾ ಸೇವೆಯನ್ನು ಪ್ರಾರಂಭಿಸಿದರು. ಭಜನಾ ಹಾಡುಗಳನ್ನು ಹಾಡಿ ನಾಡಿನ ತುಂಬೆಲ್ಲ ಹೆಸರುಗಳಿಸುವದರ ಜೊತೆಗೆ ಬೆಳಗಲಿ ಗ್ರಾಮಕ್ಕೆ ಹೆಸರು ತಂದರು. ಶ್ರೀಮನ್ ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ, ಸರ್ಪಭೂಷಣರ ಕೈವಲ್ಯ ಕಲ್ಪವಲ್ಲರಿ, ದಾಸರ ಪದಗಳು, ಶರಣರ ವಚನಗಳು ಹಾಗೂ ಹಲವಾರು

ಪದ್ಯಗಳನ್ನು ಸರಾಗವಾಗಿ ಹಾಡಿ ಕೇಳುಗರಿಗೆ ಖುಷಿ ಪಡಿಸುವಂತಹ ಲಯ, ಗತ್ತುಗಾರಿಕೆ ಮಹಾಲಿಂಗಯ್ಯ ಸ್ವಾಮಿಗಳಲ್ಲಿದೆ. ಇವರ ಅದ್ಭುತ ಗಾಯನ ಕಲೆಯನ್ನು ಕಂಡು ಹಲವಾರು ಧ್ವನಿಮುದ್ರಣ ಕೇಂದ್ರದವರು ಇವರ ಧ್ವನಿ ಸುರುಳಿಗಳನ್ನು ಬಿಡುಗಡೆಗೊಳಿಸಿದ್ದಾರೆ.

ಭಕ್ತಿಬಂಡಾರಿ ಬಸವಣ್ಣ, ಮುಕ್ತಿಯೇ ಭಕ್ತಿ, ತೇರು ಸಾಗಿತಮ್ಮ, ಗುರುಧ್ಯಾನವ ಮಾಡೋ, ಸಂಸಾರದೊಳು ಸುಖವಿಲ್ಲ, ಹೊತ್ತ ಮಣ್ಣಿನ ಕೊಡ, ನಂಬದಿರು ಮಣ್ಣಿನ ದೇಹ ಎಂಬ ಧ್ವನಿಸುರಳಿ ಬಿಡುಗಡೆಗೊಂಡು ನಾಡಿನ ತುಂಬೆಲ್ಲ ಭಜನಾ ಹಾಡುಗಳ ಕೇಳುಗರ ಮನ ತಣಿಸಿವೆ. ಇಂತಹ ಅದ್ಭುತ ಗಾನ ಸುಧೆಯನ್ನು ಬಳುವಳಿಯಾಗಿ ಪಡೆದುಕೊಂಡು ಬಂದ ಮಹಾಲಿಂಗಯ್ಯನವರು ನಯ, ವಿನಯ, ಸದ್ಗುಣ ಸಂಪನ್ನತೆಯಿಂದ ನಾಡಿನ ತುಂಬ ಹೆಸರು ಮಾಡಿದವರು. ಇಂತಹ ಕಲಾ ಪ್ರವೀಣರು ಕಾರ್ಯಕ್ರಮಗಳು ಹಲವಾರು ಸಲ ಆಕಾಶವಾಣಿ ಧಾರವಾಡದಿಂದ ಪ್ರಸಾರ ಗೊಳ್ಳುವುದಲ್ಲದೆ ನಾಡಿನ ಹೆಸರಾಂತ ದೂರದರ್ಶನ ವಾಹಿನಿಯಾದ ಚಂದನದಲ್ಲಿಯೂ ಪ್ರಸಾರಗೊಂಡಿದೆ. ಇವರು ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳು ಮತ್ತು ಯುವಜನ ಮೇಳ, ಜಾನಪದ ಉತ್ಸವ, ಹಬ್ಬ ಹರಿದಿನಗಳಲ್ಲಿ ಭಾಗವಹಿಸಿ ಜನರ ಪ್ರೀತಿಗೆ ಪಾತ್ರರಾಗುವುದರ ಜೊತೆಗೆ ತಾವು ಬೆಳವಣಿಗೆ ಹೊಂದಿದ್ದಾರೆ. ಇವರ ಶ್ರೇಷ್ಠ ಹಾಡುಗಾರಿಕೆಯ ಸೇವೆಯನ್ನು ಕಂಡ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಬಿರುದು ನೀಡಿ ಪ್ರೋತ್ಸಾಹಿಸಿವೆ. ೨೦೦೨ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು "ಜ್ಞಾನ ವಿಜ್ಞಾನ", ಪ್ರಶಸ್ತಿ ನೀಡಿದ್ದಾರೆ ಹಾಗೂ ೨೦೦೫ರಲ್ಲಿ ಬೀಳಗಿಯಲ್ಲಿ ನಡೆದ ಬಾಗಲಕೋಟೆ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಲಾಗಿದೆ.

ಮಹಾಲಿಂಗಯ್ಯ ಮ. ಗಣಾಚಾರಿ,
ಸಾ : ರನ್ನ ಬೆಳಗಲಿ, ತಾ : ಮುಧೋಳ, ಜಿ : ಬಾಗಲಕೋಟೆ.

# ಇಬ್ರಾಹೀಮ್ ನ. ಸುತಾರ

ದೇವನ ಮನೆಯಿದು
ಈ ಜಗವೆಲ್ಲ
ಬಾಡಿಗೆದಾರರು ನಾವುಗಳೆಲ್ಲ ॥ ಪ ॥

ಎಂದು ಆಧ್ಯಾತ್ಮಿಕವಾದ ಭಜನಾ ಪದಗಳನ್ನು ಹಾಡಿ ಕೇಳುಗರನ್ನು ಭಕ್ತಿ ಲೋಕಕ್ಕೆ ಕರೆದೊಯ್ಯುವ ಕಲೆ ಇಬ್ರಾಹಿಂ ಸುತಾರ ಇವರಲ್ಲಿದೆ. ಇವರು ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ವ್ಯಾಪಾರಿ ಕೇಂದ್ರ, ಸಕ್ಕರೆ ನಾಡು ಜಾನಪದ ಕಲಾವಿದ ತವರೂರಾದ ಮಹಾಲಿಂಗಪೂರದಲ್ಲಿ ಜನಿಸಿದರು.

ಕಡುಬಡತನದ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಇವರು ಬಾಲ್ಯದ ದಿನಗಳಲ್ಲಿ ಬಹಳಷ್ಟು ತೊಂದರೆಗಳನ್ನು ಅನುಭವಿಸಿದರು. ಅಂಜದೆ ಜೀವನದ ನೌಕೆಯನ್ನು ಸಾಗಿಸಿದರು. ವಿದ್ಯಾಭ್ಯಾಸದ ಜೊತೆಗೆ ಆಧ್ಯಾತ್ಮಿಕವಾದ ಹವ್ಯಾಸವನ್ನು ಬೆಳೆಸಿಕೊಂಡ ಸುತಾರರ ಆಸೆಯನ್ನು ತಣಿಸಲು ಗುರುವಾಗಿ ನಿಂತವರು ಕುಡಚಿಯ ಹಜರತ್ ಶೇಖುಲ್ ಮುಶಾಯಿಕ್, ಮೊಹಮ್ಮದ್ ಅಬ್ಬಾಸ್ ಅಲಿಜುನ್ನೇದಿಯರಂಥ ಮಹಾತ್ಮರು ಆಶ್ರಯನೀಡಿ ಪ್ರೋತ್ಸಾಹಿಸಿದರು. ಇನ್ನು ಮುಂದಿನ ದಿನಗಳಲ್ಲಿ ಸಿದ್ದಾಪೂರದ ಶ್ರೀರಾಮಚಂದ್ರ ಶಾಸ್ತ್ರಿಗಳು ಶ್ರೀ ಶಾಂತನಂದ ಸ್ವಾಮಿಗಳು ಶ್ರೀ ವಿದ್ಯಾನಂದ ಸ್ವಾಮಿಗಳು, ಶ್ರೀ ಸಿದ್ದಪ್ಪಯ್ಯ ಮಹಾರಾಜರು ಇವರುಗಳೆಲ್ಲ ಶಾಸ್ತ್ರಭ್ಯಾಸದಲ್ಲಿ ಸುತಾರರನ್ನು ನಿಪುಣರನ್ನಾಗಿ ಮಾಡಿದರು. ಇವರ ಸತತ ಪ್ರಯತ್ನ ಹಾಗೂ ಸಂಪನ್ನ ಗುಣಗಳಿಂದ ಸರ್ವಜನಾಂಗಗಕ್ಕೆ ಮಾದರಿಯಾದರು. ಸ್ವ ಪ್ರಯತ್ನದಿಂದ ಉತ್ತಮ ಮಾತುಗಾರರಗಿ, ಪ್ರವಚನಕಾರರಾಗಿ, ಉತ್ತಮ ಭಜನಾ ಹಾಡುಗಾರರಾಗಿ ಗುರುತಿಸಿಕೊಂಡರು. ನಾಡಿನ ತುಂಬೆಲ್ಲ ನಡೆಯುವ ಜಾತ್ರೆ, ಧರ್ಮಗೋಷ್ಠಿ ಧರ್ಮಸಭೆಗಳಲ್ಲಿ ಭಾಗವಹಿಸಿ ಸರ್ವ

ಪೂಜ್ಯರ ಕೃಪೆಗಾಗಿ ಪಾತ್ರರಾಗಿ ಜನರ ವಿಶ್ವಾಸವನ್ನು ಗಳಿಸಿಕೊಂಡಿದ್ದಾರೆ. ನುರಿತ ಭಜನಾ ಹಾಡುಗಾರರಿಂದ ಭಜನೆ ಹಾಡುಗಳ ಮಾರ್ಗದರ್ಶನ ಪಡೆದುಕೊಂಡು "೧೯೭೦ರಲ್ಲಿ ಭಾವೈಕ್ಯ ಜನಪದ ಮೇಳ" ಎಂಬ ತಂಡಕಟ್ಟಿ ಆ ಮೂಲಕ ನಾಡಿನ ಉದ್ದಗಲಲ್ಲೂ ಕಲಾಸೇವೆಯಲ್ಲಿ ತೊಡಗಿದ್ದಾರೆ. ನಾಡಿನಲ್ಲಿರುವ ಹಲವಾರು ತೊಂದರೆಗಳ ನಿವಾರಣೆಗಾಗಿ ಸಂವಾದ ರೂಪದಲ್ಲಿ ಭಜನೆ ಹಾಡುಗಳನ್ನು ಹಾಡಿ ಆ ಜನರಲ್ಲಿ ಭಾವೈಕ್ಯತೆ, ಸರಳತೆ, ಸಮಭಾವ ತುಂಬಲು ಸತತವಾಗಿ ಹೆಣಗಾಡುತ್ತಾ ಬಂದಿರುವ ಸುತಾರರು ಬಹಳ ಉತ್ತಮವಾದ ಸಮಾಜ ನಿರ್ಮಾಣ ಮಾಡುವಂತ ಕನಸು ಕಂಡವರು ಮತ್ತು ಜೀವನ ಮೌಲ್ಯಗಳನ್ನು ಪ್ರೀತಿಸುವುದರ ಜೊತೆಗೆ ಉತ್ತಮ ಮಾರ್ಗದಲ್ಲಿ ನಡೆದು ಇತರರಿಗೆ ತೋರಿಸಿದವರು. ಆಧುನಿಕ ಯುಗದಲ್ಲಿ ಮೌಲ್ಯಗಳ ಬಗ್ಗೆ ಅಧಿಕೃತವಾಗಿ ಹೇಳುವ ಧೀರ ವ್ಯಕ್ತಿತ್ವ ಇಬ್ರಾಹಿಂ ಸುತಾರರದು ಎಂದು ಹೆಮ್ಮೆಯಿಂದ ಹೇಳಬೇಕು. ಆ ನಿಟ್ಟಿನಲ್ಲಿ ಉತ್ತಮ ಕೆಲಸಗಳನ್ನು ಮಾಡಲು ಸದಾ ಹವಣಿಸುವ ಇವರು ತಮ್ಮ ಕಲಾ ಪ್ರದರ್ಶನದಿಂದ ಬಂದ ದುಡ್ಡಿನಿಂದ ಉತ್ತಮವಾದ ರಸ್ತೆ ನಿರ್ಮಾಣ, ಶಾಲಾಕಟ್ಟಡ, ಕುಡಿಯುವ ನೀರಿನ ಟ್ಯಾಂಕಗಳನ್ನು ನಿರ್ಮಿಸುವದರ ಜೊತೆಗೆ ಸಮಾಜದ ಋಣವನ್ನು ತೀರಿಸುತ್ತ ಇತರರಿಗೆ ಮಾದರಿ ವ್ಯಕ್ತಿಗಳಾಗಿದ್ದಾರೆ.

೧೯೭೦ ರಿಂದ ಇಲ್ಲಿಯವರೆಗೆ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದನ್ನು ನೋಡಿದ ಹಲವಾರು ಸಂಘ ಸಂಸ್ಥೆಗಳು, ಮಠಾಧೀಶರು 'ಕನ್ನಡದ ಕಬೀರ', 'ಅಭಿನವ ಶರೀಫ' ನಾಟ್ಯ ಕೀರ್ತನ, ಬಸವತತ್ವಶ್ರೀ ಪ್ರವಚನ ಪ್ರವೀಣವೆಂಬ ಬಿರುದುಗಳನ್ನು ನೀಡಿ ಸತ್ಕರಿಸಿವೆ. ನಾಡಿನ ಆಕಾಶವಾಣಿ, ದೂರದರ್ಶನಗಳಲ್ಲಿಯೂ ಸಹ ಇವರ ಭಜನಾ ಹಾಡುಗಳು ಪ್ರಸಾರವಾಗಿವೆ. ಹಲವಾರು ಸಂವಾದ ಭಜನಾ ಹಾಡುಗಳ ಧ್ವನಿಸುರುಳಿ ಬಿಡುಗಡೆ ಗೊಳಿಸಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರದ ಸದಸ್ಯರಾಗಿ ಬಂದು ಅವರಿಗೆ ನೇಮಕಗೊಂಡು ಜಿಲ್ಲೆಗೂ ಕಲಾವಿದರ ಸೇವೆಯನ್ನು ಮಾಡಿದ್ದಾರೆ. ಇವರ ಸುದೀರ್ಘ ಕಲಾ ಸೇವೆಯನ್ನು ಅರಿತುಕೊಂಡು ಎಲ್ಲ ಪ್ರಶಸ್ತಿಗಳಿಗೆ ಕಳಸವಿಟ್ಟಂತೆ ಕರ್ನಾಟಕ ಸರ್ಕಾರ "ರಾಜ್ಯೋತ್ಸವ" ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಇಂತಹ ಪ್ರತಿಭಾನ್ವಿತ ಕಲಾವಿದರ ಸೇವೆ ಉತ್ತಮರಲ್ಲಿ ಉತ್ತಮ ಎಂಬಂತೆ ಇದ್ದು ಅವರಿಗೆ ಹೆಚ್ಚಿನ ಗೌರವ ಸಿಗಲೆಂಬುದು ಅವರ ಅಭಿಮಾನಿಗಳ ಬಯಕೆಯಾಗಿದೆ.

ಇಬ್ರಾಹಿಮ್ ನಬಿಸಾಬ ಸುತಾರ,
ಟಿಪ್ಪು ಸುಲ್ತಾನ್ ಮೊಹಲ್ಲಾ, ಮಹಾಲಿಂಗಪೂರ,
ತಾ.: ಮುಧೋಳ, ಜಿ : ಬಾಗಲಕೋಟೆ.

# ಪರಪ್ಪ ಸಲಬನ್ನವರ

ಜಾನಪದ ಸಾಹಿತ್ಯ, ಜಾನಪದ ಕಲೆಗಳು ನಶಿಸುತ್ತವೆಂದು ನಾವು ಬಹಳಷ್ಟು ಸಮಾರಂಭದಲ್ಲಿ ಕೇಳುತ್ತಾ ಬಂದಿದ್ದೇವೆ. ಜಾನಪದ ಸಾಹಿತ್ಯ ಹೇಗೆ ಹುಟ್ಟಿದೆ ಹಾಗೆ ಆ ಕಲೆ ಸಾಹಿತ್ಯವನ್ನು ಸಂರಕ್ಷಣೆ ಮಾಡಲು ನಾಡಿನ ಹಲವಾರು ಜನ ಕಲಾವಿದರು, ವಿದ್ವಾಂಸರು ಎಲೆ ಮರೆ ಕಾಯಿಯಂತೆ ಕೆಲಸ ಮಾಡುತ್ತಾ ಬಂದಿದ್ದಾರೆ. ಅಂಥವರಲ್ಲಿ ಹಿರಿಯ ಭಜನಾ ಹಾಡುಗಾರ ಪರಪ್ಪ ಸಲಬಣ್ಣವರ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಸಸಾಲಟ್ಟಿ ಗ್ರಾಮದಲ್ಲಿ ೧-೬-೧೯೩೨ರಲ್ಲಿ ಚನ್ನಪ್ಪ ಮತ್ತು ಗಂಗಮ್ಮಾ ಎಂಬ ದಂಪತಿಗಳ ಸುಪುತ್ರರಾಗಿ ಜನಿಸಿದರು. ಗ್ರಾಮೀಣ ಪ್ರದೇಶದಲ್ಲಿ ಜನಿಸಿದ ಕಾರಣ ಈ ಜಾನಪದ ಕಲೆಗಳು ಇವರನ್ನು ಬಹಳಷ್ಟು ಆಕರ್ಷಣೆ ಮಾಡಿದ ಕಾರಣ ಈ ಭಜನಾ ಹಾಡುಗಳನ್ನು ಹಾಡುವ ಗೀಳು ಬೆಳಸಿಕೊಂಡರು. ಬಡತನದಲ್ಲಿ ಹುಟ್ಟಿದ ಇವರಿಗೆ ಶಿಕ್ಷಣ ಪಡೆಯುವದು ಸಾಮಾನ್ಯ ಮಾತಾಗದ ಕಾರಣ ಶ್ರೀ ಸಿದ್ಧಲಿಂಗಯ್ಯ ಅಡೊಳ್ಳಿಯವರನ್ನು ಭಜನಾ ಹಾಡುಗಳನ್ನು ಕಲಿಸುವ ವಿದ್ಯಾ ಗುರುಗಳನ್ನಾಗಿ ಮಾಡಿಕೊಂಡು, ಈ ಹಾಡುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಪರಿಪೂರ್ಣ ಕಲಾವಿದರಾಗಲೂ ಪ್ರಯತ್ನಿಸಿದರು. ಗುರುಗಳ ಮಾರ್ಗದರ್ಶನದಲ್ಲಿ ಪುರಂದರದಾಸರ, ಸಂತ ಶಿಶುನಾಳ ಶರೀಫರ ಪದಗಳನ್ನು ಕಲಿತು ಅವುಗಳನ್ನು ಸುಶ್ರಾವ್ಯವಾಗಿ ಹಾಡಲು ಕಲಿತುಕೊಂಡರು.

ಶ್ರೀ ಶಿವಲಿಂಗೇಶ್ವರ ಭಜನಾ ಮಂಡಳಿ ಸಸಾಲಟ್ಟಿ ಎಂಬ ಸಂಘ ಕಟ್ಟಿಕೊಂಡು ಈ ಸಂಘದ ಮೂಲಕ ನಾಡಿನ ತುಂಬೆಲ್ಲ ಸುತ್ತಾಡಿ ವಿವಿಧ ನಗರಗಳಲ್ಲಿ ಹಾಡುಗಾರಿಕೆ ಮಾಡಿದ್ದಾರೆ. ಇವರ ತಂಡದಲ್ಲಿ ಮುತ್ತಪ್ಪ ಹಾಲೊಳ್ಳಿ, ರಾಮಪ್ಪ ಪೂಜೇರಿ, ರಾಮಯ್ಯ ಮಠಪತಿ, ಮಹಾದೇವ ಮುರನಾಳ, ಮಲ್ಲಪ್ಪ ಮುರನಾಳ ಎಂಬ ಯುವಕರನ್ನು

ತಂಡದಲ್ಲಿ ಮೇಳೈಸಿಕೊಂಡು ಅವರಿಗೆ ಮಾರ್ಗದರ್ಶನ ನೀಡುತ್ತಾ ಅವರ ಉತ್ತಮ ಸಹಕಾರದಿಂದ ನಾಡಿನ ತುಂಬೆಲ್ಲ ಹೆಸರು ಮಾಡಿದ್ದಾರೆ. "ಸಾಧಿಸಿದ್ದು ಕಡಿಮೆ ಸಾಧಿಸಬೇಕಾದದ್ದು ಬಹಳ" ಎಂಬ ತತ್ವದಲ್ಲಿ ಬಹಳಷ್ಟು ಕಲಾ ಸೇವೆಮಾಡಬೇಕೆಂದು ಉತ್ಸಾಹ ಹೊಂದಿದ ಪರಪ್ಪನವರ ಆಸೆಗೆ ಹಲವಾರು ಸಂಘ ಸಂಸ್ಥೆಗಳು ಪ್ರೋತ್ಸಾಹಿಸಿ ಈ ಕಲೆಯ ಬೆಳವಣಿಗೆಗೆ ಸಹಕರಿಸುತ್ತಾರೆಂದು ವಿನಮ್ರವಾಗಿ ಹೇಳುವ ಪರಪ್ಪ ಬಹಳಷ್ಟು ಕನಸು ಹೊಂದಿದಂತೆ ಕಾಣುತ್ತದೆ. ಆ ಕನಸು ನನಸು ಮಾಡುವ ಶಕ್ತಿ ಅವರ ತಂಢದ ಎಲ್ಲ ಸದಸ್ಯರಲ್ಲಿದೆ. ಆ ನಿಟ್ಟಿನಲ್ಲಿ ಕೆಲಸ ಮಾಡುವ ಶಕ್ತಿ ಅವರಿಗೆ ಬರಲೆಂದು ಕಲಾವಿದರ ಆಸೆಯಾಗಿದೆ. ಈ ಕಲಾವಿದನ ಶ್ರಮಕ್ಕೆ ಪ್ರತಿಫಲವೆನ್ನುವಂತೆ ಹಲವಾರು ಸಂಘ ಸಂಸ್ಥೆಗಳು ಕರೆದು ಸನ್ಮಾನಿಸಿ ಇನ್ನಷ್ಟು ಕಲಾಸೇವೆ ಮಾಡಲು ಪ್ರೋತ್ಸಾಹಿಸಿವೆ.

ಪರಪ್ಪ ಸಲಬನ್ನವರ,<br>ಸಾ : ಸಸಾಲಟ್ಟಿ,<br>ತಾ : ಜಮಖಂಡಿ, ಜಿ : ಬಾಗಲಕೋಟೆ.

# ಬಸಗೌಡ ಶಿವನಗೌಡ ನ್ಯಾಮಗೌಡರ

ಧರ್ಮರು ಬಂದಾರೋ ಧರೆಗೆ ಹಿರಿಯರೆಂದು
ಮರ್ಮ ಬಲ್ಲವರು ಹೇಳಿರೆಲ್ಲಾ
ಸಿದ್ಧರಾಮೇಶ್ವರರು ಬಂದು
ಬಬಲಾದಿ ಮಠದೊಳಗೆ
ಮೇಕ ಮುಂಗಲಿ ಕಟ್ಟಿ ಮೆರೆಯುತಾರಣ್ಣ

ಎಂಬ ಮುಂಡಗಿ ಪದಗಳನ್ನು ಹಾಡಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುಉವ ಕಲೆ ಬಸಗೌಡ ನ್ಯಾಮಗೌಡರಿಗೆ ಇತ್ತು. ಇವರು ಮೂಲತಃ ಜಮಖಂಡಿ ತಾಲೂಕಿನ ಚಿಕ್ಕ ಪಡಸಲಗಿಯಲ್ಲಿ ತಂದೆ ಶಿವಗೌಡ ತಾಯಿ ಪಾರ್ವತಿ ಎಂಬ ದಂಪತಿಗಳ ಉದರದಲ್ಲಿ ಹುಟ್ಟಿದರು. ಈ ಭಾಗದ ಭಾವೈಕ್ಯತಾ ಕೇಂದ್ರವಾದ ಬಬಲಾದಿ ಶ್ರೀಕ್ಷೇತ್ರದ ಮುಂಡಗಿ ಪದವನ್ನು ಹಾಡುವದನ್ನು ಕಲಿತುಕೊಂಡರು. ೭ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಇವರು ಚಿಕ್ಕಪಡಸಲಗಿಯ ಶ್ರೀ ಶಂಕ್ರಯ್ಯ ಬಬಲಾದಿಮಠ ಇವರನ್ನು ಗುರುಗಳನ್ನಾಗಿ ಮಾಡಿಕೊಂಡು ತತ್ವಪದ, ಮುಂಡಗಿಪದ, ಭಜನೆ ಹಾಡುಗಳನ್ನು ಕಲಿತುಕೊಂಡರು. ಇವರ ಹಾಡುಗಾರಿಕೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಹಾಗೂ ಮಠಾಧೀಶರು ಸನ್ಮಾನಿಸಿ ಪುರಸ್ಕರಿಸಿವೆ.

ಇವರ ತಂಡದಲ್ಲಿ ಚನ್ನಪ್ಪ ನ್ಯಾಮಗೌಡ ಬಸಗೊಂಡ ದಾನಗೌಡ್ರ, ಚನಬಸಯ್ಯ ಮಠಪತಿ, ಭೀಮಪ್ಪ ನ್ಯಾಮಗೌಡ್ರ ಈ ಕಲಾವಿದರೆಲ್ಲ ಹಿಮ್ಮ್ಯಾಳ ಕಲಾವಿದರಾಗಿ ಸಾತ ನೀಡುತ್ತಿದ್ದರು. ವೃತ್ತಿಯಿಂದ ಒಕ್ಕಲುತನವನ್ನೇ ನಂಬಿ ಬದುಕಿದ ಇವರು ಪ್ರವೃತ್ತಿಯಿಂದ ಕಲಾವಿದರಾಗಿ ಕಲಾಮ್ಯಾಳ ಕಟ್ಟಿ ಕಲಾ ಪರಂಪರೆಗೆ ಅಡಿಪಾಯ ಹಾಡಿದ್ದಾರೆ. ಇವರ ಸ್ವ ಪ್ರಯತ್ನದ ಫಲವಾಗಿ ಇವರ ಹಾಡುಗಳು ಆಕಾಶವಾಣಿ ಧಾರವಾಡ, ಬಿಜಾಪೂರ

ನಿಲಯದಿಂದ ಪ್ರಸಾರಗೊಂಡಿವೆ. ಬಹುಮುಖ ಕಲೆಯನ್ನು ಹೊಂದಿದ ಇವರು ಈ ಕಲೆ ನಶಿಸಬಾರದೆಂಬ ಮಹತ್ವಾಕಾಂಕ್ಷೆಯಿಂದ ತಮ್ಮ ಮಗನಾದ ಸದಾಶಿವನಿಗೆ ಉತ್ತರ ಕರ್ನಾಟಕ ಪ್ರಸಿದ್ಧ ಕಲೆಯಾದ ಕರಡಿ ಮಜಲುಗಳಲ್ಲಿ ದಿಮ್ಮ ಬಾರಿಸುವುದನ್ನು ಕಲಿಯಲು ಪ್ರೋತ್ಸಾಹ ನೀಡುವುದರ ಜೊತೆಗೆ ಭಜನಾ ಹಾಡುಗಳನ್ನು ಹೇಳಿ ಕಲಿಸಿದ್ದಾರೆ. ಶ್ರೀ ಸದಾಶಿವ ಭಜನಾ ಮೇಳ ಚಿಕ್ಕಪಡಸಲಗಿ ಎಂಬ ತಂಡ ಕಟ್ಟಿ ಆ ಸಂಘದ ಮೂಲಕ ನಾಡಿನ ಉದ್ದಗಲಕ್ಕೂ ಹಲವಾರು ಕಾರ್ಯಕ್ರಮಗಳನ್ನು ನೀಡಿ ಕಲಾರಸಿಕರ ಪ್ರೀತಿಗೆ ಪಾತ್ರರಾಗಿದ್ದಾರೆ. ಹಲವಾರು ಎಡರು ತೊಡರುಗಳು ಬಂದರು ಎದೆಗುಂದದೆ ಕಲಾ ಜೀವನದಲ್ಲಿ ಮುನ್ನುಗ್ಗಿದ್ದಾರೆ. ಅವರ ತಂದೆಯವರ ಆಸೆಯಂತೆ, ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಅವರ ಮಕ್ಕಳು ಕಲಾ ತಂಡ ಕಟ್ಟಿ ಕಲೆಗಾಗಿ ತಮ್ಮ ಜೀವನ ಸವೆಸುತ್ತಿದ್ದಾರೆ.

ಬಸಗೌಡ ಶಿ. ನ್ಯಾಮಗೌಡರ,
ಸಾ : ಚಿಕ್ಕ ಹಂಚಿನಾಳ,
ತಾ : ಜಮಖಂಡಿ, ಜಿ : ಬಾಗಲಕೋಟೆ.

# ಶ್ರೀಶೈಲಯ್ಯ ನಿಂಗಯ್ಯ ಮರೆಗುದ್ದಿ

ಕಂಬಿಹಾಡು, ವೀರಗಾಸೆ, ಜಾನಪದ ಕತೆ, ಹಂತಿಪದ, ಕರ್ಬಲಾಪದ, ಭಜನೆ ಎಲ್ಲ ಪ್ರಕಾರದ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ವಿಶೇಷ ಪರಿಣತಿ ಪಡೆದ ಶ್ರೀಶೈಲಯ್ಯ ಮರೆಗುದ್ದಿ ಇವರು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಬುದ್ನಿ ಪಿ.ಎಂ. ಎಂಬ ಪುಟ್ಟ ಗ್ರಾಮದ ತಂದೆ ನಿಂಗಯ್ಯ, ತಾಯಿ ಗಂಗವ್ವ ಎಂಬ ಶರಣ ದಂಪತಿಗಳ ಉದರದಲ್ಲಿ ೧೯-೯-೧೯೪೩ರಲ್ಲಿ ಜನಿಸಿದರು. ಪ್ರಾಥಮಿಕ ಶಾಲೆಯ ೫ನೆಯ ತರಗತಿಯವರೆಗೆ ಶಿಕ್ಷಣಪಡೆದು ಮರೆಗುದ್ದಿ ಶ್ರೀ ಅಡವಿಮಠದ ಶ್ರೀ ಮ. ನಿ. ಪ್ರ. ನಿರುಪಾದೀಶ್ವರ ಮಹಾಸ್ವಾಮಿಗಳನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಕಲಾ ಜೀವನಕ್ಕೆ ಕಾಲಿಟ್ಟರು. ತಾತ ಮುತ್ತಾತರಿಂದ ಬಂದ ಕಲೆಯನ್ನು ಮುಂದುವರಿಸುವದರ ಜೊತೆಗೆ ಈ ಕಲೆಗಾಗಿ ವಿಶೇಷ ಆಸಕ್ತಿ ತೋರಿ ಕಲಾ ಬಳಗವನ್ನು ಬೆಳೆಸುವದರ ಜೊತೆಗೆ ಸಾಂಸ್ಕೃತಿಕವಾದ ವಾತಾವರಣ ಮೂಡಿಸಿದರು.

ಕಲೆ ಯಾರ ಸೊತ್ತು ಅಲ್ಲಾ, ಆ ಕಲೆಯ ಬಗ್ಗೆ ಅಭಿಮಾನಬೇಕು ಅಂದರೆ ಮಾತ್ರ ಈ ಕಲೆ ಬೆಳೆಯುತ್ತದೆ ಎಂದು ಹೆಮ್ಮೆಯಿಂದ ಹೇಳುವ. ೬೫ ಪ್ರಾಯದ ಶ್ರೀ ಶೈಲಯ್ಯನವರ ನುಡಿಕೇಳಿ ಸಂತೋಷಪಡದವರು ಈ ಭಾಗದಲ್ಲಿ ಇಲ್ಲಾ. ವೃತ್ತಿಯಿಂದ ಕೃಷಿಕರಾದರೂ, ಪ್ರವೃತ್ತಿಯಿಂದ ಬಹುಮುಖಹೊಂದಿದ ಕಲಾವಿದರಾಗಿ ಕಲಾಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸ್ವತಃ ಹಾರ್ಮೋನಿಯಂ ವಾದಕರಾದ ಶ್ರೀಯುತರು. ಡವಳೇಶ್ವರ, ಹಂಗರಗಿ, ಕೋಲ್ಹಾರ, ಕಡಕೋಳ, ಶಿರೋಳ ಬುದ್ನಿ, ಮರೆಗುದ್ದಿ ಸೊಲ್ಲಾಪೂರಗಳಲ್ಲಿ ಭಜನಾ ತಂಡಗಳಿಗೆ ನಿರ್ದೇಶನ ನೀಡಿ ಹಾಡುವುದನ್ನು ಹಾರ್ಮೋನಿಯಂ ನುಡಿಸುವುದನ್ನು ಕಲಿಸಿಕೊಟ್ಟು ಶಿಷ್ಯ ಬಳಗದ ಪ್ರೀತಿಗೆ ಪಾತ್ರರಾಗುವುದಲ್ಲದೆ, ಈ ಜಾನಪದ ಕಲೆ ಉಳಿವಿಗೆ ಸಾರ್ಥಕ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ವಿಶಿಷ್ಟ ಕಲಾವಿದರಾದ ಶ್ರೀಯುತರಿಗೆ ಇವರ ಅಖಂಡ ಕಲಾ ಸೇವೆಯನ್ನು

ಕಂಡು ಹಲವಾರು ಮಠಾಧೀಶರು ಮತ್ತು ಸಂಘ ಸಂಸ್ಥೆಗಳನ್ನು ಸನ್ಮಾನಿಸಿ ಪುರಸ್ಕರಿಸಿವೆ. ಇಷ್ಟೆಲ್ಲಾ ಸೇವೆ ಮಾಡಿದರು. ಸರ್ಕಾರದಿಂದ ದೊರೆಯುವ ಯಾವುದೇ ಉಪಯೋಗವನ್ನು ಪಡೆದುಕೊಳ್ಳದ ನಿರಾಸೆ ಇವರಲ್ಲಿ ಎದ್ದುಕಾಣುತ್ತದೆ. ಇಂತಹ ಪ್ರತಿಭಾನ್ವಿತ ಕಲಾವಿದರಿಗೆ ಸರಿಯಾದ ಮಾನ ಮರ್ಯಾದೆ ಸಿಗಬೇಕೆನ್ನುತ್ತಾರೆ ಅವರ ಶಿಷ್ಯ ಬಳಗ.

**ಶೈಲಯ್ಯ ನಿಂ. ಮರೆಗುದ್ದಿ,**
**ಸಾ : ಬುದ್ನಿ ಪಿ.ಎಂ.,**
**ತಾ : ಮುಧೋಳ, ಜಿ : ಬಾಗಲಕೋಟೆ.**

## ಸದಾಶಿವ ಸಂಗಪ್ಪ ಯತ್ನಾಳ

ಕಲೆ ಎನ್ನುವದು ಎಲ್ಲರಿಗೂ ದೊರೆಯುವದು ಅಲ್ಲ ಅಂತ ದೊರೆಯದ ಕಲೆಯನ್ನು ಕರತಲಾಮಲಕ ಮಾಡಿಕೊಂಡವರು ಸದಾಶಿವ ಯತ್ನಾಳ ಅವರು. ತಂದೆ ಸಂಗಪ್ಪ, ತಾಯಿ ಶಿಸಮ್ಮ ಎಂಬ ದಂಪತಿಗಳ ಉದರದಲ್ಲಿ ೨೧-೪-೧೯೪೧ರಲ್ಲಿ ಹಿರೇಪಡಸಲಗಿಯಲ್ಲಿ ಜನಿಸಿದರು.

ಬೆಳಯುವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ತಮ್ಮ ಎಳೆಯ ವಯಸ್ಸಿನಲ್ಲಿಯೇ ಹಾಡುಗಾರಿಕೆಯನ್ನು ಕಲಿತರು. ಹಿರೇಪಡಸಲಗಿ ಗ್ರಾಮದ ಶ್ರೀ ಸಾಹದೇವ ಗಂಗಪ್ಪ ಕಂಕನವಾಡಿ ಇವರನ್ನು ಗುರುಗಳನ್ನಾಗಿ ಮಾಡಿಕೊಂಡು ಭಜನೆ ಹಾಡುವದನ್ನು ಹಾರ್ಮೋನಿಯಂ ನುಡಿಸುವದನ್ನು ಕಲಿತುಕೊಂಡು ತಾವೆ ಕಲಿತು ತೃಪ್ತಿ ಪಡೆದ ಇವರು ಶ್ರೀ ಸಂಗಮೇಶ್ವರ ಭಜನಾ ಮಂಡಳಿ, ಹಿರೇಪಡಸಲಗಿ ಎಂಬ ಸಂಘ ಸ್ಥಾಪನೆ ಮಾಡಿ ನಾಡಿನ ವಿವಿಧ ಪಟ್ಟಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಕಲೆಯನ್ನು ಪ್ರದರ್ಶನ ಮಾಡಿದ್ದಾರೆ.

ಜನಪದ ಕಲೆ ಉಳಿಯಬೇಕು ಮತ್ತು ಬೆಳೆಯಬೇಕೆಂಬ ಬಯಕೆ ಹೊಂದಿ ಶ್ರೀಯುತರು ನಾಡಿನ ಹಲವಾರು ರಾಷ್ಟ್ರೀಯ ಉತ್ಸವಗಳಾದ ಚಾಲುಕ್ಯ ಉತ್ಸವ, ನವರಸಪುರ ಉತ್ಸವ, ಜಾನಪದ ಜಾತ್ರೆ ಮುಂತಾದೆಡೆಗೆ ಕಾರ್ಯಕ್ರಮ ನೀಡಿ ಪ್ರೇಕ್ಷಕರಿಂದ ಅಪಾರ ಗೌರವಕ್ಕೆ ಪಾತ್ರರಾಗಿದ್ದಾರೆ. ಇದು ಅಲ್ಲದೆ, ಆಕಾಶವಾಣಿ, ಧಾರವಾಡ ಹಾಗೂ ಆಕಾಶವಾಣಿ ಬಿಜಾಪೂರದಿಂದ ಇವರ ಭಜನಾ ಕಾರ್ಯಕ್ರಮಗಳು ಹಲವಾರು ಸಲ ಪ್ರಸಾರಗೊಂಡು ಈ ಕ್ಷೇತ್ರದಲ್ಲಿ ಇನ್ನಷ್ಟು ಕೆಲಸ ಮಾಡಲು ಹುರುಪು ತುಂಬಿವೆ. ಕೇವಲ ಆಕಾಶವಾಣಿಯಲ್ಲಿ ಇವರ ಕಾರ್ಯಕ್ರಮ ಪ್ರಸಾರಗೊಳ್ಳದೆ ಚಂದನ ದೂರದರ್ಶನ ದಲ್ಲಿಯೂ ಸಹ ಹಲವಾರು ಸಲ ಇವರ ಹಾಡುಗಾರಿಕೆಯನ್ನು, ಇವರ ತಂಡದ

ಹಾಡುಗಳನ್ನು ನೋಡಿಯೇ ಸಂತೃಪ್ತಿ ಪಡೆಯಬೇಕು. ಇಂತಹ ಪ್ರಬುದ್ಧ ಕಲಾವಿದನಿಗೆ ಸರ್ಕಾರದಿಂದ ದೊರೆಯುವ ಯಾವದೇ ಸೌಲಭ್ಯಗಳು ದೊರೆತಿರುವುದಿಲ್ಲವೆಂಬ ಕೊರಗು ಇವರಲ್ಲಿದೆ. ಅಖಂಡ ೪೦ ವರ್ಷ ಕಲಾಸೇವೆಯನ್ನು ಗುರುಸಿಬೇಕೆಂಬ ಹಂಬಲ ಅವರದಾಗಿದೆ. ಈಗ ತಂಡದಲ್ಲಿರುವ ಕಲಾವಿದರ ಮಾಹಿತಿ.

| | |
|---|---|
| ನಾಗರಾಜ ಯತ್ನಾಳ – ಹಾಡುಗಾರಿಕೆ | ಗಣಪತಿ ಕಂಕನವಾಡಿ – ಹಾಡುಗಾರಿಕೆ |
| ಸದಾಶಿವ ಯತ್ನಾಳ – ಹಾರ್ಮೋನಿಯಂ | ಪ್ರಭು ಆಲಗೂರ – ತಬಲ |
| ದರಿಯಪ್ಪ ಕುಂಬಾರ – ತಾಳ | ದತ್ತು ಕಂಕನವಾಡಿ – ತಾಳ |

ಹೀಗೆ ಸುಸಜ್ಜಿತವಾದ ತಂಡ ಕಟ್ಟಿ ಉತ್ತಮವಾದಂತಹ ಕಲಾಸೇವೆಯನ್ನು ನಾಡಿಗೆ ನೀಡಿ ನೋಡುಗರನ್ನು ಖುಷಿಪಡಿಸಿ ತಾವು ಖುಷಿಪಡುತ್ತಾ ಈ ಕಲೆಯ ಉನ್ನತಿಗಾಗಿ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ.

**ಸದಾಶಿವ ಸಂಗಪ್ಪ ಯತ್ನಾಳ,**
**ಸಾ : ಹಿರೇ ಪಡಸಲಗಿ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

## ಮಲ್ಲಪ್ಪ ಗು. ಬಳಮಟ್ಟಿ

ಉತ್ತರ ಕರ್ನಾಟಕ ಜಾನಪದ ಕಲೆಗಳ ಗಂಡ ಮೆಟ್ಟು ಕಲಾ ಪ್ರಕಾರಗಳಲ್ಲಿ ಹಲವು ವಿಧಗಳಿವೆ. ಆ ಪ್ರಕಾರಗಳಲ್ಲಿ ಭಜನೆಯೂ ಒಂದು ವಿಶೇಷ ಜಾನಪದ ಕಲಾ ಪ್ರಕಾರ. ಆ ಭಜನಾ ಹಾಡುಗಳನ್ನು ಕರಗತಮಾಡಿಕೊಂಡು ಹಾಡಿ ಹೇಳಿ ಜನರನ್ನು ಖುಷಿಪಡಿಸುವ ಕಲೆಯನ್ನು ಹೊಂದಿದವರು ಜಮಖಂಡಿ ತಾಲೂಕಿನ ಬುದ್ನಿ ಗ್ರಾಮದ ಮಲ್ಲಪ್ಪ ಬಳಮಟ್ಟಿ ಇವರು.

ಜಮಖಂಡಿ ತಾಲೂಕಿನ ಲಿಂಗಸೂರ ಗ್ರಾಮದ ಗುರಪ್ಪ ಶೆಂಕ್ರೆವ್ವ ಎಂಬ ದಂಪತಿಗಳಿಗೆ ೧೯೪೨ರಲ್ಲಿ ಜನಿಸಿದರು. ಇವರು ಬಡಕುಟುಂಬದಲ್ಲಿ ಬೆಳೆದರು. ಆದರೆ ಶಿಕ್ಷಣ ಮಾತ್ರ ಪೂರ್ಣಗೊಳಿಸದೇ ಈ ಸಂಗೀತ ಶಾರದೆಯನ್ನು ಮೊರೆಹೊಕ್ಕು ಶ್ರೀ ಬಸವರಾಜ ಕೀರ್ತನ ಕೇಸರಿ ಮಹಾರಾಜರು ಹುಬ್ಬಳ್ಳಿ ಇವರ ಹತ್ತಿರ ಸುಮಾರು ೫ ವರ್ಷಗಳ ಕಾಲ ಸೇವೆ ಮಾಡಿ ಹಾರ್ಮೋನಿಯಂ ನುಡಿಸುವುದನ್ನು ಹಾಗೂ ಭಜನಾ ಹಾಡುಗಳನ್ನು ಲಯಬದ್ಧವಾಗಿ ಹಾಡುವುದನ್ನು ಕರಗತಮಾಡಿಕೊಂಡರು. ಹಾಡುಗಾರಿಕೆಯಲ್ಲಿ ವಿಶೇಷ ಪರಿಣಿತಿಯನ್ನು ಪಡೆದ ಇವರು ನಾಡಿನ ತುಂಬೆಲ್ಲ ತಮ್ಮ ಕಲಾಸೇವೆಯನ್ನು ನೀಡಿ ಪ್ರಸಿದ್ಧರಾಗಿದ್ದಾರೆ.

ತನು-ಮನ-ಧನವೆಂಬ ಮೂರು ಕನ್ನಡಿ ನೋಡಯ್ಯ
ಎನ್ನದೂ ಅಲ್ಲ ನಿನ್ನದೂ ಅಲ್ಲ
ಬರಿಯ ಭ್ರಮೆಯ ಮಾತು
ಆ ಭ್ರಮೆಯೊಳಗಾಗೆ ನಿಮ್ಮ ಶ್ರೀಚರಣವ ಬಿಡೆ
ಕೂಡಲಸಂಗಮದೇವ

ಎಂಬ ವಚನವನ್ನು ಅವರ ಕಂಠಮಾಧುರ್ಯದಿಂದಲೇ ಕೇಳಿ ಆನಂದಿಸಬೇಕು. ಇಂತಹ

ಅದ್ಭುತ ಶಕ್ತಿ ಹೊಂದಿದ ಇವರು ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಈ ಭಜನಾ ಕಲೆ ನಶಿಸಬಾರದು ಮುಂದಿನ ಪೀಳಿಗೆಗೆ ಈ ಕಲೆಯ ಮಹತ್ವ ತಿಳಿಯಲಿ ಎಂಬ ಮಹತ್ವಾಕಾಂಕ್ಷೆಯಿಂದ ಹಲವಾರು ಯುವ ಕಲಾವಿದರಿಗೆ ತರಬೇತಿ ಗೊಳಿಸಿ ಮೆಳ್ಳಿಗೇರಿ, ಕಾಡರಕೊಪ್ಪ, ಅಮ್ಮಲಝುರಿ, ರಬಕವಿ, ಕಡಕೋಳ, ಬುದ್ನಿ, ಬಬಲಾದಿ ಗ್ರಾಮಗಳಲ್ಲಿ ಭಜನಾ ತಂಡಗಳನ್ನು ಸಂಘಟನೆ ಮಾಡಿದ್ದಾರೆ. ಈ ಭಜನಾ ಕಲೆಯೊಂದಿಗೆ ಬೈಲಾಟಗಳಾದ ಸತ್ಯ ಹರಿಶ್ಚಂದ್ರ ಹಾಗೂ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸತಿಸಕ್ಕುಬಾಯಿ, ಹೀಗೆ ಹಲವಾರು ಕಂಪನಿಗಳಲ್ಲಿ ಹಾರ್ಮೋನಿಯಂ ಗುರುಗಳಾಗಿ ಸೇವೆಸಲ್ಲಿಸುತ್ತಿದ್ದಾರೆ. ಇವರ ಕಂಠ ಸಿರಿಮಂತಿಕೆಯನ್ನು ಕಂಡು ಹಲವಾರು ಧ್ವನಿಸುರುಳಿ ಕಂಪನಿಗಳು ಬಂದು ಎರಡು ಧ್ವನಿಸುರುಳೆಗಳನ್ನು ಮುದ್ರಿಸಿ, ಬಿಡುಗಡೆಗೊಳಿಸಿ ನಾಡಿನ ತುಂಬೆಲ್ಲ ಪ್ರಸಾರ ಮಾಡಿದ್ದಾರೆ. ಸುಮಾರು ೪೦೦ ಹಾಡುಗಳನ್ನು ಹಾಡುವಷ್ಟು ಶಕ್ತಿ ಹೊಂದಿದ ಇವರ ಕಲೆಯನ್ನು ಕಂಡು, ನಾವಲಗಿ ಸಮೀರವಾಡಿ, ಸಂತಿ ಊರು, ಬುದ್ನಿ ಗ್ರಾಮಗಳಲ್ಲಿ ಸನ್ಮಾನಿಸಿದ್ದಾರೆ. ಈ ಕಲಾವಿದನಿಗೆ ಕರ್ನಾಟಕ ಸರ್ಕಾರದಿಂದ ದೊರೆಯುವ ಕಲಾವಿದರ ಮಾಸಾಶನ ದೊರೆಯುತ್ತದೆ. ಇದ್ದುದರಲ್ಲಿಯೇ ಸಂತೃಪ್ತಿ ಜೀವನ ನಡೆಸುತ್ತಿದ್ದಾರೆ.

ಮಲ್ಲಪ್ಪ ಗುರಪ್ಪ ಬಳಮಟ್ಟಿ,
ಸಾ : ಬುದ್ನಿ, ಪೋ : ಹುಣಸಿಕಟ್ಟಿ,
ತಾ : ಜಮಖಂಡಿ, ಜಿ : ಬಾಗಲಕೋಟೆ.

# ಗುರುರಾಜ ಕೆಂದೂಳಿ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ರಬಕವಿಯ ಗುರುರಾಜ ಕೆಂದೂಳಿಯವರು ತಂದೆ ಮಡಿವಾಳಪ್ಪ, ತಾಯಿ ಬಸಮ್ಮ ದಂಪತಿಗಳ ಉದರದಲ್ಲಿ ಜನಿಸಿದರು. ಮಧ್ಯಮವರ್ಗದಲ್ಲಿ ಜನಿಸಿದ ಶ್ರೀಯುತರು ಸ್ವ ಪರಿಶ್ರಮದಿಂದ ಬಿ.ಎ.ವರೆಗೆ ಅಭ್ಯಾಸ ಮಾಡಿ ನೌಕರಿಯು ದೊರಕದ್ದಕ್ಕೆ  ಹೊಲಿಗೆಯ ಉದ್ಯೋಗವನ್ನು ಆಯ್ಕೆ ಮಾಡಿಕೊಂಡು ೧೯೭೬ರ ಸುಮಾರಿಗೆ ರಬಕವಿ ಪಟ್ಟಣದಲ್ಲಿ ಬಂದು ವೃತ್ತಿಯನ್ನು ಪ್ರಾರಂಭಿಸಿದರು. ಸಂಗೀತದ ಗೀಳು ಹುಟ್ಟಿನಿಂದಲೆ ಮೈಗೂಡಿಸಿಕೊಂಡಿರುವ ಇವರು ಬಿಜಾಪೂರದ ತಿಟೆ ಗುರುಗಳ ಹತ್ತಿರ ಸಂಗೀತ ಅಭ್ಯಾಸಮಾಡಿದರು. ವೃತ್ತಿ ಬೇರೆಯಾದರೂ ಪ್ರವೃತ್ತಿಯಿಂದ ಒಳ್ಳೆಯ ಹಾಡುಗಾರರಾಗಿ ರೂಪ ತಾಳತೊಡಗಿದರು. ಇವರ ಸತತ ಪ್ರಯತ್ನದ ಫಲವಾಗಿ ೧೯೭೮ರಲ್ಲಿ ಆಕಾಶವಾಣಿ ಧಾರವಾಡದ ಧ್ವನಿ ಪರೀಕ್ಷೆಯಲ್ಲಿ ಪಾಸಾಗಿ ಆಕಾಶವಾಣಿ ಕಲಾವಿದರೆಂದು ಗುರುತಿಸಿಕೊಂಡರು. 'ಕೆಂದೂಳಿ ಜನಪದ ಮಂಡಳಿ' ಎಂಬ ಸಂಘ ಕಟ್ಟಿ ಆ ಸಂಘದ ಮೂಲಕ ಹೆಸರು ಮಾಡಿದವರು ಕೆಂದೂಳಿಯವರು. ನೆಹರು ಯುವ ವಿಕಾಸ ಕೇಂದ್ರ ಬಿಜಾಪೂರ, ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಭಾಗವಹಿಸಿ ಹೆಸರು ಮಾಡಿದವರು. ಜನಗೀತೆ, ಭಕ್ತಿಗೀತೆಗಳನ್ನು ಭಾವತುಂಬಿ ಹಾಡಿ ಹೆಸರು ಮಾಡಿ ಸುಮಾರು ೧೪ ಭಕ್ತಿಗೀತೆಗಳ ಧ್ವನಿಸುರುಳಿಗಳಿಗೆ, ೧೨ ಜಾನಪದ ಧ್ವನಿ ಸುರುಳಿಗಳಿಗೆ ಧ್ವನಿ ನೀಡಿ ಧ್ವನಿ ಸುರುಳೆಗಳನ್ನು ಬಿಡುಗಡೆ ಗೊಳಿಸಿದ್ದಾರೆ. ಇನ್ನೂ ಹಲವಾರು ಧ್ವನಿ ಸುರುಳೆಗಳು ಬಂದಿದ್ದರೂ ಕೇವಲ ಇವುಗಳು ಮಾತ್ರ ಹೆಚ್ಚು ಜನರನ್ನು ಮುಟ್ಟುವಲ್ಲಿ ಯಶಸ್ಸು ಕಂಡಿವೆ ಎನ್ನುತ್ತಾರೆ ಗುರುರಾಜ ಕೆಂಧೂಳಿ.

ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಇವರು ಹಾಡುಗಾರಲ್ಲದೆ ಸ್ವತಃ ಜಾನಪದ ಹಾಡುಗಳನ್ನು ರಚಿಸಿ ಅವುಗಳನ್ನು ಭಾವ ತುಂಬಿ ಹಾಡಿ ಪ್ರೇಕ್ಷಕರನ್ನು ಸಂತೋಷದ

ಸಾಗರದಲ್ಲಿ ತೇಲುವಂತೆ ಮಾಡುವ ಕಲೆ ಇವರಲ್ಲಿದೆ. ಸುಮಾರು ನಾಲ್ಕೈದು ದಶಕಗಳಲ್ಲಿ ಎಡೆ ಬಿಡದೆ ಸಂಘಟನೆಯಲ್ಲಿ ತೊಡಗಿಕೊಂಡು ಉತ್ತಮ ಸೇವೆಯನ್ನು ಜನರಿಗೆ ದೊರಕಿಸುವದು ಸಾಮಾನ್ಯ ಮಾತಲ್ಲ. ಎಷ್ಟೆ ಕಷ್ಟ ಬಂದರು ಎದೆಗುಂದದೆ ಮುನ್ನುಗ್ಗಿ ಜಯ ಸಾಧಿಸುವ ಛಲ ಗುರುರಾಜ ಕೆಂಧೂಳಿಯವರದು.

ಸೌಮ್ಯ ಸ್ವಭಾವದ ಮೃದು ಶೈಲಿಯ ಗುರುರಾಜ ಅವರ ಹಾಡುಗಾರಿಕೆಯನ್ನು ಕೇಳದ ಜನ ಈ ಭಾಗದಲ್ಲಿ ಯಾರು ಇಲ್ಲ. ಇಂತಹ ಪ್ರತಿಭಾನ್ವಿತ ಕಲಾಕಾರನ ಕಲೆಯನ್ನು ಕಂಡು ಇನ್ನೂ ಹೆಚ್ಚಿಗೆ ಕಾರ್ಯಮಾಡಲಿ ಎಂದು ಪ್ರೋತ್ಸಾಹಿಸಿದ ಸಂಘ ಸಂಸ್ಥೆಗಳು ಹಲವಾರು ಆರಕ್ಷಣೆಯು ನನ್ನನ್ನು ಮುಂದೆ ಒಯ್ಯುತ್ತಿದೆ ಎನುತ್ತಾರೆ ಗುರುರಾಜ. ಸಾವಿರ ಹಾಡಿನ ಸರದಾರ ದಿ|| ಬಾಳಪ್ಪ ಹುಕ್ಕೇರಿಯವರಂತೆ ಹಿರಿಯ ಕಲಾವಿದರು ಇವರಿಗೆ 'ಜಾನಪದ ಕೋಗಿಲೆ' ಎಂದು ಬಿರುದು ನೀಡಿ ಸನ್ಮಾನಿಸಿ ಪ್ರೋತ್ಸಾಹಿಸಿದ್ದಾರೆ.

ಬೆಂಗಳೂರು, ಧಾರವಾಡ ಹುಬ್ಬಳ್ಳಿ, ಬಾಗಲಕೋಟೆ, ಬಾಗೇವಾಡಿ, ಬಿಜಾಪೂರ, ಗುಲಬರ್ಗಾ ರಾಯಚೂರ, ಹುಮನಾಬಾದ, ಹಾವೇರಿ, ಬೆಳಗಾವಿಯಂತ ಮಹಾನಗರಳಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸಂಗೀತ ಕಾರ್ಯಕ್ರಮ ನೀಡಿ ಹೆಗ್ಗಳಿಕೆ ಇವರದು. ಇವರ ಕಲೆಯ ಬಗ್ಗೆ ಹಲವಾರು ನಾಡಿನ ದಿನ ಪತ್ರಿಕೆಯಲ್ಲಿ ಲೇಖನಗಳು ಬಂದಿವೆ ಹಾಗೂ ದೂರದರ್ಶನ ವಿಭಾಗದ ಬೆಳಗು ಕಾರ್ಯಕ್ರಮದಲ್ಲಿ ಇವರ ನೇರ ಸಂವಾದ ಸಹ ಪ್ರಸಾರಗೊಂಡಿದೆ. ಇಷ್ಟೆಲ್ಲ ಕಲೆಯನ್ನು ಪರಿಗಣಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ೨೦೦೩ರಲ್ಲಿ ಜಾನಪದ : ಜ್ಞಾನ – ವಿಜ್ಞಾನ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

**ಗುರುರಾಜ ಕೆಂಧೂಳಿ,**<br>
**ಸಾ : ರಬಕವಿ (ಬನಹಟ್ಟಿ),**<br>
**ತಾ : ಜಮಖಂಡಿ, ಜಿ : ಬಾಗಲಕೋಟೆ.**

## ಕುಶಾಲಪ್ಪ ತಿಪ್ಪಣ್ಣ ಸಣ್ಣಕ್ಕಿ

ಇತಿಹಾಸ ಪ್ರಸಿದ್ಧ ಬಾದಾಮಿಯಿಂದ ಸುಮಾರು ೨೦ ಕಿ.ಮೀ. ಪಶ್ಚಿಮಾಭಿಮುಖವಾಗಿ ಸಾಗಿ ಬಂದರೆ ಸಿಗುವ ಪಟ್ಟಣ ಕೆರೂರ. ಈ ಕೆರೂರ ಪಟ್ಟಣ ಸಾಮಾಜಿಕ, ಧಾರ್ಮಿಕ ಹಾಗೂ ಕಲಾಕ್ಷೇತ್ರದಲ್ಲಿ ತನ್ನ ಛಾಪು ಮೂಡಿಸಿದ ಊರು. ಈ ಊರಿನ ತಂದೆ ತಿಪ್ಪಣ್ಣ ತಾಯಿ ಶೋರಮ್ಮ ಎಂಬ ನೇಕಾರ ದಂಪತಿಗಳ ಉದರದಲ್ಲಿ ೧-೭-೧೯೩೫ರಲ್ಲಿ ಕುಶಾಲಪ್ಪ ಜನಿಸಿದರು.

ಮಧ್ಯಮ ವರ್ಗದಲ್ಲಿ ಜನಿಸಿ ಬಂದ ಕುಶಾಲಪ್ಪನವರಿಗೆ ವಿದ್ಯೆ ನಿಲುಕದ ಮಾತಾಗಿ ಕೇವಲ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿಕೊಂಡರು. ಕೆರೂರಿನವರೇ ಆದ ಬಸಪ್ಪ ನರಗುಂದ, ಗ್ಯಾನಪ್ಪ ಪಲ್ಲೇದರ ಮಾರ್ಗದರ್ಶನದಲ್ಲಿ ಏಕತಾರಿ ಪದಗಳನ್ನು ಹಾಡಲು ಕಲಿಯಲಾರಂಭಿಸಿದರು.

ಇದರೊಳಗ ಏನೈತೆ ಎಲೇ ಮರಳೆ
ಜ್ಞಾನ ಮಾಡಲೇ ಎಲೆ ಮರುಳೆ

ಎಂದು ರಾಗ ತೆಗೆದು ಪದ ಹೇಳಿದರೆ ನೋಡರಿಗೆ ವೈರಾಗ್ಯ ಬರುವಂತೆ ಭಾಸವಾಗುತ್ತದೆ. ತತ್ವಪದಗಳನ್ನು ಹಾಡಿ ನಾಡಿನ ತುಂಬೆಲ್ಲ ತಮ್ಮ ಹೆಸರು ಅಜರಾಮರವಾಗಿ ಉಳಿಸಿದ್ದಾರೆ. ಶ್ರೀಮಹಾಲಕ್ಷ್ಮಿ ಏಕತಾರಿ ಭಜನಾ ಮಂಡಳಿ ಕೆರೂರ ಎಂಬ ಸಂಘಕಟ್ಟಿ ಆ ಸಂಘದ ಮೂಲಕ ನಾಡಿನ ತುಂಬೆಲ್ಲ ಕಲಾಸೇವೆ ಮಾಡಿದ್ದಾರೆ. ತಂಡದ ಸಹಕಲಾವಿದರಾದ ನಿಂಗಪ್ಪ ಯ. ಗಾಣಿಗೇರ ದಮಡಿ ನುಡಿಸಿದರೆ, ನೀಲಪ್ಪ ಬೂದಿಹಾಳ ಹಿನ್ನೆಲೆ ಗಾಯಕರಾಗಿ ಕುಶಾಲಪ್ಪನವರಿಗೆ ಒಳ್ಳೆಯ ಸಾತ ಕೊಡುತ್ತಾರೆ.

ಸುಮಾರು ೧೯೭೭ರಿಂದ ಇವರು ಏಕತಾರಿ ಭಜನಾ ಹಾಡುಗಳು ಆಕಾಶವಾಣಿ ಧಾರವಾಡದಲ್ಲಿ ಪ್ರಸಾರಗೊಂಡಿವೆ. ಅದು ಅಲ್ಲದೆ ದೂರದರ್ಶನ ಬೆಂಗಳೂರು

ಕೇಂದ್ರದಿಂದ ೧೯೮೪ ಹಾಗೂ ೧೯೯೨ ರಲ್ಲಿ ಇವರ ಹಾಡುಗಳು ಪ್ರಸಾರಗೊಂಡಿವೆ. ಇವರು ಕೇವಲ ಕಲಾವಿದರಾಗದೇ ಜಾನಪದ ಕಲಾವಿದರನ್ನು ಕಲೆಹಾಕಿ, ದೊಡ್ಡಾಟ ಉತ್ಸವ, ಪಾರಿಜಾತ ಉತ್ಸವ, ಜಾನಪದ ಕಲಾ ಸಂಭ್ರಮ, ಸಂಪ್ರದಾಯ ಹಾಡುಗಳ ಮೇಳಗಳನ್ನು ಸಂಘಟಿಸಿ ಕಲಾವಿದರಿಗೆ ಹಾಗೂ ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡಿದ್ದಾರೆ. ಬಹಳಷ್ಟು ಹಾಡುಗಳನ್ನು ಹಾಡಿ ತೋರಿಸುವ ಕಲೆಯನ್ನು ಕರಗತ ಮಾಡಿಕೊಂಡು ಅವುಗಳ ಸಾರವನ್ನು ಹೇಳುವಷ್ಟು ಶಕ್ತಿಯನ್ನು ಪಡೆದಿದ್ದಾರೆ. ಬಹಳ ದಿನಗಳಿಂದ ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಕುಶಾಲಪ್ಪನವರು ಶಿಕ್ಷಣ ಪಡೆದದ್ದು ಕಡಿಮೆಯಾದರು. ಈ ಕಲೆಯಿಂದ ಕಲಿತು ಜೀವನ ನಡೆಸಿದ್ದು ಬಹಳಿದೆ ಎಂದರೇ ತಪ್ಪಾಗಲಿಕ್ಕಿಲ್ಲ. ತಾನು ಬೆಳೆಯುವದರೊಂದಿಗೆ ಜಿಲ್ಲೆಯ ಬಹಳಷ್ಟು ಕಲಾವಿದರಿಗೆ ಮಾರ್ಗದರ್ಶನ, ಸಹಾಯ, ಸಹಕಾರ ನೀಡಿ ಅವರು ಬೆಳೆಯುವಂತೆ ಪ್ರೋತ್ಸಾಹಿಸಿದ ಕೀರ್ತಿ ಕುಶಾಲಪ್ಪನವರಿಗೆ ಸಲ್ಲುತ್ತದೆ ಮತ್ತು ಹಲವಾರು ಯುವಕರಿಗೆ ಈ ಜಾನಪದ ಹಾಡುಗಳನ್ನು ಕಲಿಸುತ್ತಾ ಸಾಗಿದ್ದಾರೆ. ಇವರ ಇಲ್ಲಿಯವರೆಗಿನ ಕಲಾಸೇವೆಯನ್ನು ಕಂಡು ೧೯೯೧ರಲ್ಲಿ ಜಿಲ್ಲಾ ಆಡಳಿತದಿಂದ ಹಾಗೂ ಹೂವಿನಹಡಗಲಿ ರಂಗಭಾರತಿಯಿಂದ ಮತ್ತು ೨೦೦೭ರಲ್ಲಿ ನಡೆದ ಜಾನಪದ ಕಲಾವಿದರ ಸಮ್ಮೇಳನದಲ್ಲಿ ಸನ್ಮಾನಿಸಲಾಗಿದೆ. ಇವರ ಕಲೆಗೆ ಪ್ರೋತ್ಸಾಹವೆಂಬಂತೆ ಹಲವಾರು ಸಂಘ ಸಂಸ್ಥೆಗಳು, ಮಠಾಧೀಶರು, ಸನ್ಮಾನಿಸಿ ಪುರಸ್ಕರಿಸಿದ್ದಾರೆ. ಈ ಸನ್ಮಾನಗಳಿಂದ ಮತ್ತಷ್ಟು ಹುರುಪುಗೊಂಡು ಮತ್ತೆ ಕೆಲಸಮಾಡಬೇಕೆಂಬ ಉತ್ಸಾಹ ಹೆಚ್ಚಾಗಿದೆ ಎನ್ನುವ ಕುಶಲಪ್ಪನವರಿಗೆ ಇನ್ನಷ್ಟು ಪ್ರಶಸ್ತಿ, ಸನ್ಮಾನಗಳು ದೊರೆಯಲೆಂದು ಆ ದೇವರಲ್ಲಿ ಪ್ರಾರ್ಥನೆಗೈಯುತ್ತೇನೆ.

**ಕುಶಾಲಪ್ಪ ತಿ. ಸಣ್ಣಕ್ಕಿ,**
**ಮಹಾಲಕ್ಷ್ಮೀ ದೇವಸ್ಥಾನದ ಹತ್ತಿರ, ಹೊಸಪೇಟೆ, ಸಾ : ಕೆರೂರ,**
**ತಾ : ಬಾದಾಮಿ, ಜಿ : ಬಾಗಲಕೋಟೆ.**

# ರಂಗಪ್ಪ ಬಾಲಪ್ಪ ಹಲಕುರ್ಕಿ

ಧನವ ಗಳಿಸಬೇಕು ಹೆಂಥಾದ್ದು
ಈ ಜನರಿಗೆ ತಿಳಿಯದಂಥಾದ್ದು
ಅನುದಿನ ಅಜಹರಿ ಮನು ಮನಿಗಳೆಗೆಲ್ಲಾ
ಹೌದು ಹೌದು ಎನ್ನುವಂಥದ್ದು

ಎಂದು ಕೈಯಲ್ಲಿ ತಂಬೂರಿ ಹಿಡಿದು ಹಾಡಲಾರಂಭಿಸಿದರೆ ಮುಗಿದೆ ಬಿಟ್ಟಿತು. ಕೇಳುಗರನಲ್ಲ ಭಾವನಾ ಲೋಕಕ್ಕೆ ಮತ್ತು ಪಾರಮಾರ್ಥಿಕ ಲೋಕಕ್ಕೆ ಕರೆದೊಯ್ಯುವ ಶಕ್ತಿ ರಂಗಪ್ಪ ಹಲಕುರ್ಕಿ ಇವರಲ್ಲಿದೆ. ಮೂಲತಃ ಬೀಳಗಿ ತಾಲೂಕಿನ ಯಳ್ಳಿಗುತ್ತಿಯವರಾದ ಇವರು ಈ ಊರಿನ ಮಧ್ಯಮ ಕುಟುಂಬದಲ್ಲಿ ಜನಿಸಿದವರು. ಬಡತನದಲ್ಲಿಯೇ ಹುಟ್ಟಿ ಬಂದ ರಂಗಪ್ಪನಿಗೆ ವಿದ್ಯೆ ಕಲಿಯಬೇಕೆಂಬ ಆಸೆ ಬಹಳಷ್ಟು. ಆದರೆ ಆರ್ಥಿಕ ಮುಗ್ಗಟ್ಟು ಅವರನ್ನು ಮುಂದೆ ಬಿಡದೆ ಕೃಷಿ ಬದುಕಿಗೆ ಸೇರ್ಪಡೆಮಾಡಿತು. "ತಾನು ಮಾಡುದೊಂದು ಆಗೊದೊಂದು" ಎಂಬ ಹಿರಿಯರ ಮಾತಿನಂತೆ ರಂಗಪ್ಪನವರು ಹಲವಾರು ತೊಂದರೆಗಳನ್ನು ಸಹಿಸಿಕೊಂಡು ಕೃಷಿ ಜೀವನ ನಡೆಸಿದರು. ಗ್ರಾಮೀಣ ಪ್ರದೇಶದ ಮುಗ್ಧ ರಂಗಪ್ಪನನ್ನು ದಿನಾಲು ಹಳ್ಳಿಯಲ್ಲಿ ಹಾಡುವ ಶಿವಭಜನೆಗಳು ಇವರನ್ನು ಆಕರ್ಷಿಸಿದವು. ಹೇಗಾದರೂ ಮಾಡಿ ಈ ತತ್ವಪದ, ನೀತಿಪದಗಳನ್ನು ಕಲಿಯಬೇಕೆಂಬ ಮಹತ್ವಾಕಾಂಕ್ಷೆ ರಂಗಪ್ಪನವರಲ್ಲಿ ಹುಟ್ಟಿಕೊಂಡು, ಧಾರ್ಮಿಕ ಮನೋಭಾವದ ರಂಗಪ್ಪನವರಿಗೆ ಈ ಭಜನೆ ಹಾಡುಗಳು ಬಹಳಷ್ಟು ಬೇಗ ಮುಖಪಾಠ ವಾದವು. ಬಾಗಲಕೋಟೆಯ ರಾಮಾರೂಢ ಮಹಾಸ್ವಾಮಿಗಳ ಕೃಪೆಯಿಂದ ಹಲವಾರು ಹಾಡುಗಳನ್ನು ಕಲಿತು, ಪ್ರಥಮ ಬಾರಿಗೆ ಶ್ರೀ ಮಠದಲ್ಲಿ ಹಾಡು ಹೇಳಿದ್ದೆನೆಂದು ಹೆಮ್ಮೆಯಿಂದ ಹೇಳುವ ರಂಗಪ್ಪ, ಕಲಿತಿದ್ದು ಕಡಿಮೆ ಆದರೆ ಮಹಾತ್ಮರ ಒಡನಾಟದಿಂದ,

ಅವರ ಕೃಪೆಯಿಂದ ಭಜನಾ ಸಂಘ ಕಟ್ಟಿ ಸಾವಿರಾರು ಭಜನಾ ಪದ ಹಾಗೂ ತತ್ವ ಪದಗಳನ್ನು ಕಲಿತು ಒಳ್ಳೆಯ ಕಲಾವಿದನಾಗಿ ಹೊರ ಹೊಮ್ಮಿದ್ದಾರೆ.

ಭಜನಾ ತಂಡವನ್ನು ಕಟ್ಟಿಕೊಂಡು ಹಲವಾರು ಕಲಾವಿದರು ಕಲೆಹಾಕಿ ತಾವೆ ಸಂಘದ ಮುಖಂಡತ್ವ ವಹಿಸಿಕೊಂಡು ಸುಮಾರು ೪೦ ವರ್ಷಗಳಿಂದ ನಾಡಿನ ತುಂಬೆಲ್ಲ ಸಾವಿರಾರು ಪ್ರದರ್ಶನಗಳನ್ನು ನೀಡಿ ಯಾವದೇ ಹಣಕ್ಕಾಗಿ ಆಶಿಸದೇ ಕೇವಲ ಭಗವಂತನ ಸೇವೆ ಎಂದು ತಿಳಿದು ಕಲಾ ಜೀವನಕ್ಕೆ ಕಾಲಿಟ್ಟ ರಂಗಪ್ಪ ಇತರೇ ಕಲಾವಿದರಿಗೆ ಮಾದರಿ ವ್ಯಕ್ತಿಯಾಗಿದ್ದಾರೆ. ಮೃದು ಸ್ವಭಾವದ, ಕಾಯಕ ಸಿದ್ಧಾಂತದ ತತ್ವದಲ್ಲಿ ನಡೆಯುವ ರಂಗಪ್ಪ ಎಲ್ಲ ಜನರನ್ನು ಬೇಗ ಆಕರ್ಷಣೆ ಮಾಡಿಕೊಳ್ಳುವ ಗುಣ ಹೊಂದಿ ನಾಡಿನ ತುಂಬೆಲ್ಲ ಸಾವಿರಾರು ಕಾರ್ಯಕ್ರಮಗಳನ್ನು ನೀಡಿ ಚಿರಪರಿಚಿತರಾಗಿದ್ದಾರೆ. ತತ್ವಪದಗಳನ್ನು ಅರ್ಥಪೂರ್ಣವಾಗಿ ಹಾಡಿ ಜನರನ್ನು ಮೋಡಿಗೊಳಿಸುವ ಶಕ್ತಿ ಇವರಲ್ಲಿದೆ. ಇವರು ೧೯೮೪ ರಿಂದ ಆಕಾಶವಾಣಿ ಧಾರವಾಡ ಕಲಾವಿದರಾಗಿ ಹಲವಾರು ಸಲ ಇವರ ತತ್ವಪದಗಳು ಪ್ರಸಾರಗೊಂಡಿವೆ. ಇವರ ಕಲಾ ಸೇವೆಯನ್ನು ಗುರುತಿಸಿ ಹಲವಾರು ಸಂಘಸಂಸ್ಥೆಗಳು, ಶ್ರೀ ಮಠಗಳು ಸನ್ಮಾನಿಸಿ ಪುರಸ್ಕಾರ ನೀಡಿವೆ.

**ರಂಗಪ್ಪ ಹಲಕುರ್ಕಿ,**
**ಯಳ್ಳಿಗುತ್ತಿ, ಪು. ಕೇ.,**
**ತಾ : ಬೀಳಗಿ, ಜಿ : ಬಾಗಲಕೋಟೆ.**

## ಇಬ್ರಾಹಿಂ ಅಲ್ಲಾಖಾನ

ಜನಪದ ಸಾಹಿತ್ಯ ಜನಪದರ ಬದುಕಿನ ಸಹಜ ಅಭಿವ್ಯಕ್ತಿ ಅದರಲ್ಲಿಯೇ ಅವರ ಸುಖ-ದುಃಖ, ಆಚಾರ-ವಿಚಾರ, ಕಲೆ-ಭಾಷೆ, ಸಂಸ್ಕೃತಿ-ಸಭ್ಯತೆ ಜೀವಂತವಾಗಿ ಮೂಡಿ ನಿಂತಿವೆ. ಅದು ಹಲವು ಪ್ರಕಾರಗಳ ಅಭಿವ್ಯಕ್ತಗೊಂಡಿವೆ. ಅಂತಹವುಗಳಲ್ಲಿ ಜಾನಪದ ಗೀತೆಗಳನ್ನು ಭಾವ ತುಂಬಿ ಹಾಡುವುದನ್ನು ಮೈಗೂಡಿಸಿ ಕೊಂಡವರು ಇಬ್ರಾಹಿಂ ಅಲ್ಲಾಖಾನ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರ ಪಟ್ಟಣದಲ್ಲಿ ಬೀಯಾಂ ಮತ್ತು ಹಸನಸಾಬ ಎಂಬ ಮುಸ್ಲಿಂ ದಂಪತಿಗಳ ಉದರದಲ್ಲಿ ಜನಿಸಿದ ಇಬ್ರಾಹಿಂ ಬಾಲ್ಯದ ದಿನಗಳನ್ನು ಬಹಳಷ್ಟು ತೊಂದರೆ ಅನುಭವಿಸಿ ಕಳೆಯುವುದಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಕಲಿತರು. ಹಿಂದೆ ಇವರ ಅಜ್ಜನವರು ಕರ್ಬಲಾ ಪದಗಳು ಹಾಗು ರಿವಾಯತ ಪದಗಳನ್ನು ಬಹಳ ಚೆನ್ನಾಗಿ ಹಾಡುತ್ತಿದ್ದರಂತೆ ವಂಶಪರಂಪರಾಗತವಾಗಿ ಬಂದ ಈ ಹಾಡುಗಾರಿಕೆಯನ್ನು ಮೈಗೂಡಿಸಿಕೊಂಡು ಬೆಳೆದ ಅಲ್ಲಾಖಾನ ಏಕತಾರಿ ಭಜನಾ ಹಾಗೂ ತತ್ವಪದ ಹಾಡಲು ಪ್ರಾರಂಭಿಸಿದರು. ಇವರಲ್ಲಿದ್ದ ಕಲಾ ಪ್ರೇಮವನ್ನು ಕಂಡು ಪ್ರಸಿದ್ಧ ಪಾರಿಜಾತ ಕಲಾವಿದರಾದ ದಿ|| ಮುರಿಗೆಪ್ಪ ಸೋರಗಾಂವಿ, ಸಾ : ಮಹಾಲಿಂಗಪೂರ ಇವರು ಸಂಗೀತ ದೀಕ್ಷೆ ಕೊಟ್ಟರು. ಅವರ ಮಾರ್ಗದರ್ಶನದಲ್ಲಿ ನಿಜಗುಣಶಿವಯೋಗಿಗಳ, ಸರ್ಪಭೂಷಣ ಶಿವಯೋಗಿಗಳ ಪದಗಳನ್ನು ಹಾಡುವುದರಲ್ಲಿ ಪರಿಣತಿಯನ್ನು ಪಡೆದರು. ಸಂಗೀತದ ಹಲವು ಮಜಲುಗಳನ್ನು ಬಲ್ಲ ಇವರು ತಾವೆ ಹಾಡುಗಳಲ್ಲಿ ಧಾಟಿ ಹಚ್ಚಿ ಹಾಡಿ ಜನರನ್ನು ರಂಜಿಸುವ ಕಲೆಯನ್ನು ಕರಗತ ಮಾಡಿಕೊಂಡು ಪ್ರಸಿದ್ಧಿಯನ್ನು ಪಡೆದುಕೊಂಡರು. ಸಂತ ಶಿಶುವಿನಹಾಳ ಶರೀಫರ ಪದಗಳು, ಕನಕದಾಸರ ಪದ, ಕಡಕೋಳ ಮಡಿವಾಳಪ್ಪನವರ ಪದ, ಹರಿದಾಸರ ಪದಗಳನ್ನು ಹಾಡಿ ತಾವು ಖುಷಿ ಪಡುವುದರ

ಜೊತೆಗೆ ಕೇಳುಗರಿಗೆ ಖುಷಿಬರುವಂತೆ ಮಾಡುವ ಕಲೆಯನ್ನು ಮೈಗೂಡಿಸಿಕೊಂಡು ಬೆಳೆದರು.

ಆಂಗ್ಲಭಾಷೆಯೊಂದನ್ನು ಬಿಟ್ಟು ಎಲ್ಲ ಭಾಷೆಗಳಲ್ಲಿ ಹಾಡುವ ಕಲೆಯನ್ನು ಕಲಿತುಕೊಂಡರು. ಭಜನಾ ಹಾಡುಗಳನ್ನು ಸಂವಾದ ರೂಪದಲ್ಲಿ ವಿವರಣೆ ಹೇಳಿ ನೋಡುಗರಿಗೆ ವಿಷಯವನ್ನು ತಿಳಿಸಿದರು. ಇವರ ಕಲಾ ಸಿರಿವಂತಿಕೆಯನ್ನು ಕಂಡು ಕರ್ನಾಟಕ, ಮಹಾರಾಷ್ಟ ಹಲವಾರು ಪ್ರಮುಖ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕಲಾ ಸೇವೆಗೈದ ಅಲ್ಲಾಖಾನರ ಹಾಡುಗಳನ್ನು ಕೇಳಿಯೇ ಆನಂದಿಸಬೇಕು. ಮೂಲ ಜಾನಪದ ಹಾಡುಗಳನ್ನು ನಶಿಸಬಾರದು ಹಾಗೂ ಮುಂದಿನ ತಲೆಮಾರಿಗೆ ಆ ಹಾಡುಗಳ ಪರಿಮಳವನ್ನು ಪಸರಿಸಬೇಕೆಂಬ ತರಬೇತಿ ಹಾಗೂ ಆಧ್ಯಾತ್ಮಿಕವಾದ ಅರ್ಥವನ್ನು ತಿಳಿಸುತ್ತಾ ಕಾಲ ಕಳೆಯುತ್ತಿರುವ ಇವರನ್ನು ನೋಡಿದರೆ ಅಬ್ಬಾ! ಎನಿಸುತ್ತಿದೆ. ಈ ಕಲೆಗಾಗಿ ಜೀವ ಸವೆಸುವ ಕಲಾವಿದರಿದ ಬೆಳೆದ ಈ ಕಲೆ ಮುಂಬರುವ ಯುವ ಪೀಳಿಗೆಗೆ ದಾರಿದೀಪ. ಸುಮಾರು ನಲವತ್ತು ವರ್ಷಗಳಿಂದ ಕಲಾಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರನ್ನು ೧೯೭೫ರಲ್ಲಿ ಶ್ರೀಗುರು ದಿಗಂಬರೇಶ್ವರ ಮಠನಾಗರಾಳ, ೧೯೮೦ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಜಮಖಂಡಿಯಲ್ಲಿ ಸನ್ಮಾನಿಸಿ ಪುರಸ್ಕರಿಸಿದ್ದಾರೆ.

ಜಾನಪದ ಕಲಾಮೇಳ, ಯುವಜನ ಮೇಳ, ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಎಲ್ಲ ಕಲಾವಿದರನ್ನು ಸೇರಿಸಿಕೊಂಡು ಉತ್ತಮ ಸೇವೆ ಮಾಡಿ ಹೆಸರು ಗಳಿಸಿದ್ದಾರೆ. ಇಂತಹ ಶ್ರೇಷ್ಠ ಕಲಾವಿದರುಗಳಿಗೆ ಇನ್ನು ಹೆಚ್ಚಿನ ಅವಕಾಶಗಳು ಲಭಿಸಲಿ ಎಂಬುದು ಅವರ ಆಸೆ.

**ಇಬ್ರಾಹಿಂ ಅಲ್ಲಾಖಾನ,**
**ಭಜಂತ್ರಿ ಓಣಿ, ಸೈದುಸಾಹೇಬ ದರ್ಗಾ ಹತ್ತಿರ, ಮಹಾಲಿಂಗಪೂರ,**
**ತಾ : ಮುಧೋಳ, ಜಿ : ಬಾಗಲಕೋಟೆ.**

## ಚನ್ನಪ್ಪ ವೀ. ಕರಡಿ

ಮುಧೋಳ ತಾಲೂಕಿನ ಮಹಾಲಿಂಗಪೂರ ಪಟ್ಟಣ ಜಾನಪದ ಕಲೆಗಳ ತವರೂರು. ಇಲ್ಲಿ ಹುಟ್ಟಿ ಬೆಳೆದ ಹಲವಾರು ಹಿರಿಯ ಕಲಾವಿದರು ಮಹಾಲಿಂಗಪೂರದ ಕೀರ್ತಿಯನ್ನು ಹೆಚ್ಚಿಸುವುದರ ಜೊತೆಗೆ ತಾವು ಬೆಳೆದು, ನಾಡಿನ ತುಂಬೆಲ್ಲಾ ಹೆಸರು ಮಾಡಿದ್ದಾರೆ. ಅಂತಹವರಲ್ಲಿ ಅತಿ ಪ್ರಮುಖರಾದವರು ಚನ್ನಪ್ಪ ವೀ. ಕರಡಿ.

ಮಹಾಲಿಂಗಪೂರ ಮಧ್ಯಮ ವರ್ಗದ ನೇಕಾರ ದಂಪತಿಗಳಾದ ವೀರಭದ್ರಪ್ಪ ಮತ್ತು ಗೌರವ್ವ ಎಂಬ ದಂಪತಿಗಳ ಉದರದಲ್ಲಿ ೮–೧–೧೯೨೬ರಲ್ಲಿ ಚನ್ನಪ್ಪನವರು ಜನಿಸಿದರು. ಕಲಾವಿದರಾದ ವೀರಭದ್ರಪ್ಪನವರು ಮಂಗಳ ವಾದ್ಯವಾದ ಕರಡಿಯನ್ನು ನುಡಿಸುವದರಲ್ಲಿ ಎತ್ತಿದ ಕೈ. ಅವರ ಮಾರ್ಗದರ್ಶನದಲ್ಲಿ ೭ನೇ ತರಗತಿಯವರೆಗೆ ವಿದ್ಯಾಭ್ಯಾಸ ಕಲಿತುಕೊಂಡು ಮುಂದೆ ಈ ಕರಡಿ ನುಡಿಸುವದನ್ನು ಅಭ್ಯಸಿಸತೊಡಗಿದರು. ರಕ್ತಗತವಾಗಿ ಹರಿದುಬಂದ ಈ ಕಲೆಯ ಗತ್ತುಗಾರಿಕೆ, ನುಡಿಸುವ ಪರಿ ಮತ್ತು ಮಾತ್ರೆಗಳನ್ನು ಬಹು ಬೇಗನೆ ಕಲಿತು ಪರಿಪೂರ್ಣತೆಯನ್ನು ಸಾಧಿಸಿಕೊಂಡರು. ವೃತ್ತಿಯಿದ ನೇಕಾರಿಕೆಯನ್ನು ಅವಲಂಬಿಸಿದರೂ ಪ್ರವೃತ್ತಿಯಿಂದ ಕಲಾವಿದರಾಗಿ ಬಹಳಷ್ಟು ಸಮಯವನ್ನು ತಾಲಿಮು, ಪ್ರದರ್ಶನಗಳು ಮತ್ತು ಸಂಘಟನೆಯಲ್ಲಿ ಕಳೆಯುತ್ತಿದ್ದರು. ಕಲಾ ದೀಕ್ಷೆಯನ್ನು ತಂದೆಯವರಿಂದ ಪಡೆದುಕೊಂಡು ಸಂಗೀತ ದೀಕ್ಷೆಯನ್ನು ಶ್ರೀ ಮಲ್ಲಿಕಾರ್ಜುನ ಅಸುಂಡಿಯವರಿಂದ ಪಡೆದುಕೊಂಡರು. ಕನ್ನಡ ನಾಡಿನ ಹಲವಾರು ಶ್ರೀಮಠಗಳಲ್ಲಿ ಪರಮಪೂಜ್ಯರ ಸಮ್ಮುಖದಲ್ಲಿ ಕಲಾಸೇವೆಗೈದು, ಪೂಜ್ಯರ ಕೃಪೆಗೆ ಪಾತ್ರರಾಗುವುದರ ಮೂಲಕ ನಾಡಿನ ಜನರಿಗೆಲ್ಲ ಚಿರಪರಿಚಿತರಾಗಿ ನಾಡಿನಲ್ಲಿ ಹೆಸರು ಮಾಡಿದ್ದಾರೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ರಾಜ್ಯದ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿ, ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ, ಪ್ರಧಾನ ಮಂತ್ರಿಗಳಾದ ಶ್ರೀ ಪಂಡಿತ ಜವಹರಲಾಲ ನೆಹರು, ರಾಷ್ಟ್ರಪತಿಗಳಾದ ಡಾ. ಬಾಬು ರಾಜೇಂದ್ರ ಪ್ರಸಾದ, ಪ್ರಥಮ ಮಹಿಳಾ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ, ಕರ್ನಾಟಕ ಜನಪ್ರಿಯ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಮತ್ತು ಸಚಿವರಾದ ಜೀವರಾಜ ಆಳ್ವಾ, ಶ್ರೀಮತಿ ಸೋನಿಯಾ ಗಾಂಧಿಯವರಂತಹ ರಾಷ್ಟ್ರನಾಯಕರುಗಳ ಮುಂದೆ ಟೊಂಕಕ್ಕೆ ಕರಡಿ ಕಟ್ಟಿಕೊಂಡು ಕರಡಿ ನುಡಿಸಿ ಶಹಬ್ಬಾಸ್‌ಗಿರಿ ಪಡೆದುಕೊಂಡ ಕನ್ನಡ ನಾಡಿನ ಕೀರ್ತಿಯನ್ನು ಬೆಳೆಸಿದ್ದಾರೆ. ಭಾರತದ ಅನೇಕ ರಾಜ್ಯಗಳಾದ ಕರ್ನಾಟಕ, ಪಶ್ಚಿಮ ಬಂಗಾಳ, ಆಸ್ಸಾಮ್, ಮಣಿಪುರ, ಜಮ್ಮು ಕಾಶ್ಮೀರಗಳು, ಮಹಾರಾಷ್ಟ್ರ, ಓರಿಸ್ಸಾ, ಹರಿಯಾಣ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ದೆಹಲಿಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಇವರು ಕಲಾ ಜೀವನದಲ್ಲಿ ಹಲವಾರು ಎಡರು ತೊಡರುಗಳು ಬಂದರೆ ಅಂಜದೆ ಮೇಳ ಕಟ್ಟಿಕೊಂಡು ದೇಶ ಸುತ್ತಿ ಕಲೆಗಾಗಿ ದುಡಿದ್ದಾರೆ. ಒಟ್ಟು ಸಂಸ್ಥೆಗಳು ಸನ್ಮಾನಿಸಿ ಪ್ರೋತ್ಸಾಹಿಸಿವೆ. ನಾಡಿನ ತುಂಬೆಲ್ಲ ನಡೆಯುವ ಬಹಳಷ್ಟು ಜಾನಪದ ಕಾರ್ಯಕ್ರಮಗಳಲ್ಲಿ ಪುರಸ್ಕರಿಸಿದ್ದಾರೆ.

ಸನ್ಮಾನಗಳು : ಮುಧೋಳದ ಮಹಾರಾಜರಿಂದ ಬಾಲಕಲಾವಿದನೆಂದು ಸನ್ಮಾನ ಹಾಗು ಪದಕ, ಮಹಾಲಿಂಗಪೂರದಲ್ಲಿ ನಡೆದ ಪ್ರಪ್ರಥಮ ಶ್ರೀಕೃಷ್ಣ ಪಾರಿಜಾತ ಸಮ್ಮೇಳದಲ್ಲಿ ಸನ್ಮಾನ, ಬೀದರಿನ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳ ೬೦ನೇ ಜನ್ಮದಿನೋತ್ಸವದಲ್ಲಿ ಶ್ರೀಗಳಿಂದ ಸನ್ಮಾನ.

ಜಾನಪದ ಶ್ರೀ : ಇವರು ಸುಮಾರು ಐದಾರು ದಶಕಗಳಿಂದ ಕಲಾಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕಂಡು ಹಾಗೂ ಜಾನಪದ ಕಲೆಯನ್ನು ಮುಂದಿನ ಯುವ ಪೀಳಿಗೆಗೆ ಮಾರ್ಗದರ್ಶನ ಮಾಡುತ್ತಿರುವುದನ್ನು ಕಂಡು ಕರ್ನಾಟಕ ಘನ ಸರ್ಕಾರದ ಜಾನಪದ ಕಲಾವಿದರಿಗೆ ಕೊಡಮಡುವ ಶ್ರೇಷ್ಠ ಪ್ರಶಸ್ತಿಯಾದ "ಜಾನಪದ ಶ್ರೀ" ಪ್ರಶಸ್ತಿ ಜೊತೆಗೆ ಒಂದು ಲಕ್ಷ ರೂಪಾಯಿ ನೀಡಿ ರಾಜ್ಯಮಟ್ಟದಲ್ಲಿ ಸನ್ಮಾನಿಸಿ ಪುರಸ್ಕರಿಸಿ ಪ್ರೋತ್ಸಾಹಿಸಿದ್ದಾರೆ.

ಚನ್ನಪ್ಪ ವೀರಭದ್ರಪ್ಪ ಕರಡಿ,<br>
ಜಾನಪದಶ್ರೀ ಪ್ರಶಸ್ತಿ ವಿಜೇತರು,<br>
ಸಾ : ಮಹಾಲಿಂಗಪೂರ, ತಾ : ಮುಧೋಳ, ಜಿ : ಬಾಗಲಕೋಟೆ.

## ಸಂಗಪ್ಪ ಹೂಗಾರ

ಕಲೆಯು ನಿಂತ ನೀರಾಗಬಾರದು, ಹರಿವ ನೀರಾಗಬೇಕು. ಎಲ್ಲ ಕಲೆಗಳು ಎಲ್ಲರಲ್ಲಿರುವುದಿಲ್ಲ. ಮನುಷ್ಯನಿಗೆ ಛಲಬೇಕು ಹಾಗೂ ಪರಿಶ್ರಮ ಇದ್ದರೆ ಜೀವನದಲ್ಲಿ ಅಸಾಧ್ಯವಾದುದನ್ನು ಸಾಧಿಸಬಹುದು. ಇಂತಹ ಅಸಾಧ್ಯವಾದುದನ್ನು ಸಾಧಿಸಿದವರು ಸಂಗಪ್ಪ ಫಕೀರಪ್ಪ ಹೂಗಾರವರು.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಕೆಲೂರ ಎಂಬ ಗ್ರಾಮದಲ್ಲಿ ೧-೬-೧೯೫೫ರಲ್ಲಿ ಮಹಾದಾನಿಗಳಾದ ಸಂಗಮ್ಮ, ಫಕೀರಪ್ಪ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕೆಲೂರಿನಲ್ಲಿ ಪಡೆದುಕೊಂಡು ಮಾಧ್ಯಮಿಕ ಶಿಕ್ಷಣವನ್ನು ಗೂಡೂರಿನಲ್ಲಿ ಹಾಗೂ ಕಾಲೇಜು ಶಿಕ್ಷಣವನ್ನು ಬಾಗಲಕೋಟದಲ್ಲಿ ಅಪೂರ್ಣಗೊಳಿಸಿ ಶಿಕ್ಷಣಕ್ಕೆ ಶರಣು ಹೊಡೆದು ವಂಶಪರಂಪರಾ ಗತವಾಗಿ ಬಂದ ಹೂ ಮಾಲೆ, ಬಾಸಿಂಗ, ದಂಡೆ ಕಟ್ಟುವ ಕಾಯಕದಲ್ಲಿ ತೊಡಗಿದರು. ಆರ್ಥಿಕ ಮುಗ್ಗಟ್ಟಿನಿಂದಾಗಿ ಶಿಕ್ಷಣಕ್ಕೆ ವಿದಾಯ ಹೇಳಿದ ಇವರು ಮುಂದೆ ಸ್ವ ಉದ್ಯೋಗ ಪ್ರಾರಂಭಿಸಿ ಉತ್ತಮ ಜೀವನ ನಡೆಸುವ ವೇಳೆಯಲ್ಲಿ ಈ ಜಾನಪದ ಕಲೆಗಳತ್ತ ಪ್ರಭಾವಿತರಾಗಿ ೧೯೭೪ರಲ್ಲಿ ಶ್ರೀ ಶಾರದಾ ಕರಡಿ ಮಜಲು ಸಂಘ ಕೆಲೂರ ಎಂಬ ಸಂಘವನ್ನು ಓಣಿಯ ಕಲಾವಿದರನ್ನು ಸೇರಿಸಿಕೊಂಡು ಕಟ್ಟಿದರು. ಗೂಡೂರಿನ ಪಂಚಮಹಾವಿದ್ಯಾ ಪಾರಂಗತರಾದ ದಿ॥ ಕರವೀರಪ್ಪನವರು ಯರಕದ ಅವರನ್ನು ವಿದ್ಯಾ ಗುರುಗಳನ್ನಾಗಿ ಮಾಡಿಕೊಂಡು ಸುಮಾರು ೫ ವರ್ಷಗಳ ಕಾಲ ಕರಡಿ ಮಜಲಿನ ತಾಳ, ಲಯ, ಮಾತ್ರಾಗಳನ್ನು ಪರಿಪೂರ್ಣವಾಗಿ ಕಲಿತುಕೊಂಡರು. ೧೯೮೬ರಲ್ಲಿ ಆಕಾಶವಾಣಿ ಧಾರವಾಡ 'ಬಿ' ಗ್ರೇಡ್ ಕಲಾವಿದರಗಿ ತೇರ್ಗಡೆಯಾದರೂ. ೧೯೯೨ರಲ್ಲಿ ಬೆಂಗಳೂರು ದೂರದರ್ಶನ ಕಲಾವಿದರಾಗಿ ಇವತ್ತಿನವರೆಗೆ ಕಲಾಸೇವೆ ಮಾಡುತ್ತಿದ್ದಾರೆ.

ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಪ್ರಮುಖ ನಗರಗಳಲ್ಲಿ ಕಲಾ ಪ್ರದರ್ಶನ ನೀಡಿ ಶ್ರೇಷ್ಠ ಕಲಾವಿದರೆಂದು ಗುರುತಿಸಿಕೊಂಡಿದ್ದಾರೆ. ಕರ್ನಾಟಕ ರಾಷ್ಟ್ರೀಯ ಉತ್ಸವಗಳಾದ, ಚಾಲುಕ್ಯ ಉತ್ಸವ, ಕದಂಬ ಉತ್ಸವ, ಹಂಪಿ ಉತ್ಸವ, ಕಿತ್ತೂರ ಉತ್ಸವ, ದಸರಾ ಉತ್ಸವಗಳಲ್ಲಿ ಕಲಾ ಸೇವೆ ಮಾಡಿ ನಾಡಿನ ತುಂಬೆಲ್ಲ ಪರಿಚಿತರಾಗಿದ್ದಾರೆ. ಇಷ್ಟೊಂದು ವಿದ್ಯಾವಂತರಾದ ಸಂಗಪ್ಪನವರು ಜಾನಪದ ಕಲೆಯ ಬೆನ್ನು ಹತ್ತಿ ಈ ಕಲೆ ಉಳವಿಗಾಗಿ ಸುಮಾರು ದಶಕಗಳಿಂದ ಸಂಘಟಿತರಾಗಿ ಸೇವೆ ಮಾಡಿ ಈ ನಾಡಿನ ತನಿರಸ ಸೂಸುವ ಜಾನಪದ ಸಾಹಿತ್ಯ ಜಾನಪದ ಕಲೆ ಉಳಿವಿಗಾಗಿ ದುಡಿಯುತ್ತಿರುವ ಅಪ್ಪಟ ಜಾನಪದ ಪ್ರತಿಭೆ ಎಂದು ಹೇಳಬಹುದು. ಜಾನಪದ ಸಾಹಿತ್ಯವೆಂದರೆ, ಜಾನಪದ ಕಲೆ ಎಂದರೆ ಮೂಗು ಮುರಿಯುವ ಯುವ ಪೀಳಿಗೆಗೆ ಹಾಗೂ ಗ್ರಾಮೀಣ ಯುವಕರಿಗೆ ಸಂಗಪ್ಪನವರು ಉತ್ತಮ ಉದಾಹರಣೆ. ಇವರ ಅಖಂಡ ಕಲಾ ಪ್ರತಿಭೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಪುರಸ್ಕರಿಸಿ, ಪ್ರೋತ್ಸಾಹಿಸಿವೆ. ಅದು ಅಲ್ಲದೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೦ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಇವೆಲ್ಲ ಪ್ರಶಸ್ತಿ ಪಡೆದ ಸಂಗಪ್ಪನವರಿಗೆ ಈ ಕ್ಷೇತ್ರದಲ್ಲಿ ಇನ್ನಷ್ಟು ಕೆಲಸ ಮಾಡುವ ಆಸಕ್ತಿ ಹೆಚ್ಚಾಗಿದೆ. ಅವರಿಗೆ ಇನ್ನಷ್ಟು ಪ್ರಶಸ್ತಿ, ಸನ್ಮಾನ ದೊರೆಯಲಿ ಎಂಬುದು ಅವರ ಅಭಿಮಾನಿಗಳ ಆಸೆ.

**ಸಂಗಪ್ಪ ಫಕೀರಪ್ಪ ಹೂಗಾರ,**
**ಸಾ : ಕೆಲೂರ,**
**ತಾ : ಹುನಗುಂದ, ಜಿ : ಬಾಗಲಕೋಟೆ.**

## ಶೇಷಪ್ಪ ನಾಗಪ್ಪ ಸೋನಾರ

ಕಲೆ ಎಂಬುದು ಯಾರ ಸೊತ್ತಲ್ಲ. ಕಲೆ ಕಲಿಯಬೇಕೆಂದರು ಬರುವಂತಹದು ಅಲ್ಲ. ಅಂತಹ ಕಲೆಗಳಲ್ಲಿ ಒಂದಾದ ಚರ್ಮವಾದ್ಯವನ್ನು ನುಡಿಸುವುದನ್ನು ಕರಗತ ಮಾಡಿಕೊಂಡವರು ಶೇಷಪ್ಪ ಸೋನಾರ.

ಜಮಖಂಡಿ ತಾಲೂಕಿನ ಕುಂಚನೂರ ಎಂಬ ಕಲಾವಿದರಾದ ತಂದೆ ನಾಗಪ್ಪ, ತಾಯಿ ದುಂಡವ್ವೆ ಎಂಬ ಶರಣ ದಂಪತಿಗಳ ಉದರದಲ್ಲಿ ೧೯೫೩ರಲ್ಲಿ ಜನಿಸಿದರು. ಮಧ್ಯಮ ವರ್ಗದಲ್ಲಿ ಜನಿಸಿದ ಇವರಿಗೆ ವಿದ್ಯೆ ಮಾತ್ರ ತಲೆಗೆ ಹತ್ತಲಿಲ್ಲವಾದ ಕಾರಣ ಇವರು ಜಾನಪದ ಕಲೆಯ ಆರಾಧಕರಾಗಿ ಆ ಕಲೆಯನ್ನು ಜಾಯಗೊಂಡ ಮಾಸ್ತರರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ವಿದ್ಯೆ ಕಲಿತು ಕೊಂಡರು.

ತಬಲ, ಮೃದಂಗ, ದಪಡಿ, ಕರಡಿ, ಡೊಳ್ಳು ಎಲ್ಲ ಚರ್ಮ ವಾದ್ಯಗಳನ್ನು ಸಂಪೂರ್ಣವಾಗಿ ನುಡಿಸಬಲ್ಲ ಬಹು ಪ್ರತಿಭೆಯನ್ನು ಹೊಂದಿದವರು. ನೋಡುಗರ ಆನಂದಕ್ಕಾಗಿ, ತಮ್ಮ ಆನಂದಕ್ಕಾಗಿ ಯಾವ ತಾಳವನ್ನಾದರು ಬಾರಿಸುವ ಪರಿಣತಿ ಪಡೆದ ಇವರು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ತುಂಬೆಲ್ಲ ಸಂಚರಿಸಿ ಕಲಾಸೇವೆಯನ್ನು ಮಾಡುತ್ತಾ ಬಂದಿದ್ದ ಇವರು ತಮ್ಮ ಕಲಾ ಜೀವನದಲ್ಲಿ ಹಲವಾರು ತೊಂದರೆಗಳನ್ನು ಅನುಭವಿಸಿದರು. ಕಲಾಸೇವೆಯನ್ನು ಬಿಡದೆ ಕಲಾಸೇವೆಗಾಗಿ ಸನ್ನದ್ಧರಾಗಿ ಕಲಾ ಪ್ರಪಂಚಕ್ಕೆ ಉತ್ತಮ ಸೇವೆ ಸಲ್ಲಿಸಿದ್ದಾರೆ.

ಅಳಿವಿನಂಚಿನಲ್ಲಿರು ಈ ವಾದ್ಯಗಳು ಇದರ ಹಿಂದಿರುವ ತಾಳಗಳನ್ನು ಸಂಪೂರ್ಣವಾಗಿ ಬಲ್ಲ ಇವರು ಈ ಕಲೆಗಳನ್ನು ಉಳಿಸಿ ಬೆಳಿಸಬೇಕೆಂಬ ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದಾರೆ ಅದಕ್ಕಾಗಿ ಅನೇಕ ಯುವ ಕಲಾವಿದರಿಗೆ ಕರಡಿ, ತಬಲ, ಮೃದಂಗ

ನುಡಿಸುವುದನ್ನು ತರಬೇತಿಗೊಳಿಸಿ ಈ ಭಾಗದಲ್ಲಿ ಉತ್ತಮ ತರಬೇತಿಗಾರರೆನಿಸಿಕೊಂಡು ಜಾನಪದ ಕಲಾ ದೇವತೆಯ ಸೇವೆಯನ್ನು ಮಾಡುತ್ತಿದ್ದಾರೆ.

ಸಂಪನ್ನ ಮತ್ತು ಬಹುಮುಖ ಪ್ರತಿಭೆ ಇದ್ದರೂ ಎಳ್ಳಷ್ಟು ಪ್ರಚಾರದ ಹಂಬಲವನ್ನು ಬಿಟ್ಟು ಕಾಯಕ ಸಿದ್ಧಾಂತದಲ್ಲಿ ನಡೆದವರು. ಇಂತಹ ಎಲೆಯುಮರೆಯ ಕಾಯಿಯಂತಿರುವ ಹಲವಾರು ಕಲಾವಿದರು ಬಾಗಲಕೋಟೆ ಜಿಲ್ಲೆಯಲ್ಲಿದ್ದಾರೆ. ಅವರಲ್ಲಿ ಇವರೂ ಒಬ್ಬರು. ಎಳ್ಳಷ್ಟು ಪ್ರತಿಫಲವನ್ನು ಬಯಸದೆ ತಮ್ಮ ಕಾರ್ಯವನ್ನು ನಿಯತ್ತಾಗಿ ಮಾಡುತ್ತಿರುವ ಇವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಬೇಕು. ಸರ್ಕಾರ, ಸಂಘ ಸಂಸ್ಥೆಗಳು ಇವರಿಗೆ ಪ್ರೋತ್ಸಾಹಿಸಬೇಕಾಗಿದೆ. ಸರ್ಕಾರದಿಂದ ದೊರೆಯುವ ಯಾವ ಯೋಜನೆಗಳು ಇವರಿಗೆ ಲಭಿಸಿಲ್ಲವೆಂದು ಅಭಿಮಾನಿಗಳ ಕೊರಗಾಗಿದೆ. ಇವರ ಆರು ದಶಕಗಳ ಕಲಾ ಸೇವೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಕರೆದು ಸನ್ಮಾನಿಸಿವೆ. ಆ ಸನ್ಮಾನಗಳಿಂದ ಇನ್ನಷ್ಟು ಕಲಾ ಸೇವೆ ಮಾಡಬೇಕೆಂಬ ಹುರುಪು ಬಂದಿದೆ ಎನ್ನುತ್ತಾರೆ ಶೇಷಪ್ಪಾ ಸೋನಾರ.

**ಶೇಷಪ್ಪಾ ನಾಗಪ್ಪಾ ಸೋನಾರ,**
**ಸಾ : ಕುಂಚನೂರ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

# ಸಂಗಯ್ಯ ಚಿನ್ನಯ್ಯ ಮಠಪತಿ

ಕರಡಿ ಸೊಂಟಕ್ಕೆ ಕಟ್ಟಿಕೊಂಡು ನುಡಿಸುತ್ತಾ ವೇದಿಕೆಯನ್ನೇರಿದರೆ ನೋಡಿದ ಪ್ರೇಕ್ಷಕರು ಚಪ್ಪಾಳೆ ತಟ್ಟದವರು ಯಾರು ಇಲ್ಲ ಅಂತಹ ಕರಡಿ ಮಜಲಿನ ಪ್ರವೀಣರು ಸಂಗಯ್ಯ ಮಠಪತಿ.

ಜಮಖಂಡಿ ತಾಲೂಕಿನ ಕುಂಚನೂರ ಎಂಬ ಕಲಾವಿದರ ಗ್ರಾಮದಲ್ಲಿ ಕಲಾವಿದರಾದ ಚಿನ್ನಯ್ಯ ಕಾಳವ್ವ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು. ಸ್ಥಳೀಯ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿಕೊಂಡು ಜಾನಪದ ಆರಾಧಕರಾಗಿ ಈ ಕರಡಿ ಮ್ಯಾಳದ ಬೆನ್ನು ಹತ್ತಿದರು. ತಂದೆಯವರ ಮಾರ್ಗದರ್ಶನದಲ್ಲಿ ಮಹಾದೇವ ಮುಗಳಖೋಡ, ಶಂಕರ ಬಜಂತ್ರಿ ಎಂಬುವವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಕರಡಿ ನುಡಿಸುವುದನ್ನು ಕರಗತ ಮಾಡಿಕೊಂಡರು. ನಂತರ ಶ್ರೀ ಮಲ್ಲಿಕಾರ್ಜುನ ಕರಡಿ ಮಜಲು ಸಂಘ ಕುಂಚನೂರು ಎಂಬ ತಂಡ ಕಟ್ಟಿ ನಾಡಿನ ತುಂಬೆಲ್ಲ ಹೆಸರು ಗಳಿಸಿದರು. ಈ ತಂಡದ ಎಲ್ಲ ಜವಾಬ್ದಾರಿಯನ್ನು ತಾವೇ ನಿರ್ವಹಿಸಕೊಂಡು ಹಲವಾರು ಏರುಪೇರುಗಳು ಬಂದರು ಒಂದೇ ಭಾವದಿಂದ ಸಂಘ ಮುನ್ನಡಿಸಿಕೊಂಡು ಬಂದಿದ್ದಾರೆ.

ನಾಲ್ಕು ತಲೆಮಾರಿನಿಂದ ಕಲಾಸೇವೆ : ಸಂಗಯ್ಯನವರ ಅಜ್ಜ ಮಲ್ಲಯ್ಯ ಪ್ರಸಿದ್ಧ ಕಲಾವಿದರು. ಇವರು ತಮ್ಮ ಮಗ ಚಿನ್ನಯ್ಯನವರಿಗೆ ಕಲೆಯನ್ನು ಧಾರೆ ಎರೆದು ಕೊಟ್ಟರು. ತಂದೆ ಹೇಳಿಕೊಟ್ಟಂತಹ ವಿದ್ಯೆಯನ್ನು ಚಿನ್ನಯ್ಯನವರು ತಮ್ಮ ಮಗನಾದ ಸಂಗಯ್ಯನವರಿಗೆ ಹೇಳಿಕೊಟ್ಟರು. ಇಂದು ಸಂಗಯ್ಯನವರು ತಮ್ಮ ೧೪ ವರ್ಷದ ಮಗ ಬಸಯ್ಯನಿಗೆ ಕರಡಿ ಮಜಲಿನ ವಿದ್ಯೆಯನ್ನು ಕಲಿಸುವದರ ಜೊತೆಗೆ ಸುಮಾರು

ಹತ್ತು ಜನ ಯುವಕಲಾವಿದರನ್ನು ಕೂಡಿಸಿ ತರಬೇತಿಗೊಳಿಸಿದ್ದಾರೆ. ಈ ಕಲೆಗಾಗಿ ನನ್ನ ಜನ್ಮವಿರುವವರೆಗೆ ದುಡಿಯುತ್ತೇನೆಂದು ಹೆಮ್ಮೆಯಿಂದ ಹೇಳುತ್ತಾರೆ.

ಈ ಕರಡಿ ಮಜಲು ಕುರಿತು ಹಲವಾರು ಕಾರ್ಯಕ್ರಮಗ ಸಂಘಟಿಸಿ ಹಿರಿ ಕಲಾವಿದರುಗಳನ್ನು ಸನ್ಮಾನಿಸಿ ಅವರಿಗೆ ಪ್ರೋತ್ಸಾಹ ನೀಡುವ ಕೆಲಸಮಾಡಿ ಇತರರಿಗೆ ಮಾದರಿಯಾಗಿದ್ದಾರೆ. ಕಲಾಕುಟುಂಬದಲ್ಲಿ ಹುಟ್ಟಿ ಬಂದ ಇವರು ಕಲೆಗಾಗಿ, ಕಲೆಯ ಉಳಿವಿಗಾಗಿ ಸಂಘಟಿತರಾಗಿ ಸೇವೆ ಮಾಡಿ ಕಲಾವಿದರ ಅಭಿವೃದ್ಧಿಗಾಗಿ ಹಾಗೂ ಅವರಿಗೆ ನ್ಯಾಯ ದೊರಕಿಸುವಂತೆ ಹೋರಾಡುವ ಆಶಾಭಾವನೆ ಹೊಂದಿ ಚಿಂತನ ಶೀಲ ಕ್ರಿಯಾಶೀಲ ವ್ಯಕ್ತಿತ್ವ ಸಂಗಯ್ಯ ಮಠಪತಿ ಇವರದು. ಕರಡಿಮಜಲಿನ ಎಲ್ಲ ತಾಳಗಳನ್ನು ಕೇಳಿದರೂ ಬಾರಿಸಿ ತೋರಿಸುವಂತ ಪ್ರಬುದ್ಧ ಪ್ರತಿಭೆಯನ್ನು ನೋಡಿ ಹಲವಾರು ಜನ ಪ್ರಶಸ್ತಿ ನೀಡಿ ಪುರಸ್ಕರಿಸಿದ್ದಾರೆ.

ಪ್ರಶಸ್ತಿಗಳು : ಇವರ ನಾಲ್ಕು ದಶಕಗಳ ಕಲಾ ಸೇವೆಯನ್ನು ಕಂಡು ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು ಇವರು ೨೦೦೬ರಲ್ಲಿ ಜಾನಪದಲೋಕ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಬಾಗಲಕೋಟ ಜಿಲ್ಲಾ ಕಲಾವಿದರ ಮೇಳದಲ್ಲಿ ಸನ್ಮಾನ, ಸವದತ್ತಿ ಯಲ್ಲಿ ಸನ್ಮಾನ, ಅಮ್ಮನಗುಡಿ ಉತ್ಸವದಲ್ಲಿ ಸನ್ಮಾನ, ಕುಂಚನೂರ, ಇಂಗಳಗಿ, ಬೆಂಗಳೂರುಗಳಲ್ಲಿ ಸನ್ಮಾನಿಸಿದ್ದಾರೆ.

ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಹಲವಾರು ಗ್ರಾಮಗಳಲ್ಲಿ ಕಲಾಸೇವೆ ಸಲ್ಲಿಸಿ ಪ್ರೇಕ್ಷಕರಿಗೆ ರಸದೌತಣ ಉಣಬಿಡಿಸಿದ್ದಾರೆ. ಹಲವಾರು ರಾಷ್ಟ್ರೀಯ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಈ ಸನ್ಮಾನ ಪುರಸ್ಕಾರಗಳಿಂದ ನನಗೆ ಮತ್ತಷ್ಟು ಹುರುಪು ಬಂದಿದೆ. ಜೀವಮಾನವಿಡಿ ಈ ಕಲೆ ಉಳಿವಿಗಾಗಿ ದುಡಿಯುತ್ತೇನೆಂದು ಹೆಮ್ಮೆಯಿಂದ ಹೇಳುವ ಸಂಗಯ್ಯನವರಿಗೆ ಇನ್ನಷ್ಟು ಪ್ರೋತ್ಸಾಹ ದೊರೆಯಬೇಕು.


ಸಂಗಯ್ಯ ಚಿನ್ನಯ್ಯ ಮಠಪತಿ
ಸಾ : ಕುಂಚನೂರ,
ತಾ : ಜಮಖಂಡಿ, ಜಿ : ಬಾಗಲಕೋಟೆ.

# ಶಂಕ್ರಪ್ಪ ಸಾಬಣ್ಣ ಭಜಂತ್ರಿ

ಕಲಾವಿದರ ತವರು ತಾಲೂಕು ಜಮಖಂಡಿ ಇಲ್ಲಿಂದ ಸುಮಾರು ೧೫ ಕಿ.ಮೀ. ಚಲಿಸಿದರೆ (ಪೂರ್ವಾಭಿಮುಖ) ಸಿಗುವ ಪುಟ್ಟ ಗ್ರಾಮ ಮುಂಡಗನೂರು. ಧಾರ್ಮಿಕ ಹಾಗೂ ಕೃಷಿಯಲ್ಲಿ ತನ್ನದೇ ಆದ ಹೆಸರು ಮಾಡಿ ಇಂತಹ ಊರಿನ ಬಡ ಕುಟುಂಬದ ಸಾಬಣ್ಣ ಚೆಂದ್ರವ್ವ ಎಂಬ ದಂಪತಿಗಳ ಹೊಟ್ಟೆಯಲ್ಲಿ ಶಂಕರಪ್ಪನವರು ೧೫-೯-೧೯೩೧ರಲ್ಲಿ ಬಡ ಕುಟುಂಬದಲ್ಲಿ ಜನಿಸಿದರು. ಇವರ ತಂದೆಯವರು ಕಷ್ಟಪಟ್ಟು ನಾಲ್ಕನೇಯ. ತರಗತಿಯವರೆಗೆ ಓದಿಸಿದರು. ವಂಶಪರಂಪರೆಯಿಂದ ಬಂದ ಈ ಶಹನಾಯಿ ನುಡಿಸುವುದನ್ನು ಪ್ರಾಥಮಿಕವಾಗಿ ಇವರ ತಂದೆಯವರ ಹತ್ತಿರ ಕಲಿತರು. ಮುಂದೆ ಭೀಮಸಿ ಬಜಂತ್ರಿ ಸಾ : ಬೊರೆಗಾಂವ, ತಾ : ಸಾಂಗ್ಲಿ ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಸಂಪೂರ್ಣ ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿದರು. ಸುವಾರು ೨೦ನೇ ವರ್ಷದಲ್ಲಿ ಕಲಾಸೇವೆಗೆ ತಮ್ಮನ್ನು ತೊಡಗಿಸಿಕೊಂಡು ಇಲ್ಲಿಯವರೆಗೆ ನಾಡಿನಲ್ಲಿ ಹಲವಾರು ಜನರಿಗೆ ವಿದ್ಯೆಯನ್ನು ಕಲಿಸುವುದರ ಜೊತೆಗೆ ಜನಮೆಚ್ಚುಗೆ ಗಳಿಸಿದ್ದಾರೆ.

**ಶಿಷ್ಯ ಬಳಗ :**

| | |
|---|---|
| ಹಲಗೆ ಮಜಲು– | ಶ್ರೀ ಹಣಮಂತ ಬಡಿಗೇರ, ಕಾಳಪ್ಪ ಬಡಿಗೇರ, ಸಿದ್ಧಪ್ಪ ಡೋಲಕ ಸಾ : ಶಿರೋಳ |
| ತಾಸೆ ವಾದನ – | ಬಸಪ್ಪ ಮುಂಡಗನೂರ ಸಾ : ಶಿರೋಳ |
| ಶಹನಾಯಿ – | ದಾನಪ್ಪ ಮುಂಡಗನೂರ ಸಾ : ಶಿರೋಳ |
| ಕಣಿ – | ಸಿದ್ಧಪ್ಪ ಡೋಲಕ ಸಾ : ಶಿರೋಳ |
| ಡೊಳ್ಳು ಕೈಪೆಟ್ಟು – | ಫಕೀರಪ್ಪ ಬಜಂತ್ರಿ ಸಾ : ನಾಗನೂರ |
| ಕರಡಿ ಮಜಲು – | ಕಾಳಪ್ಪ ಬಡಿಗೇರ ಸಾ : ಶಿರೋಳ |

ಹಲಗೆ, ತಾಸೆ, ಶಹನಾಯಿ ಕಣಿ, ಕೊಳಲು, ಬಾರಿಸುವದನ್ನು ಕರತಲಾಮಲಕ ಮಾಡಿಕೊಂಡ ಶ್ರೀಯುತರು ಕಲೆಗಾಗಿ ತಮ್ಮ ಜೀವನ ಮುಡುಪಾಗಿಟ್ಟವರು. ನಾಡಿನ ಹಲವಾರು ಪ್ರದೇಶಗಳಲ್ಲಿ ಮತ್ತು ದಿಗ್ಗಜರ ಮುಂದೆ ತಮ್ಮ ಕಲೆಯನ್ನು ಪ್ರದರ್ಶನಮಾಡಿ ಜನ ಮೆಚ್ಚುಗೆ ಪಡೆದುಕೊಂಡಿದ್ದಾರೆ. ಮೊದಮೊದಲು ನಾಟಕ ಅಭಿನಯದ ಮೂಲಕ ಈ ಚರ್ಮವಾದ್ಯಗಳನ್ನು ನುಡಿಸುವ ಹಾಗೂ ಈ ಕಲೆಯನ್ನು ಶಿಷ್ಯ ಬಳಗಕ್ಕೆ ಕಲಿಸುವುದನ್ನು ರೂಢಿಸಿಕೊಂಡು ಹೆಸರುವಾಸಿಯಾಗಿರುವ ಇವರ ಕಲೆಯನ್ನು ಕಂಡು ಹಲವಾರು ಮುಖಂಡರು, ಮಠಾಧೀಶರು ಪುರಸ್ಕರಿಸಿವೆ. ಜಾನಪದ ಸಂರಕ್ಷಣಾ ಪರಿಷತ್ತು ಯಂಡಿಗೇರಿ, ಕನ್ನಡ ಸಾಹಿತ್ಯ ಪರಿಷತ್ತು ಬೀಳಗಿ, ನವ್ಯ ಕಲಾ ಕಿರಣ ಸಂಸ್ಥೆ ಗಲಗಲಿ ಸಂಸ್ಥೆಗಳು ಸನ್ಮಾನಿಸಿ ಪ್ರೋತ್ಸಾಹಿಸಿವೆ. ಇಂತಹ ಪ್ರಬುದ್ಧ ಕಲಾವಿದನಿಗೆ ರಾಜ್ಯ ಸರ್ಕಾರ ಕೊಡ ಮಾಡುವ ಮಾಸಾಶನ ದೊರೆಯುತ್ತಿದೆ. ಇದ್ದುದರಲ್ಲಿಯೇ ಸಂತೃಪ್ತ ಜೀವನ ಸಾಗಿಸಿದ ಇವರ ಜೀವನ ಶೈಲಿಯನ್ನು ಎಲ್ಲರೂ ನೋಡಿ ಕಲಿಯಬೇಕಾಗಿದೆ.

ಶಂಕರ ಸಾಬಣ್ಣ ಭಜಂತ್ರಿ,<br>ಸಾ : ಮುಂಡಗನೂರ,<br>ತಾ : ಬೀಳಗಿ, ಜಿ : ಬಾಗಲಕೋಟೆ.

## ಬಸವರಾಜ ಹ. ಭಜಂತ್ರಿ

ಶಹನಾಯಿ, ಕೊಳಲು, ಹಾರ್ಮೋನಿಯಂದಂತ ಎಲ್ಲ ವಾದ್ಯಪರಿಕರಗಳನ್ನು ಚೆನ್ನಾಗಿ ನುಡಿಸುವದನ್ನು ಕರಗತ ಮಾಡಿಕೊಂಡವರು ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನ ಅಮರಾವತಿಯ ಬಸವರಾಜ ಭಜಂತ್ರಿಯವರು.

ಅಮರಾವತಿಯಂತ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿದ ಬಸವರಾಜ ಶಿಕ್ಷಣವನ್ನು ಪಡೆದದ್ದು ಅಷ್ಟಕಷ್ಟೆ. ಅದನ್ನು ಪೂರ್ಣಗೊಳಿಸದೆ ಶ್ರೀ ಫಕೀರಪ್ಪ ಬುಶಪ್ಪ ಭಜಂತ್ರಿಯವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಅಭ್ಯಾಸದಲ್ಲಿ ತೊಡಗಿಕೊಂಡರು. ಇದಲ್ಲದೆ ನಾಡಿನ ಹೆಸರಾಂತ ಗವಾಯಿಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಕಲಿತುಕೊಂಡು ನಾಡಿನ ಉದ್ದಗಲಕ್ಕೂ ಹೆಸರು ಮಾಡಿದವರು. ಕೇವಲ ೮ ವರ್ಷಗಳಲ್ಲಿ ಸಂಗೀತಾಭ್ಯಾಸದಲ್ಲಿ ತೊಡಗಿಕೊಂಡು ಪ್ರಾಯದ ವಯಸ್ಸಿಗೆ ಬರುವಷ್ಟರಲ್ಲಿ ಹೆಸರು ಗಳಿಸಿ ರಾಜ್ಯದ ಎಲ್ಲ ಆಕಾಶವಾಣಿ ಕೇಂದ್ರಗಳಿಂದ ಹಾಗೂ ದೂರದರ್ಶನಗಳಲ್ಲಿ ಇವರ ಕಲೆ ಪ್ರಸಾರಗೊಂಡಿದೆ. ಗಾಯನದ ವಿದ್ವತ್ ಪಾಸುಮಾಡಿಕೊಂಡಿರುವ ಇವರು ಆಕಾಶವಾಣಿ "ಬಿ" ಗ್ರೇಡ್ ಪರೀಕ್ಷೆಯಲ್ಲಿ ಪಾಸಾಗಿ ಆಕಾಶವಾಣಿ ಕಲಾವಿದರಾಗಿ ಸೇವೆಸಲ್ಲಿಸಿದ್ದಾರೆ. ಮೊದ ಮೊದಲು ಗ್ರಾಮೀಣ ನಾಟಕಗಳಿಗೆ. ಕೊಳಲು ಕ್ಲಾರಿನೇಟ್ ನುಡಿಸಲು ಸುತ್ತಾಡಿ ಸುಮಾರು ನಾಟಕಗಳಿಗೆ ಸಾತ್ ನೀಡಿದ್ದಾರೆ.

ಸಂಗೀತ ಕ್ಷೇತ್ರದಲ್ಲಿ ಹೆಸರು ಗಳಿಸಿದ ಶ್ರೀ ಭೀಮಸೇನ ಜೋಶಿ, ಪರ್ವಿನ ಸುಲ್ತಾನ್, ಅಮ್ಜದಲಿಖಾನ್, ಎಂ. ವೆಂಕಟೇಶ ಕುಮಾರ್, ಭಾಲಚಂದ್ರ ನಾಕೋಡ, ಅರ್ಜುನಸಾ ನಾಕೋಡ ಸೂರಜ ಪುರಂಧರೆ ಡಿ. ಕುಮಾರದಾಸರಂತ, ಘಟಾನುಘಟಿ ಗಳೊಂದಿಗೆ ಕಾರ್ಯಕ್ರಮ ನೀಡಿ ನಾಡಿನ ಉದ್ದಗಲಕ್ಕೂ ಹೆಸರು ಮಾಡಿದ್ದಾರೆ. ಸಂಗೀತ ಕ್ಷೇತ್ರದ ದಿಗ್ಗಜರಾದ ಪಂ. ಬಸವರಾಜ ರಾಜಗುರು, ಪಂಚಾಕ್ಷರಿ ಮತ್ತಿಕಟ್ಟಿ, ಅರ್ಜುನಸಾ

ನಾಕೋಡ, ಚನ್ನಪ್ಪ ಬನ್ನೂರಂತಹ ಹಿರಿಯರು ತೋರಿಸಿದ ಮಾರ್ಗದಲ್ಲಿ ಕಲಾಸೇವೆಯಲ್ಲಿ ನಡೆದಿದ್ದೇನೆಂದು ವಿನಮ್ರವಾಗಿ ಹೇಳುವ ಬಸವರಾಜ ಒಬ್ಬ ಶ್ರೇಷ್ಠ ಕಲಾವಿದನ ಎಲ್ಲ ಗುಣಗಳು ಅವರಲ್ಲಿ ಎದ್ದು ಕಾಣುತ್ತವೆ. ಮೈಸೂರ ದಸರಾ, ಹಂಪಿ ಉತ್ಸವ, ಚಾಲುಕ್ಯ ಉತ್ಸವ, ನವರಸಪುರ ಉತ್ಸವ ಹಾಗೂ ನಾಡಿನ ವಿವಿಧ ಭಾಗಗಳಲ್ಲಿ ತಮ್ಮ ಸಂಗೀತ ಕಾರ್ಯಕ್ರಮ ನೀಡಿ ಪ್ರೇಕ್ಷಕರ ಮನಸ್ಸು ಸೂರೆಗೊಂಡಿದ್ದಾರೆ.

ಜನಪದ ಕಲೆಗಳು ನಶಿಸಬಾರದು ಆ ಕಲೆ ಮುಂದಿನ ಜನತೆಗೆ ಬಳುವಳಿಯಾಗಿ ಉಳಿಯಲೆಂದ ಸದಾಶಯ ಹೊತ್ತ ಬಸವರಾಜ ಹಲವಾರು ಯುವಕರಿಗೆ ಈ ಕಲೆಯ ಬಗ್ಗೆ ತರಬೇತಿ ಕೊಡುತ್ತಾ, ಹಲವಾರು ಕಾರ್ಯಕ್ರಮ ಸಂಘಟಿಸುತ್ತು ಈ ಕಲೆ ಉಳಿವಿಗಾಗಿ, ಬೆಳವಣಿಗೆಗಾಗಿ ಸಾರ್ಥಕ ಪ್ರಯತ್ನದಲ್ಲಿ ತೊಡಗಿದ್ದಾರೆ. ಉತ್ತಮ ಸಂಘಟಿತ ಕಾರ್ಯದಲ್ಲಿ ಕಲಾಜೀವ ನಡೆಸುತ್ತಿರುವ ಈ ಕಲಾ ಸಿರಿವಂತಿಕೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಪುರಸ್ಕರಿಸುವದರ ಜೊತೆಗೆ ಕರ್ನಾಟಕ ನಾಗರಿಕ ವಿಚಾರ ವೇದಿಕೆ ಬೆಂಗಳೂರು ಇವರು "ಕರ್ನಾಟಕ ಭೂಷಣ ಪ್ರಶಸ್ತಿ" ನೀಡಿ ಸನ್ಮಾನಿಸಿವೆ. ಇಂತಹ ಶ್ರೇಷ್ಠ ಕಲಾವಿದನನ್ನು ಪ್ರೋತ್ಸಾಹಿಸುವ ಕೆಲಸ ಇನ್ನೂ ಆಗಬೇಕಾಗಿದೆ.

**ಬಸವರಾಜ ಹ. ಭಜಂತ್ರಿ,**
**ಸಾ : ಅಮರಾವತಿ,**
**ತಾ : ಹುನಗುಂದ, ಜಿ : ಬಾಗಲಕೋಟೆ.**

## ತಿಮ್ಮಣ್ಣ ಹಣಮಂತ ಭಜಂತ್ರಿ

ವಂಶಪರಂಪರಾಗತವಾಗಿ ಸಾಗಿ ಬಂದ ಜಾನಪದ ಕಲೆಗಳಾದ ಶಹನಾಯಿ, ಸಂಪ್ರದಾಯಿವಾದನ, ಕರಡಿ ಮಜಲು, ತಾಸೆವಾದನಗಳಂತ ಶ್ರೇಷ್ಠ ಕಲೆಗಳನ್ನು ತಮ್ಮ ವಂಶಸ್ಥರು ಕಲಿತುದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಕಲಿತು ಹೆಸರು ಮಾಡಿದವರು ತಿಮ್ಮಣ್ಣ ಬಜಂತ್ರಿ.

ಮುಧೋಳ ತಾಲೂಕಿನ ಆಲಗುಂಡಿ ಬಿ. ಕೆ. ಎಂಬ ಗ್ರಾಮದ ಹನಮಂತ ಮತ್ತು ಚೌಡವ್ವ ಎಂಬ ಕಲಾವಿದರ ಉದರದಲ್ಲಿ ಹುಟ್ಟಿದ ತಿಮ್ಮಣ್ಣ, ತಾತ ಮುತ್ತಾತರಿಂದ ಬಳುವಳಿಯಾಗಿ ಬಂದ ಮೂಲ ಉದ್ಯೋಗವಾದ ಶಹನಾಯಿ ತಾಸೆವಾದನಗಳನ್ನು ಅವರ ತಂದೆಯವರಿಂದ ಕಲಿತುಕೊಂಡರು. ಈ ಕಲೆಯ ಬಗ್ಗೆ ವಿಶೇಷವಾದ ಆಸಕ್ತಿ ವಹಿಸಿ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತೊಡಗಿಸಿಕೊಂಡುದರ ಫಲವಾಗಿ ಅವರಿಗೆ ಉತ್ತಮ ಸಂಬಳ ದೊರೆಯುವದರ ಜೊತೆಗೆ ನಾಡಿನ ತುಂಬೆಲ್ಲಾ ಕೀರ್ತಿಯು ಬೆಳೆಯಿತು. ಶಹನಾಯಿ ನುಡಿಸುವುದರಲ್ಲಿ ಪ್ರೇಕ್ಷಕರಿಗೆ ಇಷ್ಟವಾದ ರಾಗವನ್ನು ನುಡಿಸಿ ಕೇಳುಗರನ್ನು ಖುಷಿಪಡಿಸುವದು ನಿಜವಾದ ಕಲಾವಿದನ ಕರ್ತವ್ಯವೆಂದು ತಿಳಿದು ಪ್ರೇಕ್ಷಕರ ಮನದಿಚ್ಛೆಯಂತೆ ಕಾರ್ಯಕ್ರಮ ನೀಡಿ ಉತ್ತಮ ಕಲಾವಿನೆನಿಸಿ ಕೊಂಡಿದ್ದಾರೆ. ಕೇವಲ ಹಣಕ್ಕಾಗಿ ಆಸೆ ಮಾಡದೆ, ಕಲೆ ಪ್ರಚಾರಕ್ಕೆ ನಾಡಿನ ತುಂಬೆಲ್ಲ ಸಂಚರಿಸಿ ಈ ಕಲೆಗಾಗಿ ದುಡಿದಿದ್ದಾರೆ. ಈ ಕಲೆ ನಶಿಸಬಾರದು ಎಂಬ ಹಿರಿಯಾಸೆಯಿಂದ, ಬನ್ನೂರ, ಸಾಲಹಳ್ಳಿ, ಸಪ್ಪಡ, ಚಿಲಮೂರು, ತುರನೂರು, ಆಲಗುಂಡಿ, ನರಸಾಪೂರ, ಉತ್ತೂರುಗಳಲ್ಲಿ ಯುವ ಕಲಾವಿದರುಗಳಿಗೆ ಶಹನಾಯಿ, ತಾಸೆವಾದನ, ಕರಡಿಗಳ ಬಗ್ಗೆ ತರಬೇತಿ ನೀಡಿ ಸುಮಾರು ಎರಡುನೂರು ಯುವ ಕಲಾವಿದರನ್ನು ತಯಾರಿಸಿ ಈ ಕಲೆಯ ಉಳಿವಿಗಾಗಿ ಎಲೆಮರೆಕಾಯಿಯಂತೆ ಸೇವಾ ಕಾರ್ಯದಲ್ಲಿ ತೊಡಗಿದ ತಿಮ್ಮಣ್ಣರ ಬಗ್ಗೆ ಎಷ್ಟು

ಹೇಳಿದರು ಕಡಿಮೆ. ಇಂತಹ ಪ್ರತಿಭಾವಂತ ಕಲಾವಿದ ಜೀವನದಲ್ಲಿ ನೋವುಂಡು ಬೆಳೆದು ಯಾವ ಪ್ರತಿಷ್ಠೆ, ಪ್ರಶಸ್ತಿಗೆ ಆಸೆಮಾಡದೇ ತನ್ನ ಕಾಯಕದಲ್ಲಿ ನಿಷ್ಠೆಯಿಂದ ದುಡಿದವನು. ಇಂತಹ ಕಲಾವಿದನ ಕಲೆಯನ್ನು ಕಂಡು ಹಲವಾರು ಗ್ರಾಮೀಣ ಸಂಘಟನೆಗಳು, ಸಾಧು ಸಂತರ, ರಾಜಕಾರಣಿಗಳ ಸಭೆ ಸಮಾರಂಭಗಳಲ್ಲಿ ಗೌರವದಿಂದ ಕರೆದು ಸನ್ಮಾನಿಸಿ ಪ್ರೋತ್ಸಾಹಿಸಿದ್ದಾರೆ. ಇಂತಹ ಪ್ರೋತ್ಸಾಹದಿಂದ ಮತ್ತಷ್ಟು ಹುರುಪುಗೊಂಡ ತಿಮ್ಮಣ್ಣ ನಾಡಿನ ಉದ್ದಗಲಕ್ಕೂ ಸಂಚರಿಸಿ ಕಲೆಗಾಗಿ ತನ್ನ ಜೀವನವನ್ನೆ ಮುಡಿಪಿಟ್ಟು ದುಡಿಯುತ್ತಿದ್ದಾನೆ. ಇಂತವರನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಮತ್ತಷ್ಟು ಕೆಲಸ ಮಾಡುವ ಪ್ರವೃತ್ತಿ ಅವರಲ್ಲಿ ಹೆಚ್ಚಿಸಿದಂತಾಗುತ್ತದೆ. ಕೇವಲ ಒಂದುನೂರು ರೂಪಾಯಿ ಗೌರವ ಧನಕ್ಕೆ ಕಲಾ ಸೇವೆ ಮಾಡುತ್ತಿದ್ದ ನನಗೆ ಇಂದು ನಾಲ್ಕು ಸಾವಿರ ರೂಪಾಯಿಗಳನ್ನು ಕೊಟ್ಟು ಪ್ರೋತ್ಸಾಹಿಸುವ ಕಲಾಬಂಧುಗಳ ಋಣವನ್ನು ನನ್ನ ಜೀವನದಲ್ಲಿ ನಾನು ಎಂದಿಗೂ ಮರೆಯುವಂತಿಲ್ಲಾ ಎಂದು ವಿನಮ್ರವಾಗಿ ಹೇಳುವ ತಿಮ್ಮಣ್ಣ ಮುಂದಿನ ದಿನಗಳಲ್ಲಿ ರಾಷ್ಟಮಟ್ಟದ ಕಲಾವಿದನಾಗಿ ನಾಡಿಗೆ ಹೆಮ್ಮೆ ತರಲೆಂಬುದು ನಮ್ಮೆಲ್ಲರ ಆಸೆಯಾಗಿದೆ.

ತಿಮ್ಮಣ್ಣ ಹ. ಭಜಂತ್ರಿ,<br>ಆಲಗುಂಡಿ ಬಿ.ಕೆ.,<br>ತಾ : ಮುಧೋಳ, ಜಿ : ಬಾಗಲಕೋಟೆ.

## ಬಾಗವ್ವ ಭೀಮರಿತೆವ್ವ ಕಮತಗಿ

ಶಿವಶಿವನೆಂದರ ಶಿವನೇನ ದೂರಿಲ್ಲ
ಶಿವದಾರವು ನಮ್ಮ ಕೊರಳಾಗ/ಪಂಚ
ಮುಖದ ವಿಭೂತಿ ನಮ್ಮ ನೊಸಲಾಗ ॥

ಎಂದು ಹಾಡಿ ಜನರನ್ನು ಖುಷಿ ಪಡಿಸುವ ಬಾಗವ್ವನವರು ಬಾದಾಮಿ ತಾಲೂಕಿನ ಕೆರೂರ ಎಂಬ ಪಟ್ಟಣದವರು. ೧೨-೪-೧೯೩೩ರಲ್ಲಿ ಜನಿಸಿದ ಇವರು ಚಿಕ್ಕಂದಿನಿಂದಲೆ ಸೂರವ್ವ ಸೊನ್ನೂರ ಇವರ ಮಾರ್ಗದರ್ಶನದಲ್ಲಿ ಸೋಬಾನ ಪದ, ಬೀಸುವ ಪದ, ಮದುವೆ ಹಾಡು, ಹಲವಾರು ಗ್ರಾಮೀಣ ಸೊಗಡಿನ ಹಾಡುಗಳನ್ನು ಕಲಿತು ಹಾಡುಗಳ ದೊರೆಸಾನಿಯಾಗಿ ರೂಪಗೊಂಡಳು. ಈ ಹಾಡುಗಳನ್ನು ಕಲಿತು ಸುಮ್ಮನೆ ಕುಳಿತು ಕೊಳ್ಳದೆ ಶ್ರೀಮತಿ ಪ್ರೇಮಾ ಬೇಲಿಯಾಳ, ಗಿರಿಜಾಬಾಯಿ ಘಂಟಿ, ಉತ್ತರವ್ವ ಗದ್ದನಕೇರಿ ಎಂಬ ಮಹಿಳೆಯ ತಂಡ ಕಟ್ಟಿಕೊಂಡು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಪ್ರದರ್ಶನ ನೀಡಿದ್ದಾರೆ.

ಕಳೆದ ೫ ದಶಕದಿಂದ ಈ ತಂಡ ಕಟ್ಟಿಕೊಂಡು ಕಲಾಸೇವೆ ಮಾಡುತ್ತಿರುವ ಭಾಗವ್ವನವರ ಧೈರ್ಯ ಮೆಚ್ಚುವಂತದೆ. ಇವರ ಕಲೆಗೆ ಹಲವಾರು ಜನ ಪ್ರೋತ್ಸಾಹ ನೀಡಿದ್ದು ಅವರೆಲ್ಲ ಅತಿ ವಿನಮ್ರವಾಗಿ ನೆನೆಯುವ ಬಾಗವ್ವ ಮುಗ್ಧ ಸ್ವಭಾವದವರು. ಕಲೆಗಾಗಿ ತಮ್ಮನ್ನು ಸಮರ್ಪಿಸಿಕೊಂಡವರು. ಇವರ ಹಾಡುಗಳು ಆಕಾಶವಾಣಿ ಧಾರವಾಡ ಹಾಗೂ ದೂರದರ್ಶನ ಬೆಂಗಳೂರುಗಳಿಂದ ಪ್ರಸಾರವಾಗಿವೆ.

ಚಾಲುಕ್ಯ ಉತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಆರೋಗ್ಯ ಇಲಾಖೆಯ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜನತೆಯಲ್ಲಿ ಜಾಗೃತಿ ಮೂಡಿಸುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅದು ಅಲ್ಲದೆ ಹಲವಾರು ಯುವತಿಯರಿಗೆ ಈ

ಸಂಪ್ರದಾಯದ ಹಾಡುಗಳನ್ನು ಕಲಿಸುತ್ತಾ ಅವರಿಂದ ಆ ಪಾಡುಗಳನ್ನು ಕೇಳಿಸಿಕೊಂಡು ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

ಇವರ ಅಖಂಡ ಕಲಾ ಸೇವೆಯನ್ನು ಪರಿಗಣಿಸಿ ಜಿಲ್ಲಾ ಆಡಳಿತ ಬಾಗಲಕೋಟೆ, ಸಾಹಿತ್ಯ ಪರಿಷತ್ತು ಮತ್ತು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಪ್ರೋತ್ಸಾಹಿಸಿವೆ. ಇಂತಹ ಶ್ರೇಷ್ಠ ಕಲಾವಿದರಿಗೆ ಮತ್ತು ಸಮಾಜಮುಖಿ ಸೇವೆ ಮಾಡುವ ಕಲಾವಿದರಿಗೆ ಉತ್ತಮ ಅವಕಾಶಗಳು ಸಿಗಬೇಕು. ದೇವರು ಅವರಿಗೆ ಇನ್ನಷ್ಟು ಕಲಾಸೇವೆ ಮಾಡುವಂತಹ ಆಯುಷ್ಯ ಆರೋಗ್ಯ ದಯಪಾಲಿಸಲಿ ಎಂಬುದು ಅವರ ಹಾಡು ಕೇಳಿದ ಅಭಿಮಾನಿಗಳದ್ದಾಗಿದೆ.

**ಬಾಗವ್ವ ಭೀ. ಕಮತಗಿ,**
**ಲಕ್ಷ್ಮೀ ಗುಡಿಯ ಹತ್ತಿರ, ಹೊಸಪೇಟ, ಕೆರೂರ,**
**ತಾ : ಬಾದಾಮಿ, ಜಿ : ಬಾಗಲಕೋಟೆ.**

## ದಾನವ್ವ ಮುರುಗಯ್ಯ ಕಲ್ಮಠ

ಸೋಬಾನಪದ, ಮದುವೆಹಾಡು, ಸೀಗಿಪದ, ಗೌರಿಪದ, ಮಂಗಳಾರತಿ ಪದ, ಬೀಸುವ ಹಾಡು ಎಲ್ಲ ಪ್ರಕಾರ ಹಾಡುಗಳನ್ನು ತಮ್ಮದೆ ಧಾಟಿಯಲ್ಲಿ ಹಾಡಿ ತೋರಿಸುವ ಧಾನಮ್ಮ ಕಲ್ಮಠ ಇವರು ಜಮಖಂಡಿ ತಾಲೂಕಿನ ಹುಲಿಯಾಳದವರು. ತಂದೆ ಮಹಾಲಿಂಗಯ್ಯ, ತಾಯಿ ಬಾಗವ್ವ ಎಂಬ ಶರಣ ದಂಪತಿಗಳ ಉದರದಲ್ಲಿ ೧೯೪೦ರಲ್ಲಿ ಜನಿಸಿದವರು.

ಹಿರೇಮಠದ ವಂಶದಲ್ಲಿ ಹುಟ್ಟಿದ ಇವರು ಹಲವಾರು ಕಲೆಯನ್ನು ತಮ್ಮ ತಂದೆಯರಿಂದ ಕಲಿತುಕೊಂಡರು. ಶ್ರೀ ಮಹಾಲಿಂಗಯ್ಯ ಎಂಬುವವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡರು ಭಜನೆಪದ ಹಾಡುವುದನ್ನು ಕಲಿತುಕೊಂಡರು. ಸುಮಾರು ೨೦ ವರ್ಷದಲ್ಲಿಯೇ ಹಲವಾರು ಸಮಾಜ ಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಈ ಹಾಡುಗಾರಿಕೆಗಳನ್ನು ಹಲವಾರು ಯುವತಿಯರಿಗೆ ಮಾರ್ಗದರ್ಶನ ನೀಡಿದ್ದಾರೆ.

ಗುರು ಎಂದರೆ ಗುರು ಎಲ್ಲಿ ದೊರೆತಾನ
ಗುರು ನಮ್ಮ ಮನದಾಗ ಇರತಾನ

ಎಂಬ ತತ್ವದ ಪದಗಳನ್ನು ಹಾಡಿ ನಾಡಿನ ಜನರನ್ನು ಪ್ರೇಕ್ಷಕರ ಮನಸ್ಸು ಗೆದ್ದವರು. ಎಲ್ಲಾ ಹಾಡುಗಳು ಸೇರಿ ಅಂದಾಜು ೮೦೦ ಪದಗಳನ್ನು ಕಂಠಪಾಠ ಮಾಡಿರುವ ಇವರು ನಮಗೆ ಬೇಕಾದದ್ದನ್ನು ಹೇಳಿ ಖುಷಿಪಡಿಸುತ್ತಾರೆ. ಸ್ತ್ರೀ ಶಕ್ತಿ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಕ್ಷರತೆ, ಮೂಢನಂಬಿಕೆಯಂತ ಹಲವಾರು ಸಾಮಾಜಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಕಲೆಯನ್ನು ಕಂಡು ಹಲವಾರು ಮಠಾಧೀಶರು ಸಂಘದವರು ಸನ್ಮಾನಿಸಿದ್ದಾರೆ. ಹಲವಾರು ಮಹಾನಗರಳಲ್ಲಿ

ಇವರ ಕಲಾಪ್ರದರ್ಶನವಾಗಿದೆ. ಸಂಗೀತ ಸೇವೆ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದು ಖುಷಿ ಇಂದ ಹೇಳುವ ಅಜ್ಜಿಯವರ ಮಾತು ಇತರೇ ಯುವತಿಯರಿಗೆ ಮಾರ್ಗದರ್ಶನದ ಮಾತುಗಳಾಗಿವೆ. ಇವರಿಗೆ ರಾಜ್ಯ ಸರ್ಕಾರದಿಂದ ದೊರೆಯುವ ಕಲಾವಿದರ ಮಾಸಾಶನ ದೊರೆತಿದ್ದು, ಅದನ್ನೇ ಪಡೆದು ಕಲೆಯ ಉಳಿವಿಗಾಗಿ ತಮ್ಮ ಸೇವೆಯನ್ನು ಮಾಡುತ್ತಿದ್ದಾರೆ.

ದಾನಮ್ಮ ಮುರುಗಯ್ಯ ಕಲ್ಮಠ,<br>
ಸಾ : ಹುಲಿಯಾಳ,<br>
ತಾ : ಜಮಖಂಡಿ, ಜಿ : ಬಾಗಲಕೋಟೆ.

## ಈಶ್ವರಪ್ಪ ಗು. ಅಂಗಡಿ

ವೀರಭದ್ರ ದೇವರ ಒಡಪು, ಜಾನಪದ ಕತೆ, ಬೀಸುವ ಹಾಡು, ಗೌರಿಹಾಡು, ಸೀಗವ್ವನ ಹಾಡು ಯಾವುದನ್ನು ಬೇಕಾದರೂ ಕೇಳಿದರೆ ಒಂದು ಸ್ಯಾಂಪಲ್ ಹಾಡಿ ತೋರಿಸುವ ಈಶ್ವರಪ್ಪ ಅಂಗಡಿಯವರು ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಗದ್ದಗಿರಿಯವರು. ಬಹಳಷ್ಟು ಇತಿಹಾಸ ಹೊಂದಿದ ಈ ಊರಿನಲ್ಲಿ ತಂದೆ ಗುರುಪ್ಪ ತಾಯಿ ಕಾಳಮ್ಮ ಎಂಬ ದಂಪತಿಗಳ ಹೊಟ್ಟೆಯಲ್ಲಿ ೧೯೪೧ರಲ್ಲಿ ಜನಿಸಿದರು. ಕೇವಲ ೪ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಇವರು ಮನೆತನದ ವಂಶಪಾರಂಪರ್ಯವಾಗಿ ಬಂದ ವೀರಭದ್ರದೇವರ ಒಡಪುಗಳನ್ನು ಹೇಳುವುದನ್ನು ರೂಢಿಸಿಕೊಂಡು ಇವರ ತಂದೆಯವರ ಮಾರ್ಗದರ್ಶನದಲ್ಲಿ ವೀರಗಾಸೆ ಕಲಾವಿದರಾಗಿ ತಮ್ಮ ಪಾರಂಪರಿಕವಾದ ಕಲೆಯನ್ನು ಬೆಳೆಸಿಕೊಂಡು ನಡೆದರು.

ಕಾವಿವಸ್ತ್ರ, ಹಣೆಯಲ್ಲಿ ವಿಭೂತಿ ಧರಿಸಿ, ಕೊರಳಲ್ಲಿ ರುದ್ರಾಕ್ಷಿ ಧರಿಸಿ ಒಡಪು ಹೇಳುತ್ತಾ ಕುಣಿಯುವ ಆ ಸಂದರ್ಭ ನೋಡಿದರೆ ಎಂತಹವರು ಮೂಕ ಪ್ರೇಕ್ಷಕರಾಗುತ್ತಾರೆ. ಇವರು ಹಲವಾರು ನಾಡ ಉತ್ಸವಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶನ ಮಾಡಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನದಲ್ಲಿಯೂ ಸಹ ಹಲವಾರು ಸಲ ಇವರ ಒಡಬುಗಳು ಪ್ರಸಾರ ಗೊಂಡಿವೆ. ಇವರು ಉತ್ತಮವಾದ ಕಲೆಯನ್ನು ನೋಡಿ ಮುಗಳಖೋಡ, ಕೆಲೂರ, ಗಲಗಲಿ, ಬೀಳಗಿ, ಗದ್ದನಕೇರಿ, ಕೆರೂರ ಇತ್ಯಾದಿ ಗ್ರಾಮಗಳಲ್ಲಿಯ ಸಂಘಟನೆಯವರು ಕರೆದು ಸನ್ಮಾನಿಸಿದ್ದಾರೆ. ಬೀದರ, ಗುಲಬರ್ಗಾ, ಗಬ್ಬೇರು, ಭದ್ರಾವತಿ, ಹಾಸನ, ಧಾರವಾಡ, ಬೆಂಗಳೂರ, ಬಾನಂದೂರ, ಆದಿಚುಂಚನ ಗಿರಿಗಳಲ್ಲಿ ತಮ್ಮ ಕಲಾ ಸೇವೆಯನ್ನು ನೀಡಿದ್ದಾರೆ.

ಪ್ರಶಸ್ತಿಗಳು : ಇವರ ಸುದೀರ್ಘವಾದ ಕಲಾಸೇವೆನ್ನು ಪರಿಗಣಿಸಿ ಇವರಿಗೆ ೧೯೯೨ರಲ್ಲಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ೧೯೯೨ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಇವರ ಇಲ್ಲಿಯವರೆಗಿನ ಕಲಾ ಸೇವೆಯನ್ನು ನೋಡಿ ೨೦೦೭ರಲ್ಲಿ ಜಾನಪದ ಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು ನಮ್ಮ ಜಿಲ್ಲೆಯ ಕಲಾವಿದರಿಗೊಂದು ಹೆಮ್ಮೆಯ ವಿಷಯವೆಂದು ಹೇಳಬಹುದು. ನಾಡಿನ ಉದ್ದಗಲಕ್ಕೂ ಚಿರಪರಿಚಿತರಾದ ೮೮ ವರ್ಷದ ಈ ಯುವಕ ಪ್ರಶಸ್ತಿ ಬರುವದರಿಂದ ಮನುಷ್ಯನಿಗೆ ಹುರುಪು ಬರುತ್ತದೆ. ಆ ಹುರುಪಿನಲ್ಲಿ ಇನ್ನಷ್ಟು ಕೆಲಸ ಮಾಡಲು ಅನುಕೂಲವಾಗುತ್ತದೆ ಎನ್ನುತ್ತಾರೆ.

ಈ ಜಾನಪದ ಕಲೆ ಉಳಿಯಬೇಕು, ಬೆಳೆಯಬೇಕು ಆ ನಿಟ್ಟಿನಲ್ಲಿ ನಾವಾಗಲಿ, ಸರ್ಕಾರವಾಗಲಿ ಬಹಳಷ್ಟು ಕೆಲಸ ಮಾಡಬೇಕೆಂಬುದು ಅಂಗಡಿಯುವರ ಅಭಿಪ್ರಾಯವಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಸದಸ್ಯರಾಗಿ ಜಿಲ್ಲೆಯ ಕಲಾವಿದರ ಸೇವೆ ಮಾಡಿದ್ದೇನೆ. ಆ ನೆಮ್ಮದಿ ನನಗಿದೆ ಎನ್ನುತ್ತಾರೆ ಅಂಗಡಿಯವರು. ವೀರಗಾಸೆ, ಜಾನಪದ ಹಾಡುಗಾರಿಕೆ, ಜಾನಪದಕಥೆ ಹೇಳುವದನ್ನು ಯಾರಾದರು ಕಲಿಯುತ್ತೇನೆಂದು ಬಂದರೆ ಕಲಿಸಬೇಕೆಂಬ ಇಚ್ಛೆ ನನ್ನದಾಗಿ ಆ ನಿಟ್ಟಿನಲ್ಲಿ ಸೇವಾ ಮನೋಭಾವನೆ ನನ್ನದು. ಈ ಕಲೆ ಉಳಿಯಬೇಕು, ಬೆಳೆಯಬೇಕು ಎನ್ನುವದೆ ನನ್ನ ಹಿರಿಯಾಸೆಯಾಗಿದೆ.

ಈಶ್ವರಪ್ಪ ಗು. ಅಂಗಡಿ.
ಸಾ : ಗದ್ದನಕೇರಿ,
ತಾ : ಜಿ : ಬಾಗಲಕೋಟೆ.

# ಸೂರ್ಪಾಲಿ ಅಚ್ಯುತಾಚಾರ್ಯರು

ಪವಿತ್ರ ಕೃಷ್ಣೆಯ ಅಂದಿನ ಅಥಣಿ ತಾಲೂಕಿನ ಸೂರ್ಪಾಲಿ ಕ್ಷೇತ್ರದಲ್ಲಿ ಗುರಾಚಾರ್ಯ ಮೊಕಾಶಿ ಎಂಬ ಆಚಾರ್ಯ ದಂಪತಿಗಳ ಉದರದಲ್ಲಿ ೧೮೮೫ರಲ್ಲಿ ಜನಿಸಿದರು. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು ಒಂದನೆಯವರು ಅಚ್ಯುತಾಚಾರ್ಯರು, ಎರಡನೇಯವರು ಕೃಷ್ಟಾಚಾರ್ಯರು. ಅಚ್ಯುತಾಚಾರ್ಯರು ಪ್ರಾಥಮಿಕ ಶಿಕ್ಷಣವನ್ನು ಸೂರ್ಪಾಲಿಯಲ್ಲಿ ಮುಗಿಸಿದರು. ೭ನೇ ತರಗತಿ ಪರೀಕ್ಷೆಯನ್ನು ಬೆಳಗಾವಿಯಲ್ಲಿ ಬರೆದರು. ಆದರೆ ಫಲಿತಾಂಶ ಮಾತ್ರ ಅನುತ್ತೀರ್ಣವಾಯಿತು. ಆಚಾರ್ಯರು ಮರಳಿ ಶಾಲೆಗೆ ಹೋಗದೆ ಸಂಗೀತದ ಗೀಳು ಹಚ್ಚಿಕೊಂಡರು. ಕೊಕಟನೂರ ಸಿದ್ಧರಾಯ, ಸೂರ್ಪಾಲಿಯ ಮುದಗಲಾಚಾರ್ಯ ಹಾಗೂ ಬಾಬಾಚಾರ್ಯರನ್ನು ಭಾಗವತ ಕಲಿಸುವ ಗುರುಗಳನ್ನಾಗಿ ಮಾಡಿಕೊಂಡು ಹಿರಿಯ ಪಾರಿಜಾತ ಕಲಾವಿದ ಬಟಕುಂದ್ರಿ ಬಸಪ್ಪನನ್ನು ಶ್ರೀಕೃಷ್ಣ ಪಾರಿಜಾತ ಕಲಿಸುವ ಗುರುಗಳನ್ನಾಗಿ ಮಾಡಿಕೊಂಡು ಪಾರಿಜಾತ ಅಭಿನಯಕ್ಕೆ ನಾಂದಿ ಹಾಡಿದರು. ಶ್ರೀಕೃಷ್ಣಪಾರಿಜಾತದಲ್ಲಿ ಸತ್ಯಭಾಮೆ, ಕೊರವಂಜಿ ಪಾತ್ರಗಳನ್ನು ನಿರ್ವಹಿಸುವದು ಇವರಿಗೆ ಅತ್ಯಂತ ಸಂತೋಷ ಕೊಡುತ್ತಿತ್ತಂತೆ. "ಐದುವರೆ ಅಡಿ ಎತ್ತರ ಕಪ್ಪು ಬಣ್ಣದ ಕಂಚಿನ ಕಂಠದ ಅಚ್ಯುತ ಅಡ್ಡಕ ಬಂದ ಪದಾ ಅಂದರ ಆಚಾ ನೋಡಲಾಕ ಕುಂತ ಮಂದಿಗೆ ಎದ್ದ ಕುಣಿಯುವಂಗ ಆಕ್ಕಿತ್ತು" ಅನ್ನುತ್ತಾರೆ ಅವರ ಸಹೋದರ ಸಂಬಂಧಿಗಳು. ಬರಗಿ ಅಪ್ಪಾಲಾಲರು ಹಾಗೂ ಸೂರ್ಪಾಲಿಯ ಅಚ್ಯುತಾಚಾರ್ಯರು ಶ್ರೀಕೃಷ್ಣಪಾರಿಜಾತ ಕಲಿಸುವ ಗುರುಗಳಾಗಿ ಬಹಳಷ್ಟು ಕಂಪನಿಗಳನ್ನು ತಯಾರಿಸಿದ್ದಾರೆ ಎಂದು ದಿ|| ಬರಗಿ ರಾಚಯ್ಯನವರು ಹೇಳಿದ್ದರು. ಕನ್ನಡ-ಸಂಸ್ಕೃತ ಬಲ್ಲವರಾದ ಅಚ್ಯುತರು ಮುಂದೆ ಊರಿಂದೂರಿಗೆ ತಿರುಗಾಡಿ ಆಟ ಕಲಿಸಲು ಪ್ರಾರಂಭಿಸಿದರು. ೧೯೨೦ರಲ್ಲಿ ದುಂಡಪ್ಪ ಈರಪ್ಪ ಕತ್ತಿ ಇವರ ನೇತೃತ್ವದಲ್ಲಿ ಆಲಗೂರ ಕಂಪನಿ ಚಾಲ್ತಿಯಲ್ಲಿ ಇತ್ತು. ಈ ತಂಡಕ್ಕೆ ಗುರುವಿನ ಅವಶ್ಯವಿದ್ದಾಗ ಆಸ್ಥಾನಕ್ಕೆ

ಬಂದವರು ಸೂರ್ಪಾಲಿಯ ಅಚ್ಯುತಾಚಾರ್ಯರು. ೪–೫ ವರ್ಷ ಆಟ ಕಲಿಸಿದ ಅವರ ಕೈಯಲ್ಲಿ ಆಟ ಕಲಿತ ತಂಡ ಇಂತಿದೆ.

ಪಾರಿಷ. ಧರೆಪ್ಪ ಸಿದೋಜಿ – ಸತ್ಯಭಾಮಾ, ಕೊರವಂಜಿ
ಕೃಷ್ಟಪ್ಪ ಗುರವ್ವ – ರುಕ್ಮಿಣಿ
ರಾಮಪ್ಪ ಮುತ್ತೂರ – ಗೋಪಾಲ
ಭೀಮಪ್ಪ ಗುರವ್ವ – ಹಾರ್ಮೋನಿಯಂ
ಗೂಳಪ್ಪ ಗುರವ್ವ – ತಬಲಾ
ಕೃಷ್ಣ – ಪಾರಿಸ್ ಸಿದೋಜಿ, ಕೃಷ್ಟಪ್ಪ ಗುರವ್ವ

ಈ ತಂಡ ಆಚಾರ್ಯರ ನೇತ್ರತ್ವದಲ್ಲಿ ೪ ವರ್ಷಗಳ ಕಾಲ ನಡೆಯಿತು. ನಂತರ ಕುಂಚನೂರ ತಂಡದವರು ಬಂದು ಈ ತಂಡಕ್ಕೆ ಸೇರ್ಪಡೆಯಾದರು. ೧೯೪೫ರ ಸುಮಾರಿಗೆ ಆಲಗೂರ ಕಂಪನಿ ಮುರಿಯಿತು ಅಚ್ಯುತಾಚಾರ್ಯರು, ಬರಗಿ ಅಪ್ಪಾಲಾಲರನ್ನು ಕೂಡಿಸಿಕೊಂಡು ಉಳಿದೆಲ್ಲ ಕಲಾವಿದರನ್ನು ಆಲಗೂರಿನವರನ್ನೆ ಸೇರಿಸಿಕೊಂಡು ಮತ್ತೆ ಕಂಪನಿ ಪ್ರಾರಂಭಿಸಿದರೆ ಈ ತಂಡದಲ್ಲಿ ಅಚ್ಯುತಾಚಾರ್ಯರು ಕೇವಲ ೨ ವರ್ಷ ಸೇವೆ ಮಾಡಿದರು.

ಕುಲಗೋಡ ತಮ್ಮಣ್ಣನನಂತರ ಶ್ರೀಕೃಷ್ಣಪಾರಿಜಾತ ಕಲಿಸುವ ಮಾಸ್ತರರಲ್ಲಿ ಸೂಪಾರ್ಲಿಯ ಅಚ್ಯುತಾಚಾರ್ಯರ ಹೆಸರು ಶ್ರೇಷ್ಠವಾದದು. ಪಾರಿಜಾತ ಕಲಿಸುವದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಕೊನೆಯುವರೆಗೂ ಬ್ರಹ್ಮಚಾರಿಯಾಗಿ ಜೀವನ ಕಳೆದ ಎನ್ನುತ್ತಾರೆ ಅವರ ಸಹೋದರ ಸಂಬಂಧಿ ಶೇಷಾಚಾರ್ಯ ಮೋಕಾಶಿಯುವರು. ಆರ್ಥಿಕ ತೊಂದರೆಯಿಂದ ಇದ್ದೊಂದು ಮನೆಯನ್ನು ಕೇವಲ ೪ ರೂಪಾಯಿಗೆ ಮಾರಾಟಮಾಡಿ ಊರಿಂದೂರಿಗೆ ಸಂಚಾರಿ ಜೀವನ ನಡೆಸುತ್ತಿದ್ದರು. ಆಟ ಕಲಿಸಿ ಹಣ ಸಂಗ್ರಹ ಮಾಡಿಕೊಂಡು ಸೂರ್ಪಾಲಿಗೆ ಬರುತ್ತಿದ್ದ ಅಚ್ಯುತಾಚಾರ್ಯರು ಹಂತೇಲಿ ಇದ್ದ ಹಣ ಮುಗಿಯುವ ತನ ಬೇಕಾದವರು ಕರೆದರು ಆಟಕ್ಕೆ ಹೋಗುತ್ತಿರಲಿಲ್ಲಾ. ಎಲ್ಲಾ ಹಣ ಖಾಲಿಯಾದ ಮೇಲೆ ಆಟ ಕಲಿಸಲಿಕ್ಕೆ ಹೋಗುತ್ತಿದ್ದರು ಎಂದು ಈ ಊರಿನ ಜನಾ ಅಭಿಪ್ರಾಯ ಪಡುತ್ತಾರೆ. ಸ್ವತಃ ತಾನೇ ವೀರ ನರಸಿಂಹ ಅಂಕಿತನಾಮದಿಂದ ರಚಿಸಿದ ಹಾಡು ಎಲ್ಲ ಕಂಪನಿಗಳು ಇಂದು ಹಾಡುತ್ತಿದ್ದಾರೆ.

೧೯೨೦ರಿಂದ ೧೯೬೫ರ ವರೆಗಿನ ಪ್ರಚಾರದಲ್ಲಿದ್ದ ಪಾರಿಜಾತ ಕಂಪನಿಗಳಿಗೆ ಗುರುಗಳಾಗಿದ್ದರು ಅಚ್ಯುತಾಚಾರ್ಯರು. ಇವರು ಇದ್ದ ಊರಿನಲ್ಲಿ ಶ್ರೀಕೃಷ್ಣಪಾರಿಜಾತ ಪ್ರದರ್ಶನವಿದ್ದರೆ ಆಟದ ಮುಖ್ಯಸ್ಥ ಇವರಲ್ಲಿಗೆ ಬಂದು ನಮಸ್ಕರಿಸಿ ಆಟ ಪ್ರಾರಂಬಿಸುತ್ತಿದ್ದರು. ವೈಶಾಖ ಶುದ್ಧ ದಶಮಿಯ ಆಗಿ ಹುಣ್ಣಿಮೆಯ ನರಸಿಂಹ ದೇವರ

ಜಾತ್ರೆಗೆ ಬಂದು ಆಟ ಆಡಿ ಜನರಿಂದ ಮೆಚ್ಚುಗೆ ಪಡೆದುಕೊಳ್ಳುತ್ತಿದ್ದರು. ಸ್ವಾತಂತ್ರ್ಯ ದೊರೆತ ನಂತರ ದಿನಗಳಲ್ಲಿ ಆಟ ಕಲಿಸುವದನ್ನೇ ನಿಲ್ಲಿಸಿ ಸಂಚಾರಿ ಜೀವನ ನಡೆಸಿದರು. ೧೯೫೨ರ ಜುಲೈ-ಅಗಸ್ಟ ತಿಂಗಳಲ್ಲಿ ಪಾರಿಜಾತ ಕುಸುಮ ಇಹಲೋಕ ಯಾತ್ರೆ ಮುಗಿಸಿತು. ತಮ್ಮ ಅಖಂಡ ೬೭ ವರ್ಷಗಳ ಜೀವನದಲ್ಲಿ ಶ್ರೀ ಕೃಷ್ಣ ಪಾರಿಜಾತ ಕಲೆ ಹಾಗೂ ಕಲಾವಿದರನ್ನು ಬೆಳೆಸುವದನ್ನು ಯಾರು ಮರೆಯುವಂತಿಲ್ಲಾ.

ಸೂರ್ಪಾಲಿ ಅಚ್ಯುತಾಚಾರ್ಯರು
ಸೂರ್ಪಾಲಿ,
ತಾ. ಅಥಣಿ.

## ದಿ|| ಗುರಪ್ಪ ಬಸೆಟ್ಟೆಪ್ಪ ಅನಂತಪೂರ

ಹಿರಿಹೊಳೆ ಎಂದು ಕರೆಯಿಸಿಕೊಳ್ಳುವ ಪವಿತ್ರ ಕೃಷ್ಣೆಯು ತಟದಲ್ಲಿ ಶೋಭಿಸುತ್ತಿರುವ ಆಲಗೂರ ಗ್ರಾಮ ತನ್ನದೆ ಆದ ವಿಶೇಷವನ್ನು ಹೊಂದಿದ ಊರು "ಶ್ರೀ ಕೃಷ್ಣಪಾರಿಜಾತ" ಪರಂಪರೆಗೆ ಭದ್ರ ಬುನಾದಿ ಹಾಕಿ ಪುಟ್ಟೂರಿನ ಬಸೆಟೆಪ್ಪಾ ಮತ್ತು ಅಲ್ಲಮ್ಮಾ ಎಂಬ ದಂಪತಿಗಳ ಉದರದಲ್ಲಿ ೧೮೯ರಲ್ಲಿ ಜನಿಸಿದರು. ಕೃಷಿಯನ್ನೇ ತಮ್ಮ ಆಧಾರವಾಗಿ ಬಾಳಿ ಬೆಳೆದ ಕುಟುಂಬದಲ್ಲಿ ಹುಟ್ಟಿದ ಗುರಪ್ಪನಿಗೆ ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯೆ ಕೊಡಿಸಿದರು. ಶ್ರೇಷ್ಠ ಪಾರಿಜಾತದ ಗುರು ಎನಿಸಿಕೊಂಡಿದ್ದ ಸುರ್ಪಾಲಿಯ ಅಚ್ಯುತಾಚಾರ್ಯರರನ್ನು ವಿದ್ಯಾ ಗುರುಗಳನ್ನಾಗಿ ಮಾಡಿಕೊಂಡು ಶ್ರೀಕೃಷ್ಣಪಾರಿಜಾತ ತರಬೇತಿ ಪಡೆಯಲು ಪ್ರಾರಂಭಿಸಿದರು. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ಗುರಪ್ಪನವರಿಗೆ ಈ ಜಾನಪದ ಕಲೆಯ ಬಗ್ಗೆ ವಿಶೇಷವಾದ ಆಸಕ್ತಿ ಮೂಡತೊಡಗಿ ಇನ್ನಷ್ಟು ಕಲಿಯಬೇಕೆಂಬ ಆಸೆ ಮೊಳಕೆಯೊಡೆಯಿತು. ೧೯೧೪ರಲ್ಲಿ ಊರಿನ ಹಿರಿಯರ ಹಾಗೂ ತಂದೆ-ತಾಯಿಯರ ಅನುಮತಿ ಪಡೆದು ಅಚ್ಯುತಾಚಾರ್ಯ ಮೊಕಾಶಿ ಇವರಿಂದ ಅಭ್ಯಾಸ ಕಲಿಯಲು ಪ್ರಾರಂಭಿಸಿದರು.

ಮೊದಮೊದಲು ಶ್ರೀಕೃಷ್ಣಪಾರಿಜಾತ ಪಾತ್ರಗಳನ್ನು ನಿರ್ವಹಿಸಿದರು. ಆಗಿನ ಪಾತ್ರದ ವ್ಯವಸ್ಥೆ ಈ ರೀತಿ ಇದೆ. ಶ್ರೀ ರಾಮು ಜೇರೆ ಕೃಷ್ಣನ ಪಾತ್ರದಲ್ಲಿ ಕಾಣಿಸಿಕೊಂಡರೆ ಧರೆಪ್ಪ ಯಲಗುದ್ದಿ ರುಕ್ಮಿಣಿ ಪಾತ್ರ ನಿರ್ವಹಿಸುತ್ತಿದ್ದರು. ಗುರಪ್ಪ ಬಸೆಟ್ಟೆಪ್ಪ ಅನಂತಪುರ- ಸತ್ಯಭಾಮಾ, ಕೊರವಂಜಿ ಪಾತ್ರಗಳಲ್ಲಿ ರಂಗದ ಮೇಲೆ ಕಾಣಿಸಿಕೊಳ್ಳುತ್ತಿದ್ದರು. ನೇಮಣ್ಣ ನಿಂಗಪ್ಪ, ಪಾಟೀಲ ಹಾರ್ಮೋನಿಯಂ ಹಾಗೂ ಆದಪ್ಪ ಭೀಮಪ್ಪ ಗುರವ ತಬಲಾ ಸಾತ ನೀಡುತ್ತಿದ್ದರೆ. ದುಂಡಪ್ಪ ಭಾಗವತರಾಗಿ ಸೇವೆ ಮಾಡುತ್ತಿದ್ದರು. ಹಣಮಂತನಾಯಿಕ ಸಹಕಲಾವಿದರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಈ ತಂಡ ಕೆಲವು ವರ್ಷಗಳ ಕಾಲ ತಮ್ಮ ಕಲಾ ಸೇವೆಯಲ್ಲಿ ಕಾಲ ಕಳೆದರು. ಮುಂದಿನ ದಿನಮಾನಗಳಲ್ಲಿ ಈ ಗುರಪ್ಪನವರು

ಪಾತ್ರ ನಿರ್ವಹಿಸುವದನ್ನು ಬಿಟ್ಟು ಹಾರ್ಮೋನಿಯಂ ನುಡಿಸುವುದನ್ನು ಕಲಿಯಲು ಪ್ರಾರಂಭಿಸಿದರು. ಸೂರ್ಪಾಲಿ ಅಚ್ಯುತಾಚಾರ್ಯ ಮತ್ತು ಬರಗಿ ಅಪ್ಪಾ ಲಾಲರ ಮಾರ್ಗದರ್ಶನದಲ್ಲಿ ಹಾರ್ಮೋನಿಯಂ ನುಡಿಸುವುದನ್ನು ಕಲಿತು ಆಲಗೂರಿನಲ್ಲಿ ಹೊಸ ಪಾರಿಜಾತ ಕಂಪನಿ ಕಟ್ಟಿ ಆ ಕಂಪನಿಯ ಪ್ರಯೋಗಗಳಿಗೆ ಅವರೇ ಹಾರ್ಮೋನಿಯಂ ಗುರುಗಳಾಗಿ ಕಲಾಸೇವೆ ಪ್ರಾರಂಭಿಸಿದರು. ಆದರೆ ಈ ತಂಡ ಬಹಳ ದಿನಗಳ ವರೆಗೆ ನಡೆಯದೆ ಕಂಪನಿ ಮುರಿಯಿತು. ಈ ತಂಡದಲ್ಲಿ ಪೇಟಿ ಮಾಸ್ತರರಾಗಿ ಸೇವೆಸಲ್ಲಿಸಿದ ಗುರಪ್ಪ ಮಾಸ್ತರ ಅನಂತಪೂರ ಇವರು ಬೇರೆ ಬೇರೆ ಊರುಗಳಲ್ಲಿ ಪಾರಿಜಾತ ಕಲಿಸಲು ಪ್ರಾರಂಭಿಸಿದರು. ಕಂಕನವಾಡಿ, ನಾವಲಗಿ, ಕುಂಚನೂರ, ತುಂಬರಮಟ್ಟಿ, ತೋಳಮಟ್ಟಿ ದಾಸ್ಯಾಳ, ಮುಧೋಳ, ಜಮಖಂಡಿ ಇವುಗಳಲ್ಲಿ ಇನ್ನೂ ಹಲವಾರು ಗ್ರಾಮಗಳಲ್ಲಿ ಪಾರಿಜಾತ ಕಲಿಸುವದರ ಜೊತೆಗೆ ನಾಡಿನ ತುಂಬೆಲ್ಲಾ ಪಾರಿಜಾತದ ಬಗ್ಗೆ ಜನರಲ್ಲಿ ಪ್ರೀತಿ ಮೂಡಿಸುವ ಕೆಲಸ ಮಾಡಿದ ದೊಡ್ಡ ವ್ಯಕ್ತಿ ಗುರಪ್ಪ ಮಾಸ್ತರ ಆಲಗೂರು. ಅವರ ಗರಡಿ ಮನೆಯಲ್ಲಿ ಪಳಗಿದ ಹಲವಾರು ಕಲಾವಿದರು ರಾಷ್ಟಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಇಂದು ಗುರಪ್ಪ ಮಾಸ್ತರರು ನಮ್ಮೊಂದಿಗೆ ಇಲ್ಲ ಆದರೆ ಅವರು ನೀಡಿದ ಮಾರ್ಗದರ್ಶನ ಅವರ ತತ್ವಗಳನ್ನು ನಮ್ಮ ಪಾರಿಜಾತ ಕಲಾವಿದರನ್ನು ಸದಾ ಜಾಗೃತಗೊಳಿಸುತ್ತಿವೆ.

ಕರ್ನಾಟಕ ಮಹಾರಾಷ್ಟ್ರ ತುಂಬೆಲ್ಲ ಸುತ್ತಾಡಿ ಕಲಾಸೇವೆ ಗೈದ ಕಲಾಸಿರಿಗೆ ಹಲವರು ಪುರಸ್ಕರಿಸಿದ್ದಾರೆ. ಅದು ಅಲ್ಲದೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ೧೯೮೮ರಲ್ಲಿ ಪುರಸ್ಕರಿಸಿದ್ದಾರೆ. ಇವರ ಕಲಾಪರಂಪರೆಯನ್ನು ಅವರ ಮಾರ್ಗದರ್ಶನದಲ್ಲಿ ಅವರ ಸುಪುತ್ರ ನಡೆಸಿಕೊಂಡು ಹೊರಟಿರುವದು ಸಂತೋಷದ ಸಂಗತಿಯಾಗಿದೆ.

**ದಿ|| ಗುರಪ್ಪ ಬ. ಅನಂತಪೂರ,**
**ಸಾ : ಆಲಗೂರ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

# ಅಪ್ಪಾಲಾಲ್ ನದಾಫ್

ಪ್ರಸಿದ್ಧ ಶ್ರೀಕೃಷ್ಣಪಾರಿಜಾತ ತಂಡಗಳನ್ನು ಸೃಷ್ಟಿಮಾಡಿದ ಕೀರ್ತಿ ಅಖಂಡ ಬಿಜಾಪೂರ ಜಿಲ್ಲೆಗೆ ಸಲ್ಲುತ್ತದೆ. ಅದರೊಟ್ಟಿಗೆ ಹೆಸರಾಂತ ಪಾರಿಜಾತ ಕಲಾವಿದರನ್ನು ನಾಡಿಗೆ ಕೊಟ್ಟ ಜಿಲ್ಲೆ ನಮ್ಮದು ಎಂಬುದು ಹೆಮ್ಮೆಯ ವಿಷಯ, ಅಂತಹ ಕೆಲವೇ ಕೆಲವು ಹೆಸರುಗಳಲ್ಲಿ ಜಮಖಂಡಿ ಅಪ್ಪಾಲಾಲರ ಹೆಸರು ಉನ್ನತ ಮಟ್ಟದ್ದು.

೧೯೧೭ರಲ್ಲಿ ತಂದೆ ಸಾಹೇಬಲಾಲ ತಾಯಿ ಚಂದಮಾ ಎಂಬ ಮುಸ್ಲಿಂ ದಂಪತಿಗಳ ಉದರದಲ್ಲಿ ಅಪ್ಪಾಲಾಲರು ಜನಿಸಿದರು. ಕಡು ಬಡತನದಲ್ಲಿ ಜನಿಸಿದ ಅಪ್ಪಾಲಾಲರಿಗೆ ಒಬ್ಬ ಹಿರಿಯ ಸಹೋದರ ಹಾಗೂ ಇಬ್ಬರು ಹಿರಿಯ ಸಹೋದರಿಯರು, ಸಾಹೇಬಲಾಲ್ ದಂಪತಿಗಳಿಗೆ ಕೊನೆಯ ಮಗ ಅಪ್ಪಾಲಾಲ್ ಕಾರಣಾಂತರಗಳಿಂದ ಸ್ವಗ್ರಾಮವನ್ನು ಲಿಂಗನೂರನ್ನು ಬಿಟ್ಟು ಉದ್ಯೋಗಕ್ಕಾಗಿ ಜಮಖಂಡಿ ನಗರಕ್ಕೆ ವಲಸೆ ಬಂದರು. ಅಪ್ಪಾಲಾಲರ ಕುಟುಂಬ ವರ್ಗಕ್ಕೆ ಕಿತ್ತು ತಿನ್ನುವ ಬಡತನ ದುಡಿದರೇ ಮಾತ್ರ ಹೊಟ್ಟೆ ತುಂಬುತ್ತಿತ್ತು. ಆದರೆ ಬಾಲಕ ಅಪ್ಪಾಲಲರು ಶಿಕ್ಷಣ ಪಡೆಯ ಬೇಕೆಂಬುದು ತಂದೆ ತಾಯಿಯ ಆಸೆಯಾಗಿತ್ತು. ಆ ಪ್ರಕಾರ ಅಪ್ಪಾಲಾಲರನ್ನು ಶಾಲೆಗೆ ಸೇರ್ಪಡೆ ಮಾಡಿದರು. ಆದರೆ ಅಪ್ಪಾಲಾಲರಿಗೆ ಶಿಕ್ಷಣ ಮಾತ್ರ ತಲೆಗೆ ಹತ್ತಲಿಲ್ಲಾ. ಆದರೆ ಸಂಗೀತದ ಬಗ್ಗೆ ಆಸಕ್ತಿ ಎದ್ದು ಕಾಣುತ್ತಿತ್ತು. ತಾವು ಬೇರೆಡೆಗೆ ಕಲಿತ ಒಂದೆರಡು ಹಾಡುಗಳನ್ನು ಶಿಕ್ಷಕರ ಮುಂದೆ ಹಾಗೂ ಶಾಲಾ ತಪಾಸಣಾಧಿಕಾರಿಗಳು ಬಂದಾಗ ಅವರ ಮುಂದೆ ಹಾಡಿ ಭೇಷ್ ಎನಿಸಿಕೊಳ್ಳುತ್ತಿದ್ದರು. ಕ್ರಮೇಣ ಶಿಕ್ಷಣಕ್ಕೆ ತಿಲಾಂಜಲಿ ನೀಡಿ ಸಂಗೀತಕ್ಕೆ ಹೆಚ್ಚಿನ ಆಸಕ್ತಿ ತೋರ ಹತ್ತಿದರು. ಶಾಲೆಗೆ ಹೋಗುವ ರಸ್ತೆಯಲ್ಲಿ ಇದ್ದ ತಾಲಿಮ ಕೋಲಿ ಅಪ್ಪಾಲಾಲರನ್ನು ಆಕರ್ಷಿಸಿತು. ಶಾಲೆಗೆ ಹೋಗುತ್ತೇನೆಂದು ಹೇಳಿ ಶಾಲೆ ಬಿಡುವ ತನಕ ತಾಲಿಮ ಮನೆಯಲ್ಲಿ ಕುಳಿತು ಪಾರಿಜಾತ ಶ್ರವಣಮಾಡಿ ಖುಷಿಪಡುತ್ತಿದ್ದ.

ಸಾಯಂಕಾಲ ಶಾಲೆ ಬಿಟ್ಟನಂತರ ಮರಳಿ ಮನೆಗೆ ಹೋಗುತ್ತಿದ್ದ ಇವನ ಆಸಕ್ತಿಯನ್ನು ನೋಡಿ ಕಂಪನಿ ಮಾಲಿಕ ನಾವ್ಹಿ ಭೀಮಪ್ಪ ಇವರ ಮಾವ ಗಂಗಪ್ಪ ನಾವ್ಹಿ ಇವರು "ಏ ತಮ್ಮ ನೀ ಇಲ್ಯಾಕ ಕುಂದ್ರತಿ ಏನ ಆಟ ಕಲಿಬೇಕ ಅಂತಿಯೇನ" ಎಂದು ಕೇಳಿದರು. ಆಗ ಅಪ್ಪಾಲಾಲರು ಆಟ ಕಲಿಯಲು ಒಪ್ಪಿಗೆ ಸೂಚಿಸಿದರು, ಭೀಮಪ್ಪ ನಾವ್ಹಿ ಅಪ್ಪಾಲಾಲರ ಪ್ರಥಮ ಗುರುವಾಗಿ ಆಟ ಕಲಿಸಲು ಪ್ರಾರಂಭಿಸಿದರು. ಏಕ ಭಕ್ತಿಯಿಂದ ದಿನಾಲೂ ತಾಲಿಮು ಮನೆಗೆ ಬಂದು ಗುರುಗಳು ಹೇಳಿಕೊಡುತ್ತಿದ್ದನ್ನು ಶ್ರದ್ಧೆಯಿಂದ ಶ್ರವಣ ಮಾಡುತ್ತಿದ್ದರು. ಹತ್ತು ಹಲವಾರು ದಿನಗಳನ್ನು ಪಾರಿಜಾತ ಕಲಿಯುವದರಲ್ಲಿ ಕಳೆದ ಅಪ್ಪಾಲಾಲರಿಗೆ ಇಡೀ ಪಾರಿಜಾತವೇ ಮುಖ ಪಾಠವಾಯಿತು. ೧೯೩೦ ರ ಸುಮಾರಿಗೆ ಬ್ಯಾಳಿ ಬಸವಣ್ಣನ ದೇವಸ್ಥಾನದಲ್ಲಿ ನಾವ್ಹಿ ಭೀಮಪ್ಪನ ಕಂಪನಿಯ ಪಾರಿಜಾತ ಆಡಿಸಲು ಸ್ಥಳೀಯ ಸಂಘಟಕರು ನಿರ್ಧರಿಸಿದ್ದರು. ಈ ಸಂದರ್ಭದ ಸದುಪ ಯೋಗವನ್ನು ಪಡೆದುಕೊಂಡ ಅಪ್ಪಾಲಾಲರು ಕಮೀಟಿಯವರಿಗೆ ಗಂಟು ಬಿದ್ದು ನನಗೆ ಪಾತ್ರ ಮಾಡಲು ಅವಕಾಶ ಕೊಡಿಸಿರಿ ಎಂದು ವಿನಮ್ರನಾಗಿ ಕೇಳಿಕೊಂಡ. ಇವನ ವಿನಮ್ರತೆಯನ್ನು ಮನ್ನಿಸಿ ಸಂಘಟಕರು ಈ ವಿಷಯವನ್ನು ಕಂಪನಿ ಮುಖ್ಯಸ್ಥ ನಾವ್ಹಿ ಭೀಮಪ್ಪನ ಮುಂದಿಟ್ಟಾಗ ಭೀಮಪ್ಪನಿಗೆ ಸಂಶಯ ಕಾಡಹತ್ತಿತು. ನಾನು ವಿದ್ಯೆ ಸಹ ಹೇಳಿ ಕೊಟ್ಟಿಲ್ಲ ಇವನಿಗೆ ಪಾತ್ರ ಹೇಗೆ ಮಾಡುತ್ತಾನೆಂಬ ಅಳಕು ಹುಟ್ಟಿತು. ಆದರೆ ಸಂಘಟಕರು ಭೀಮಪ್ಪನಿಗೆ ಹೇಳಿ ಅಪ್ಪಾಲಾಲರನ್ನು ಪ್ರಥಮವಾಗಿ ಅಡ್ಡೆ ಏರಿಸುವಲ್ಲಿ ಸಫಲರಾದರು. ಪ್ರಥಮ ಪ್ರದರ್ಶನ ಏನು ರಂಗದ ಒಳ ಹೊರಗಿನ ಅರುವಿಲ್ಲದ ಅಪ್ಪಾಲಾಲರಿಗೆ ಓಣಿಯ ಜನರೆಲ್ಲ ಕೂಡಿಕೊಂಡು ಬಣ್ಣ ಬಡಿದು ಶೃಂಗರಿಸಿದರು. ಪ್ರಥಮದಲ್ಲಿ ಗೊಲ್ಲತಿಯಾಗಿ ಬಣ್ಣ ಬಡೆದುಕೊಂಡ ಅಪ್ಪಾಲಾಲರು. ರಂಗದ ಮೇಲೆ ನಿಂತು ಕಂಚಿನ ಕಂಠದಿಂದ ರಾಗ ಮೇಳೈಸಿದಾಗ ಹಿರಿಯ ಕಲಾವಿದರೆಲ್ಲಾ ಬೆರಗಾದರು. ಅರ್ಥಪೂರ್ಣ ಸಂಭಾಷಣೆ ಅದಕ್ಕೆ ತಕ್ಕಂತೆ ಅಭಿನಯದಿಂದ ಜನಮನ ಸೂರೆಗೊಂಡು ಪ್ರೇಕ್ಷಕರಿಂದ ಬಹುಮಾನ ಪಡೆದರು. ಅದೇ ರಂಗದ ಮೇಲೆ ಗೊಲ್ಲತಿ, ಸತ್ಯಭಾಮೆ, ಕೊರವಂಜಿ ಪಾತ್ರಗಳನ್ನು ಇವರೇ ಮಾಡಬೇಕೆಂದು ಪ್ರೇಕ್ಷಕರಿಂದ ಒತ್ತಾಸೆ ಬಂದಾಗ ಅನಿವಾರ್ಯವಾಗಿ ನಾವ್ಹಿ ಭೀಮಪ್ಪ ತಾನೂ ನಿರ್ವಹಿಸುತ್ತಿದ್ದ ಪಾತ್ರಗಳನ್ನು ಬಿಟ್ಟು ಕೊಡಬೇಕಾಯಿತು. ಅಪ್ಪಾಲಾಲರ ಬೆಳವಣಿಗೆಯನ್ನು ಸಹಿಸದ ಹಿರಿಯ ಕಲಾವಿದರು ಅವನ್ನು ಕಂಪನಿ ಬಿಟ್ಟು ಹೊರಗೆ ಹಾಕಿದರು. ೧೯೩೪ರ ಸುಮಾರಿಗೆ ಪ್ರಬುದ್ಧ ಕಲಾವಿದರನ್ನು ಸೇರಿಸಿ ಶ್ರೀಕಾಡಸಿದ್ಧೇಶ್ವರ ಶ್ರೀಕೃಷ್ಣಪಾರಿಜಾತ ಸಂಘ ಜಮಖಂಡಿ ಎಂಬ ಕಂಪನಿ ಸ್ಥಾಪಿಸಿ, ಆ ಮೂಲಕ ಕಲಾಬಳಗವನ್ನು ಬೆಳೆಸುವದರೊಂದಿಗೆ ತಾವು ಬೆಳೆದರು.

**ಕಲಾವಿದರ ಸಂಗಮ :** ಶ್ರೀಕಾಡಸಿದ್ಧೇಶ್ವರ ಶ್ರೀಕೃಷ್ಣಪಾರಿಜಾತ ಕಂಪನಿಯಲ್ಲಿ ಹಲವಾರು ವಿಶೇಷತೆ ಹೊಂದಿದ ಕಲಾವಿದರು ಇದ್ದರು. ಹೆಸರಾಂತ ನಟವರ್ಗದವರು ಸಂದರ್ಭಕ್ಕೆ ಅನುಸಾರವಾಗಿ ಈ ಕಂಪನಿಯಲ್ಲಿ ಒಂದೇ ವೇದಿಕೆ ಮೇಲೆ

ಕಾಣಿಸಿಕೊಂಡವರು. ಬರಗಿ ರಾಚಯ್ಯ, ನಣದಿ ರಾಮಣ್ಣ, ಮಾಚಕನೂರ ಯಮನಪ್ಪ, ಟಕ್ಕಳಕಿ ವಿಠಲರಂತ ಹಿರಿಯ ಕಲಾವಿದರು ಕೃಷ್ಣನ ಪಾತ್ರದಲ್ಲಿ ಕಾಣಿಸಿಕೊಂಡರೆ, ಕಂಕಣವಾಡಿ ಶಂಕ್ರಯ್ಯ, ಕುಂಚನೂರ ಮಲ್ಲಪ್ಪ, ಸೌದಿಮಲ್ಲಯ್ಯ, ಮುಗಳಖೋಡದ ಸಿದ್ದಪ್ಪ ನಂತವರು ಭಾಗವತರಾಗಿ ಸೇವೆ ಮಾಡುತ್ತಿದ್ದರು, ಚಂಪಾಬಾಯಿ, ಸೂಳೆ, ರುಕ್ಮಿಣಿ, ಗೊಲ್ಲತಿ, ದೊರೆಸ್ಸಾನಿ ಪಾತ್ರಗಳಿಗೆ ಜೀವಕಳೆ ತುಂಬುತ್ತಿದ್ದರು. ಸಿದ್ದಪ್ಪ ಕುಂಚನೂರ ಗೊಲ್ಲತಿ ಪಾತ್ರದಲ್ಲಿ ಬಣ್ಣ ಬಡೆದುಕೊಂಡರೇ ಮುಪ್ಪಯ್ಯ ಕೊಲ್ಲಾರಂತಹ ಮೇರುನಟರು ಗೊಲ್ಲತಿ, ರುಕ್ಮಿಣಿ ಪಾತ್ರದಲ್ಲಿ ರಂಗದ ಮೇಲೆ ಕಾಣಿಸಿಕೊಳ್ಳುತ್ತಿದ್ದರು. ಆಲಗೂರ ರಾಮಣ್ಣಾ, ತೇರದಾಳ ಬಸಪ್ಪ, ಹಲ್ಯಾಳ ಅಯ್ಯಪ್ಪರಂತಹ ಶ್ರೇಷ್ಠ ಕಲಾವಿದರು ತಬಲಾ ಸಾತ ನೀಡಿದ್ದಾರೆ. ತೊದಲುಬಾಗಿಯ ರಾಚಯ್ಯ, ಮಹಾರುದ್ರಪ್ಪ ಬನಹಟ್ಟಿ, ಸತ್ಯಪ್ಪ ಚಿಗರಿ ರಾಮನ್ನಾ ಕುಂಚನೂರರಂತಹ ಚೇತನ ಶಕ್ತಿಗಳು ಪೇಟಿಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಹೊಸ ಹೊಸ ಕಲಾವಿದರನ್ನು ಹುಡುಕಿ ತೆಗೆದು ಅವರನೆಲ್ಲಾ ಮೇಳೈಸಿಕೊಂಡು ಸಮರ್ಥವಾಗಿ ಕಂಪನಿ ನಡೆಸಿಕೊಂಡು ಹೋಗುವ ಸಂಘಟನಾ ಚತುರರಾಗಿದ್ದರು. ಈ ಭಾಗದಲ್ಲಿ ಪಾರಿಜಾತ ಕ್ಷೇತ್ರಕ್ಕೆ ತಳಪಾಯ ಹಾಕಿದ ಕೆಲವೇ ಕೆಲವು ಮಹನಿಯರಲ್ಲಿ ಅಪ್ಪಾಲಾಲರು ಅಗ್ರಗಣ್ಯರು.

## ಅಪ್ಪಾಲಾಲ್ ನದಾಫರ ವಿಶೇಷತೆ :

ಸ್ತ್ರೀ ಪಾತ್ರಕ್ಕೆ ಒಪ್ಪುವ ಮೈಮಾಟ ಅದಕ್ಕೆ ತಕ್ಕಂತೆ ವಸ್ತ್ರವಿನ್ಯಾಸ ಮಾಡಿಕೊಂಡು ರಂಗದ ಮೇಲೆ ಬಂದು ಮುಕ್ತಕಂಠದಿಂದ ಹಾಡಿದರೇ ಪ್ರೇಕ್ಷಕರು ಮೂಕ ಪ್ರೇಕ್ಷಕರಾಗುತ್ತಿದ್ದರು. ಅಂತಹ ವಿಶೇಷ ಆಕರ್ಷಣೆ ಅವರಲ್ಲಡಗಿತ್ತು. ಅಪ್ಪಾಲಾಲರು ಬಣ್ಣ ಬಡೆದುಕೊಂಡು ರಂಗಸ್ಥಳ ಪ್ರವೇಶ ಮಾಡಿದರೆಂದರೆ ನೋಡುಗರಿಂದ 'ಕವ್ವಾಲೀ ಬೀಳಲಿ' ಎಂಬ ಕೂಗು ಜನರಿಂದ ಕೇಳಿಬರುತ್ತಿತ್ತು. ಸಂದರ್ಭಕ್ಕೆ ತಕ್ಕಂತೆ ಕವ್ವಾಲಿಗಳನ್ನು ಹಾಡಿ ಪ್ರೇಕ್ಷಕರ ಮೈಮನ ಗೆದ್ದ ಮೋಡಿಕೋರರು. ಅಖಂಡ ತಮ್ಮ ಕಲಾಸೇವೆಯಲ್ಲಿ ಅಂದಾಜು ೧೨,೦೦೦ ಪ್ರಯೋಗಗಳನ್ನು ಮಾಡಿದ ಅಪ್ಪಾಲಾಲರು ಪ್ರಯೋಗದಿಂದ ಪ್ರಯೋಗಕ್ಕೆ ವ್ಯತ್ಸಾಸಗಳನ್ನು ಮಾಡುತ್ತಾ ನೋಡುಗರಿಗೆ ಹೊಸದನ್ನು ಆಸ್ವಾದಿಸಲು ಕೊಡುತ್ತಿದ್ದರು.

## ಶ್ರೀಕೃಷ್ಣಪಾರಿಜಾತದ ಪ್ರವರ್ಧಕ ಅಪ್ಪಾಲಾಲ್ :

ಅಪ್ಪಾಲಾಲ್ ನದಾಫರು ೧೯೩೨ರ ಸುಮಾರಿಗೆ ಬಣ್ಣ ಬಡೆದುಕೊಂಡು ಸುಮಾರು ಆರುದಶಕಗಳವರೆಗೆ ಶ್ರೀಕೃಷ್ಣ ಪರಮಾತ್ಮನ ಸೇವೆಯಲ್ಲಿ ಕಾಲಕಳೆದರು. ಸ್ವಾತಂತ್ರ್ಯ ಪೂರ್ವದಿಂದ ಆಧುನಿಕ ರೇಡಿಯೋ, ಟಿ. ವ್ಹಿ. ಹಾವಳಿಗಳ ನಡುವೆಯೂ ಶ್ರೀಕೃಷ್ಣಪಾರಿಜಾತ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಕರ್ನಾಟಕ, ಗೋವಾ, ಮಹಾರಾಷ್ಟ್ರ, ದೆಹಲಿಗಳಲ್ಲಿ ಪಾರಿಜಾತದ ಕಂಪನ್ನು ಪಸರಿಸಿದ್ದಾರೆ.

ಮರಾಠಿಯಲ್ಲಿ ಅಲ್ಪಸ್ವಲ್ಪ ಶಿಕ್ಷಣ ಪಡೆದ ಅಪ್ಪಾಲಾಲರು ಕನ್ನಡ ಪಾರಿಜಾತ ಎಲ್ಲೆಡೆ ಬೆಳೆಯುವಂತೆ ಕಲಾವಿದರು ಹಾಗೂ ಕಂಪನಿಗಳ ನಡುವಿನ ಕೊಂಡಿಯಾಗಿ ಕೆಲಸ ನಿರ್ವಹಿಸಿದ್ದಾರೆ. ಅಖಂಡ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ೩ ವರ್ಷಗಳ ಅವಧಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರನ್ನಾಗಿ ನೇಮಕ ಮಾಡಿ ಕಲಾವಿದರ ಸೇವೆ ಮಾಡಲು ಅವಕಾಶ ಕಲ್ಪಿಸಿತು. "ಕೆಂಪು ಬಣ್ಣದ ಪಿತಾಂಬರ ಉಟ್ಟ ಅಡ್ಡೆದ ಮ್ಯಾಲೆ ಬಂದರ ಸಾಹೇಬ್ರನ್ ಗಂಡ್ಸ ಅನ್ನಾವ್ರ ಯಾರ್ರೀ" ಎಂದು ಹೇಳುವ ಸಂದರ್ಭದಲ್ಲಿ ಪ್ರಸಂಗ ನೆನೆಸಿಕೊಂಡ ಕಲಾವಿದೆ ಶ್ರೀಮತಿ ಚಂಪಾಬಾಯಿ ಸುಳೆ ಇವರ ಕಣ್ಣಲ್ಲಿ ಆನಂದದ ಭಾಷ್ಪ ಬಂದವು. ಇಂತಹ ಮೇರು ನಟ ಸತತವಾಗಿ ೧೬ ಆಟ ಆಡಿದ ಕೀರ್ತಿ ಇವರದು. ಈ ಪ್ರತಿಭಾವಂತ ಕಲಾವಿದನಿಗೆ ೨೦೦೪ರಲ್ಲಿ ಮಹಾಲಿಂಗಪೂರದಲ್ಲಿ ನಡೆದ ಪ್ರಥಮ ಪಾರಿಜಾತೋತ್ಸವವನ್ನು ಉದ್ಘಾಟಿಸುವ ಅವಕಾಶ ಬಂದೊದಗಿತ್ತು.

**ಅಂತಿಮ ದಿನಗಳು :** ಪಾರಿಜಾತಕ್ಕಾಗಿ ತನ್ನ ಎಲ್ಲ ಶಕ್ತಿಯನ್ನು ಉಪಯೋಗಿಸಿ ಅಲ್ಪ ಸಮಯದಲ್ಲಿ ಪಾರಿಜಾತದ ಕೀರ್ತಿಯನ್ನು ಬೆಳೆಸಿದ ಅಪ್ಪಾಲಾಲರ ಸೇವೆ ಸ್ಮರಣೀಯ. ಇಂತಹ ಕಲಾವಿದ ಅಂತಿಮ ದಿನಗಳು ಕಬ್ಬಿಣದ ಕಡಲೆಗಳಾಗಿದ್ದವು. ತುಂಬು ಕುಟುಂಬವನ್ನು ನಡೆಸುವುದು ತೊಂದರೆಯಾಗಿತ್ತು. ಸರ್ಕಾರ ಕೊಡಮಾಡಿದ ೫೦೦-೦೦ ರೂಪಾಯಿಗಳ ಮಾಸಾಶನದಲ್ಲಿ ಜೀವನ ಸಾಗಿಸುತ್ತಿದ್ದರು ಬಡತನದಲ್ಲಿ ಹುಟ್ಟಿ ಬಡತನದಲ್ಲಿ ನಡೆದು ಬಂದ ದೀರ್ಘಕಾಲ ಅನಾರೋಗ್ಯದಿಂದ ಬಳಲಿ ಜಮಖಂಡಿಯ ತಮ್ಮ ಸ್ವಗೃಹದಲ್ಲಿ ದಿನಾಂಕ ೨೪-೧೧-೨೦೦೫ರ ಗುರುವಾರದಂದು ರಾತ್ರಿ ೮-೩೦ಕ್ಕೆ ಪಾರಿಜಾತ ಕೋಗಿಲೆ ಹಾಡು ನಿಲ್ಲಿಸಿತು.

ದಿ॥ ಅಪ್ಪಾಲಾಲ ನದಾಫ್,
ಕೆರೆಯ ಮೇಲ್ದಂಡೆ, ಜಮಖಂಡಿ,
ಜಿ : ಬಾಗಲಕೋಟೆ.

# ರಾಚಯ್ಯ ಮಠಪತಿ

ಆದಿಪುರುಷನಾರಾಯಣ
ನಿಗಮಾಗಮ ಗೋಚರಿಸುವ
ದೇವಾದಿ ದೇವನುನಾ

ಎಂದು ಹಾಡುತ್ತಾ ಕೃಷ್ಣನ ವೇಷಧರಿಸಿ ರಂಗದ ಮೇಲೆ ಬಂದರೆ ಪ್ರೇಕ್ಷರಿಗೆ ಸಾಕ್ಷಾತ್ ಶ್ರೀಕೃಷ್ಣನ ಪರಮಾತ್ಮನ ದರ್ಶನವಾದಂತೆ ಆಗುತ್ತಿತ್ತು. ಈ ಹಾಡನ್ನು ಶ್ರೀ ಕೃಷ್ಣ ಪಾರಿಜಾತದಲ್ಲಿ ಹಲವಾರು ಕೃಷ್ಣನ ಪಾತ್ರಧಾರಿಗಳು ಹಾಡುತ್ತರೆ. ಆದರೆ ಇಷ್ಟು ಸುಶ್ರಾವ್ಯವಾಗಿ ಹಾಡಿ ಜನರನ್ನು ಭಾವನಾ ಲೋಕಕ್ಕೆ ಒಯ್ಯುವ ಶಕ್ತಿ ಬರಗಿ ರಾಚಯ್ಯನವರನ್ನು ಬಿಟ್ಟು ಮತ್ತಾರಿಗೂ ಇಲ್ಲ ಎನ್ನುತ್ತಾರೆ. ಬರಗಿ ರಾಚಯ್ಯನವರ ಪಾರಿಜಾತ ನೋಡಿದ ಹಿಂದಿನ ಹಿರಿಯರು. ಇವರು ಮುಧೋಳ ತಾಲೂಕಿನ ಬರಗಿ ಎಂಬ ಪುಟ್ಟ ಗ್ರಾಮದಲ್ಲಿ ತಂದೆ ರಾಚಯ್ಯ ತಾಯಿ ದುಂಡವ್ವ ಎಂಬ ಶರಣ ದಂಪತಿಗಳ ಉದರದಲ್ಲಿ ೧೯೧೩ರಲ್ಲಿ ಜನಿಸಿದರು.

"ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು" ಎಂಬ ಮಾತಿನಂತೆ ಚಿಕ್ಕವರಿರುವಾಗ ಹಾಡು ಕೇಳುವುದನ್ನು ಅವುಗಳನ್ನು ಗೇಯ ತುಂಬಿ ಹಾಡುವುದನ್ನು ರೂಢಿಮಾಡಿಕೊಂಡು ಈ ಹಾಡುವುದನ್ನು ಒಂದು ದಿನ ಹೊಲದಲ್ಲಿ ನಿಂತು ಹಾಡುವುದನ್ನು ಊರಿನ ಮಠಾಧೀಶರಾದ ಮಹಾರುದ್ರಯ್ಯ ಸ್ವಾಮಿಗಳು ಕೇಳಿ ಖುಷಿಪಟ್ಟು ಅವರ ತಂದೆ ತಾಯಿಯನ್ನು ಕರೆಯಿಸಿ ಇವನು ಉತ್ತಮ ಸಂಗೀತಗಾರನಾಗುತ್ತಾನೆ. ಇವನಿಗೆ ಸಂಗೀತ ಅಭ್ಯಾಸ ಮಾಡಿಸೋಣ ಎಂದು ವಿಷಯ ಪ್ರಸ್ತಾಪಿಸಿದರು. ಮಹಾರುದ್ರಯ್ಯ ಮಹಾಸ್ವಾಮಿಗಳು ರಾಚಯ್ಯನ ಮೊದಲು ಸಂಗೀತ ಗುರುಗಳಾಗಿ ವಿದ್ಯೆ ಹೇಳಿಕೊಟ್ಟರು. ಮುಂದೆ ಕೆಲವು ದಿನಗಳಾದನಂತರ ಹಿರಿಯ ಪಾರಿಜಾತ

ಭಾಗವತರಾದ ಬರಗಿ ಅಪ್ಪಾಲಾಲರ ಮಾರ್ಗದರ್ಶನದಲ್ಲಿ ಗ್ರಾಮದ ಒಂದಿಷ್ಟು ಯುವಕರನ್ನು ಸಂಘಟಿಸಿ ಶ್ರೀಕೃಷ್ಣಪಾರಿಜಾತ ಬೈಲಾಟ ಪ್ರಾರಂಭಿಸಿದರು.

ರಾಚಯ್ಯನವರಿಗೆ ಮೊದಮೊದಲು ಅಭಿನಯ ಹೇಳಿಕೊಟ್ಟದ್ದು ಸತ್ಯಭಾಮಾ ಹಾಗೂ ಗೊಲ್ಲತಿಯ ಪಾತ್ರಗಳನ್ನು ಸೀರೆ ಉಟ್ಟೊಡನೆ ನಾಚಿಕೊಂಡು ರಾಚಯ್ಯನವರಿಗೆ ಅಳವು ಬಂದಾಂತಾಗಿ ಅಭಿನಯಿಸಲು ಸಾಧ್ಯವಾಗಲೇ ಇಲ್ಲ, ಮುಂದೆ ಇವರಿಗೆ ಕೃಷ್ಣನ ಪಾತ್ರ ನಿರ್ವಹಿಸಲು ನಿರ್ದೇಶನ ನೀಡಿದರು. ಕೃಷ್ಣನ ಪಾತ್ರದಲ್ಲಿ ಭಾವತುಂಬಿ ಅಭಿನಯಿಸಿ ಜನರಿಂದ ಮೆಚ್ಚುಗೆಗಳಿಸಿಕೊಂಡರು. ಒಮ್ಮೆ ನಣದಿ ರಾಮಣ್ಣ ಬೀಳಗಿ ತಾಲೂಕಿನ ನಾಗರಾಳದ ದಿಗಂಬರೀಮಠದ ಜಾತ್ರೆಯಲ್ಲಿ ರಾಚಯ್ಯನವರ ಅಭಿನಯ ಕಂಡು ಸಂತೋಷಪಟ್ಟು ಪ್ರೋತ್ಸಾಹಿಸದರು. ನಂತರದ ದಿನಗಳಲ್ಲಿ ಆಲಗೂರು ಕುಂಚನೂರ ಕಂಪನಿಯಲ್ಲಿ ತಮ್ಮ ವಿದ್ಯಾಗುರುಗಳಾದ ಅಪ್ಪಾಲಾಲರೊಂದಿಗೆ ಸೇವೆಯನ್ನು ಮಾಡಿದರು. ಅಲ್ಲಿಯ ತಂಡದವರೊಂದಿಗೆ ಹೊಂದಾಣಿಕೆಯಾಗಲಾರದಕ್ಕೆ ಈ ಕಂಪನಿ ಬಿಟ್ಟು ಹೊರಗೆ ಬಂದು ಜಮಖಂಡಿಯ ಅಪ್ಪಾಲಾಲರ ಕಂಪನಿ ಸೇರಿಕೊಂಡರು. ಬರಗಿ ರಾಚಯ್ಯನವರಂತಹ ಶ್ರೇಷ್ಠ ಹಾಡುಗಾರರು ಅಪ್ಪಾಲಾಲರಂತ ಶ್ರೇಷ್ಠ ಹಾಡುಗಾರರು ಕಂಪನಿಯಲ್ಲಿದ್ದಾಗ ಜಮಖಂಡಿ ಅಪ್ಪಾಲಾಲರ ಕೀರ್ತಿ ಎಲ್ಲೆಡೆ ಪಸರಿಸಿತು. ನಂತರ ಸುಮಾರು ೨೦ ವರ್ಷಗಳ ಕಾಲ ಕೌಜಲಗಿಯ ನಿಂಗವ್ವ ಕಂಪನಿಯಲ್ಲಿ ಕೃಷ್ಣ ಪಾತ್ರ ನಿರ್ವಹಿಸಿ ಹೆಸರುಗಳಿಸಿದರು. ಅಷ್ಟೊತ್ತಿಗೆ ಹಲ್ಲುಗಳು ಉದುರಿದ್ದು ಸ್ವಗ್ರಾಮ ಬರಗಿಗೆ ಬಂದರು. ಇವರ ಅಭಿನಯಕ್ಕೆ ಮನಸೋತ ಕೆರೂರ ಸುಲ್ತಾನಸಾಬ, ಇಂಗಳಗಿಯ ಲಕ್ಷ್ಮಣ ಎನ್ನುವವರು ದುಂಬಾಲು ಬಿದ್ದು ತಮ್ಮ ಕಂಪನಿಗೆ ಕರೆದುಕೊಂಡು ಹೋಗಿ "ಹಲ್ಲಿನ ಸೆಟ್ಟು" ಹಾಕಿಸಿ ಆಟಮಾಡಿಸಿಕೊಂಡರು. ಈ ತಂಡ ಮುರಿದ ನಂತರ ಸುದ್ದಿ ತಿಳಿದ ಅಪ್ಪಾಲಾಲ್ ನದಾಫರು ಬಂದು ಇನ್ನಷ್ಟು ದಿನ ನಮ್ಮ ಕಂಪನಿಯಲ್ಲಿ ಬನ್ನಿರಿ ಎಲ್ಲರೂ ಸೇರಿ ಕಂಪನಿ ನಡೆಸೋಣವೆಂದು ದುಂಬಾಲು ಬಿದ್ದಾಗ, ಸಂತೋಷದಿಂದ ಒಪ್ಪಿಕೊಂಡು ಮತ್ತೆ ಅಪ್ಪಾಲಲರ ಕಂಪನಿ ಸೇರಿಕೊಂಡು ಬಹಳ ದಿನಗಳವರೆಗೆ ಇಲ್ಲಿಯೇ ಇದ್ದುಕೊಂಡು ಆಟ ಮಾಡಿದರು.

ರಾಚಯ್ಯನವರ ಹಾಡುಗಾರಿಕೆ, ರಾಗಾಲಾಪ, ಸತ್ಯಭಾಮೆಯೊಂದಿಗೆ ಸಂವಾದ ಆಧ್ಯಾತ್ಮಿಕ ವಿಷಯಗಳು ನೋಡುಗರನ್ನು ರಂಜಿಸುತ್ತಿದ್ದವು. ಪಾರಿಜಾತದ ಘಟಾನುಘಟಿಗಳಿಂದ ಸೈ ಎನಿಸಿಕೊಂಡು ಪಾತ್ರ ನಿರ್ವಹಿಸಿ ಮುಂಬರುವ ಪಾರಿಜಾತ ಕಲಾವಿದರಿಗೆ ಮಾದರಿ ಬರಗಿ ರಾಚಯ್ಯನವರು.

ರೇಡಿಯೋ ದೂರದರ್ಶನಗಳಂತೆ ಮಾಧ್ಯಮಗಳಲ್ಲಿ ಇವರ ಪಾರಿಜಾತದ ಪ್ರಸಂಗಗಳು ಪ್ರಸಾರಗೊಂಡಿವೆ. ಹಲವಾರು ಸಲ ಧ್ವನಿಸುರುಳಿಗಳು ಸಹ ಬಿಡುಗಡೆಗೊಂಡಿವೆ. ವಿವಿಧ ಕಂಪನಿಯಲ್ಲಿ ಸುಮಾರು ೨೦,೦೦೦ ಪ್ರಯೋಗಗಳನ್ನು ಮಾಡಿದ

ಕೀರ್ತಿಬರಗಿ ರಾಚಯ್ಯನವರದು ಕರ್ನಾಟಕ, ಮಹಾರಾಷ್ಟ್ರ, ಗೋವಾ ಆಂಧ್ರಪ್ರದೇಶ, ದೆಹಲಿಗಳಲ್ಲಿ ಅಲ್ಲದೆ ಹಲವಾರು ಗಣ್ಯಮಾನ್ಯರ ಮುಂದೆ ತಮ್ಮ ಕಲಾ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿಕೊಂಡಿದ್ದಾರೆ. ಈ ಪಾರಿಜಾತ ಕಲೆ ಉಳಿಯಬೇಕು, ಬೆಳೆಯಬೇಕೆಂಬ ಉದ್ದೇಶದಿಂದ ಹಲವಾರು ಕಿರಿಯ ಕಲಾವಿದರಿಗೆ ತರಬೇತಿಗೊಳಿಸಿದ್ದಾರೆ. ಅಂತವರಲ್ಲಿ ಸೈದು ಮುಗಳಖೋಡ, ಮಾಯಪ್ಪ ಬೆಳಗಲಿ, ಲಕ್ಷ್ಮಣ ಗೋಲಬಾವಿ, ಚಿನ್ನಪ್ಪ, ಚಿನ್ನಮ್ಮನವರಂತವರಿಗೆ ಪಾರಿಜಾತದ ದೀಕ್ಷೆ ಕೊಟ್ಟು ಪ್ರೋತ್ಸಾಹಿಸಿ ರಂಗದ ಮೇಲೆ ತಂದು ಖುಷಿ ಪಟ್ಟವರು ಬರಗಿ ರಾಚಯ್ಯನವರು. ತಾವು ಎಷ್ಟೇ ತೊಂದರೆ ತೆಗೆದುಕೊಂಡರು ಹೊಟ್ಟೆಯಲ್ಲಿ ನುಂಗಿ ಪ್ರೇಕ್ಷಕರನ್ನು ಸಂತೋಷಸಾಗರದಲ್ಲಿ ತೇಲಾಡಿಸುವ ಗುಣ ಹೊಂದಿದ ರಾಚಯ್ಯನವರು ಜೀವನವನ್ನು ಕೊನೆಯವರೆಗೂ ಬಾಡಗಿ ಮನೆಯಲ್ಲಿ ಕಳೆದರೂ ಆರ್ಥಿಕವಾಗಿ ಬಡವರಿದ್ದರು. ಕಲಾಶ್ರೀಮಂತಿಕೆ ಮಾತ್ರ ತುಂಬಿ ತುಳುಕುತ್ತಿತ್ತು.

ಇವರ ಕಲಾ ಪ್ರತಿಭೆಯನ್ನು ಕಂಡು ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿ ಪುರಸ್ಕರಿಸಿದರು. ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರು ಸನ್ಮಾನಿಸಿ ಪ್ರಶಸ್ತಿ ನೀಡಿದ್ದಾರೆ. ಈ ಎರಡು ಪ್ರಶಸ್ತಿ ಸನ್ಮಾನಗಳನ್ನು ಬಿಟ್ಟರೆ ಸರ್ಕಾರ ಇವರನ್ನುಗುರುತಿಸುವ ಕ್ರಿಯೆಯಲ್ಲಿ ತೊಡಗಲಿಲ್ಲ ಎಂಬುದು ಹಿರಿಯರ ಅಭಿಪ್ರಾಯ. ಇಂತಹ ಶ್ರೇಷ್ಠವಾದ ಕಲಾವಿದ ಹಲವಾರು ಏಳು ಬೀಳುಗಳ ನಡುವೆಯೂ ೨೦–೧೦–೧೯೭೬ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು. ಪಾರಿಜಾತ ಪ್ರೇಮಿಗಳ ಕಣ್ಣಲ್ಲಿ ನೀರಿನ ಕೋಡಿ ಹರಿಸಿದರು. ಆದರೆ ಬರಗಿ ರಾಚಯ್ಯನವರು ಇಂದು ನಮ್ಮ ಮುಂದೆ ಇಲ್ಲ ಆದರೆ ಅವರು ಮಾಡಿದ ಸಾಧನೆ. ಅವರ ಅಭಿನಯ ಮಾತ್ರ ಇನ್ನೂ ಯುವ ಕಲಾವಿದರಿಗೆ ಮಾದರಿಯಾಗಿದೆ.

ದಿ॥ ರಾಚಯ್ಯ ಮಠಪತಿ,
ಸಾ : ಬರಗಿ,
ತಾ : ಮುಧೋಳ, ಜಿ : ಬಾಗಲಕೋಟೆ.

## ಮುರಿಗೆಪ್ಪ ಮ. ಸೋರಗಾಂವಿ

ಬಯಲಾಟಗಳ ರಾಜನೆಂದು ಕರೆಯಿಸಿಕೊಳ್ಳುವ ಶ್ರೀಕೃಷ್ಣ ಪಾರಿಜಾತಕ್ಕೆ ತನ್ನದೇ ಆದ ವಿಶೇಷ ಸಂಗೀತ ಪ್ರಕಾರವಿದೆ ಅಂತಹ ಸಂಗೀತವನ್ನು ಮನನಮಾಡಿ ಕೊಂಡವರು ಮಹಾಲಿಂಗಪೂರದ ಮುರಿಗೆಪ್ಪ ಸೋರಗಾಂವಿ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದಲ್ಲಿ ದಿನಾಂಕ ೨೦-೫-೧೯೨೦ರಲ್ಲಿ ಮಧ್ಯಮ ವರ್ಗದ ನೇಕಾರ ಕುಟುಂಬದಲ್ಲಿ ಜನಿಸಿದರು. ಕಾಯಕ ಸಿದ್ಧಾಂತದಲ್ಲಿ ಜೀವನ ನಡೆಸುವ ಕುಟುಂಬದಲ್ಲಿ ಜನಿಸಿದ ಮುರಿಗೆಪ್ಪನವರು ಬಾಲ್ಯದಲ್ಲಿಯೇ ಸಂಗೀತದ ಗುಂಗು ಹಚ್ಚಿಕೊಂಡು ಬೆಳೆದವರು. ಗಾನಯೋಗಿ, ಸಂಗೀತ ಸಾರ್ವಭೌಮ, ಪಂಡಿತ ಪಂಚಾಕ್ಷರಿ ಗವಾಯಿಗಳ ಸಂಗೀತದಿಂದ ಪ್ರಭಾವಿತರಾಗಿ ಸಂಗೀತ ಅಭ್ಯಾಸದತ್ತ ಗಮನ ಹರಿಸಿದರು. ಜಮಖಂಡಿಯ ಅಪ್ಪಾಲಾಲ ರಾಜೇಸಾಬ ಮದ್ದಿನ ಅವರಲ್ಲಿ ಶಾಸ್ತ್ರೀಯ ಸಂಗೀತ ಅಭ್ಯಾಸ ಪ್ರಾರಂಭಿಸಿದರು. ನಂತರ ಚಿಕ್ಕೋಡಿಯ ಶ್ರೀ ಸಿ. ಎಂ. ಗಾಂಧಿಬುವಾ ಅವರಲ್ಲಿ ಹಾರ್ಮೋನಿಯಂ ಬಾರಿಸು ಕಲೆಯನ್ನು ಕಲಿತರು. ತದನಂತರ ಹುನಗುಂದ ತಾಲೂಕಿನ ಕಮತಗಿಯ ಜಂಪಣ್ಣ ವಂದಗನೂರವರಲ್ಲಿ ಅಭ್ಯಾಸ ಕಲಿತುಕೊಂಡು ಜಮಖಂಡಿಯ ಶ್ರೀ ಸಂಗಮೇಶ್ವರ ಹಿರೇಮಠ ಗವಾಯಿಗಳಲ್ಲಿ ಎರಡು ವರ್ಷ ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿ ಅವರ ಮಾರ್ಗದರ್ಶನದಲ್ಲಿಯೇ ಶ್ರೀಕೃಷ್ಣಪಾರಿಜಾತದ ಬೈಲಾಟದ ಹಾಡುಗಳಿಗೆ ನೋಟೇಶನ್‌ಗಳಿಗೆ ಶಾಸ್ತ್ರೀಯ ಸಂಗೀತವನ್ನು ಅಳವಡಿಸಿ ಶ್ರೀಕೃಷ್ಣ ಪಾರಿಜಾತಕ್ಕೆ ಮತ್ತು ಆ ಪ್ರಯೋಗದಲ್ಲಿ ಬರುವ ರಂಗಗೀತೆಗಳಿಗೆ ಹೊಸ ಆಯಾಮವನ್ನು ಕಂಡು ಹಿಡಿದರು. ಈ ಸಂದರ್ಭದಲ್ಲಿ ಮಹಾಲಿಂಗಪೂರದಲ್ಲಿ ಶ್ರೀಕೃಷ್ಣಪಾರಿಜಾತದ ಪ್ರಥಮ ಮಹಿಳ ಕಲಾವಿದೆ ಕೌಜಲಗಿ ನಿಂಗಮ್ಮನ ಹೆಸರು ಎಲ್ಲ ಕಡೆಯಲ್ಲಿ ಪಸರಿಸಿತ್ತು. ಈ ಕಂಪನಿಯಲ್ಲಿಯೂ ಸಹ ಹಲವಾರು ವರ್ಷಗಳ ಕಾಲ ಹಾರ್ಮೋನಿಯಂ ವಾದಕರಾಗಿ ಮುರಿಗೆಪ್ಪನವರು ಸೇವೆಸಲ್ಲಿಸಿದರು.

೧೯೪೩ರಲ್ಲಿ ಹವ್ಯಾಸಿ ನಾಟಕ ಕಂಪನಿ ಸ್ಥಾಪಿಸಿದರು. ಸ್ವತಃ ನಿರ್ದೇಶಕರಾಗಿ ಹಾರ್ಮೋನಿಯಂ ವಾದಕರಾಗಿ ಮತ್ತು ಕಲಾವಿದರಾಗಿ ಜನಮೆಚ್ಚುಗೆ ಗಳಿಸಿ ಚಿತ್ರಾಂಗದ ಬಡತನದ ಭೂತ, ಬಭ್ರುವಾಹನ ಮೊದಲಾದ ನಾಟಕಗಳನ್ನು ಪ್ರಯೋಗ ಮಾಡುವ ಮೂಲಕ ಈ ಪ್ರದೇಶದಲ್ಲಿ ನಾಟಕ ಗೀಳನ್ನು ಬೆಳೆಸಿದರು. ಮುಂದೆ ಕೆಲವು ವರ್ಷಗಳ ನಂತರ ೧೯೬೦ರಲ್ಲಿ ತಮ್ಮ ನೇತೃತ್ವದಲ್ಲಿ ಶ್ರೀಕೃಷ್ಣಪಾರಿಜಾತ ಕಂಪನಿ ಸ್ಥಾಪಿಸಿ ಆ ಕಂಪನಿಯ ಮೂಲಕ ಕಲಾಸೇವೆಗೆ ಸಜ್ಜಾದರು. ಸ್ವತಃ ತಮ್ಮ ಮಗ ಶ್ರೀಶೈಲಪ್ಪನಿಗೆ ಪಾರಿಜಾತದ ಎಲ್ಲ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುವಷ್ಟು ತರಬೇತಿ ನೀಡಿ ಎಲ್ಲ ಕಲವಿದರುಗಳನ್ನು ಮೇಳೈಸಿಕೊಂಡು ಕಂಪನಿ ನಡೆಸಿಕೊಂಡು ಹೊರಟರು. ಶ್ರೀಕೃಷ್ಣಪಾರಿಜಾತ ಕಲೆಯನ್ನು ಸಮರ್ಥ ರೀತಿಯಿಂದ ಹೊಸ ಮಾದರಿಯಲ್ಲಿ ತಯಾರಿಸಿ ಪ್ರೇಕ್ಷಕರಿಗೆ ಹೊಸದನ್ನು ಕೊಡುತ್ತಿದ್ದರು. ಮುಂಬೈ, ಕನ್ನಡ ಅಭಿಮಾನಿಗಳ ಒತ್ತಾಸೆಗೆ ಮಣಿದು ಅಲ್ಲಿಗೆ ಹೋಗಿ, ವರ್ಲಿ ಧಾರಾವೆ, ಮಾತುಂಗಾ, ಗಾಯವಾಡಿ, ಸಾಯೇನ್ ಕೇತವಾಡಿ, ಬಸವಭವನಗಳಲ್ಲಿ ಒಟ್ಟು ೩೨ ಪ್ರಯೋಗಗಳನ್ನು ಮಾಡಿ ಪ್ರೇಕ್ಷಕರ ಪ್ರೀತಿಗೆ ಪಾತ್ರರಾದರು. ೧೯೬೪ ಮತ್ತು ೧೯೮೨ರಲ್ಲಿ ಎರಡು ಮುಂಬೈ ಪ್ರದೇಶದಲ್ಲಿ ಪಾರಿಜಾತ ಕಂಪನ್ನು ಪಸರಿಸಿದ್ದಾರೆ. ಕನ್ನಡ ನಾಡಿನ ಪ್ರಮುಖ ಪಟ್ಟಣಗಳೂ ಸೇರಿದಂತೆ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದಲ್ಲಿ ಒಟ್ಟು ೪೦೦೦ ಪ್ರಯೋಗಗಳನ್ನು ನೀಡಿ ಎಲ್ಲ ಕಲಾರಸಿಕರ ಮನದಲ್ಲಿ ಉಳಿದುಕೊಂಡವರು ಮುರಿಗೆಪ್ಪನವರು.

ಶ್ರೀ ಮುರಿಗೆಪ್ಪಣ್ಣ ಸೋರಗಾವಿವರ ಅಖಂಡಕಲಾ ಸೇವೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಪುರಸ್ಕರಿಸಿವೆ. ಜೊತೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಇವರು ೧೯೯೦ರಲ್ಲಿ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

ಕಲೆಗಾಗಿಯೇ ತಮ್ಮ ಜೀವನವನ್ನೇ ಮುಡಿಪಿಟ್ಟ ಕಲಾಚೇತನ ಮುರಿಗೆಪ್ಪ ಸೋರಗಾಂವಿಯವರು ದಿನಾಂಕ ೮-೬-೧೯೭೩ ರಂದು ಲಿಂಗೈಕ್ಯರಾದರು. ಅವರು ನಮ್ಮೊಂದಿಗಿಲ್ಲವಾದರೂ ಅವರು ಹೇಳಿಕೊಟ್ಟು ಮಾರ್ಗದರ್ಶನ ಎಂದಿಗೂ ಮರೆಯುವಂತಿಲ್ಲ ಅವರ ಅಪ್ಪಣೆಯಂತೆ ಅವರ ಪರಿವಾರದವರು ನಡೆದು ಈ ಜಾನಪದ ಕಲೆ ಉಳಿವಿಗಾಗಿ ಸಾರ್ಥಕ ಪ್ರಯತ್ನಮಾಡುತ್ತಿದ್ದಾರೆ.

ದಿ. ಮುರಿಗೆಪ್ಪ ಮ. ಸೋರಗಾಂವಿ
ಸಾ : ಮಹಾಲಿಂಗಪೂರ,
ತಾ : ಮುಧೋಳ, ಜಿ : ಬಾಗಲಕೋಟೆ.

## ವಿಠಲರಾವ್ ಸಿದ್ಧಪ್ಪ ನಾವಿ

ಶ್ರೀಕೃಷ್ಣಪಾರಿಜಾತ ಬಯಲಾಟಕ್ಕೆ ಹೆಸರು ತಂದು ಕೊಟ್ಟವರು. ಜಮಖಂಡಿ ಪರಿಸರದ ಕೆಲವೇ ಕೆಲವರಲ್ಲಿ ವಿಠಲ್‌ರಾವ್ ಟಕ್ಕಳಕಿಯವರು ಎಂದು ಹೇಳಬಹುದು. ಮೂಲತಃ ಜಮಖಂಡಿ ತಾಲೂಕಿನ ಟಕ್ಕಳಕಿ ಎಂಬ ಪುಟ್ಟಗ್ರಾಮದ ಸಿದ್ಧಪ್ಪ ಬಾಗವ್ವ ಎಂಬ ಶರಣದಂಪತಿಗಳ ಉದರದಲ್ಲಿ ವಿಠಲರಾವ್ ಜನಿಸಿದರು. ಸುಮಾರು ೧೯೨೦ರ ಸುಮಾರಿಗೆ ಟಕ್ಕಳಕಿಯಲ್ಲಿ ಶ್ರೀಕೃಷ್ಣಪರಿಜಾತ ಸಂಘ ಉದಯವಾಯಿತು. ಈ ಕಂಪನಿಯ ವಿದ್ಯಾಗುರುಗಳಾಗಿ ಪ್ರಸಿದ್ಧ ಕಲಾವಿದರಾದ ಆಲಗೂರಿನ ಗುರಪ್ಪ ಮಾಸ್ತರ ಮತ್ತು ಸೂರ್ಪಾಲಿಯ ಅಚ್ಯುತ ಮಾಸ್ತರ ಕಾರ್ಯನಿರ್ವಹಿಸುತ್ತಿದ್ದರು. ವಿಠ್ಠಲರಾವ್ ಅವರ ತಂದೆಯವರ ಪ್ರೋತ್ಸಾಹದಿಂದ ಈ ತಂಡದಲ್ಲಿ ಬಣ್ಣ ಬಡೆದುಕೊಳ್ಳಲು ಪ್ರಾರಂಭಿಸಿದರು. ಪ್ರಥಮಬಾರಿಗೆ ಗೋಪಾಲನ ಪಾತ್ರ ನಿರ್ವಹಿಸಿ ಜನಮೆಚ್ಚುಗೆ ಪಡೆದುಕೊಂಡರು. ಹಲವಾರು ವರ್ಷಗಳವರೆಗೆ ಈ ತಂಡದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಸಮಯದಲ್ಲಿಯೇ ಜಮಖಂಡಿ ಅಪ್ಪಾಲಾಲರ ಕಂಪನಿ ಬಹಳ ಹೆಸರು ಮಾಡಿತ್ತು. ವಿಠಲರಾವ್ ಅವರ ಅಭಿನಯವನ್ನು ಕಂಡು ಅಪ್ಪಾಲಾಲರು ಅವರನ್ನು ತಮ್ಮ ಕಂಪನಿಗೆ ಕರೆತಂದು ಶ್ರೀಕಾಡಸಿದ್ದೇಶ್ವರ ಶ್ರೀಕೃಷ್ಣಪಾರಿಜಾತ ಸಂಘ ಎಂಬ ಕಂಪನಿ ಕಟ್ಟಿ ಈ ಕಂಪನಿಯಲ್ಲಿ ಹಲವಾರು ಹೊಸಮುಖಗಳಿಗೆ ಪ್ರಾಧಾನ್ಯತೆ ಕೊಟ್ಟು ಆ ಸಂದರ್ಭದಲ್ಲಿರುವ ತಂಡದವರು ಕೃಷ್ಣನ ಪಾತ್ರದಲ್ಲಿ ವಿಠಲರಾವ್ ಟಕ್ಕಳಕಿ, ಭಾಗವತರಾಗಿ ಹಾಜಿಸಾಬ ನದಾಫ್ ಗೊಲ್ಲತಿ, ಸತ್ಯಭಾಮಾ, ಕೊರವಂಜಿಯಾಗಿ ಅಪ್ಪಾಲಾಲ್ ನದಾಫ್, ದೊರೆಸಾನಿಯಾಗಿ ಚಂಪಾಬಾಯಿ ನಣದಿ, ನಾರದ ಗೋಪಾಲರಾಗಿ ಸಂಗಪ್ಪ ಹಿಪ್ಪರಗಿ ಇವರುಗಳು ರಂಗದ ಮೇಲೆ ಕಾಣಿಸಿಕೊಳ್ಳುತ್ತಿದ್ದರು. ಉತ್ತಮ ಕಲಾವಿದರ ಸಂಗಮವಾಗಿ ಹಲವಾರು ವರ್ಷಗಳವರೆಗೆ ಈ ತಂಡ ನಡೆಯಿತು. ಮುಂದೆ ಹಲವಾರು ಕಾರಣಗಳಿಂದ ವಿಠಲರಾವ್ ಟಕ್ಕಳಕಿಯವರು ಅಪ್ಪಾಲಾಲ್ ನದಾಫ್ ಅವರು ಬೇರೆ ಬೇರೆ ತಂಡ

ಕಟ್ಟಿಕೊಂಡು ಹೊಸ ಕಲಾವಿದರನ್ನು ಸಂಘಕ್ಕೆ ಕರೆತಂದು ಅಖಂಡ ಕಲಾಸೇವೆಯಲ್ಲಿ ಸಾಗಿದರು. ವಿಠಲರಾವ್ ಅವರ ಸತತ ಅಭ್ಯಾಸದ ಫಲವಾಗಿ ಪ್ರಯೋಗದಿಂದ ಪ್ರಯೋಗಕ್ಕೆ ಹೊಸದನ್ನು ಜನರಿಗೆ ನೀಡುತ್ತಾ ಉತ್ತಮ ತಂಡವಾಗಿ ರೂಪು ಪಡೆಯಿತು. ಪಾರಿಜಾತ ಪ್ರೇಮಿಗಳು. ಹಿಂದೂಸ್ಥಾನಿ ಹಾಗೂ ಕರ್ನಾಟಕ ಎರಡು ಸಂಗೀತ ಪ್ರಭೇದಗಳನ್ನು ಬಲ್ಲವರಾದ ಇವರು ಹಾಡುಗಾರಿಕೆಯಲ್ಲಿ ಹೊಸ ಶೈಲಿಯ ಜೊತೆಗೆ ನೋಡುಗರಿಗೆ ಹೊಸದನ್ನು ಕೊಟ್ಟು ಜನಪ್ರಿಯತೆ ಗೊಂಡಿದ್ದಾರೆ. ಇವರ ಅಖಂಡ ಕಲಾ ಸೇವೆಯನ್ನು ಕಂಡು ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೭ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಆಧುನಿಕ ಯುಗದಲ್ಲಿ ಹಲವಾರು ಎಡರು ತೊಡರುಗಳು ಬಂದರು ಅಂಜದೆ ಸಂಘ ಕಟ್ಟಿ ಸುಮಾರು ಆರು ದಶಕಗಳಿಂದ ಕಲಾಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದು, ಅಂದಾಜು ೧೦ ಸಾವಿರ ಪ್ರಯೋಗ ಗಳನ್ನು ಮಾಡಿ ಇತಿಹಾಸ ನಿರ್ಮಿಸಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲಿಯೂ ಸಹ ಇವರ ಆಟ ಪ್ರದರ್ಶನವಾಗುವದಲ್ಲದೆ ಹಲವಾರು ಭಾಗಗಳಾಗಿ ಧ್ವನಿ ಸುರುಳಿ ಬಿಡುಗಡೆ ಆಗಿವೆ. ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿ ಪಾರಿಜಾತ ಜನಪ್ರಿಯತೆಯನ್ನು ಹೆಚ್ಚಿಸುವಲ್ಲಿ ಇವರ ಪಾತ್ರ ಮಹತ್ವ ಪೂರ್ಣವಾದದು. ಹಲವಾರು ಯುವ ಪ್ರತಿಭಾವಂತ ಕಲಾವಿದರ ಗುಂಪು ತಯಾರಿಸಿ ಈ ಕಲೆ ಉಳಿವಿಗೆ ಶ್ರತ ಪ್ರಯತ್ನಿಸುತ್ತಿರುವ ವಿಠಲರಾವ್, ಹಲವಾರು ರಾಷ್ಟ್ರೀಯ ಉತ್ಸವಗಳಲ್ಲಿ ಗಣ್ಯ ಮಾನ್ಯರು, ವಿದ್ವಾಂಸರ ಮುಂದೆ ತಮ್ಮ ಕಲಾ ಪ್ರದರ್ಶನ ನೀಡಿ ಸೈ ಎನಿಸಿ ಕೊಂಡಿದ್ದಾರೆ.

ಮುಗ್ಧ ಸ್ವಭಾವದ ಪ್ರತಿಭಾನ್ವಿತ ಕಲಾವಿದರಾದ ವಿಠಲರಾವ ಸಾದಾ ನಡೆನುಡಿಯಿಂದ ಇತರರ ಮನಸ್ಸು ಗೆದ್ದುಕೊಂಡವರು. ಇವರ ಅಖಂಡ ಕಲಾಸೇವೆಯನ್ನು ಕಂಡು ಜಾನಪದ ಸಂಶೋಧನಾ ಕೇಂದ್ರ ಧಾರವಾಡ ಹಾಗೂ ಪ್ರಥಮ ಪಾರಿಜಾತ ಸಮ್ಮೇಳನ ಮಹಾಲಿಂಗಪೂರದಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸಿದ್ದಾರೆ. ಇವರ ಅಖಂಡ ಕಲಾಸೇವೆಯ ಪ್ರತಿಫಲವಾಗಿ ೨೦೦೦ನೇ ಇಸ್ವಿಯಲ್ಲಿ ಕರ್ನಾಟಕ ಸರ್ಕಾರ "ಜಾನಪದ ಶ್ರೀ" ಎಂಬ ಪ್ರಶಸ್ತಿ ನೀಡಿ ಮತ್ತಷ್ಟು, ಪ್ರೋತ್ಸಾಹಿಸಿದೆ. ಇಂತಹ ಶ್ರೇಷ್ಠ ಕಲಾವಿದನಿಗೆ ಇನ್ನೂ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರೆಯುವಲ್ಲಿ ದೇವರು ಆಯುಷ್ಯ ಆರೋಗ್ಯ ಕೊಟ್ಟು ಇನ್ನಷ್ಟು ಕಲಾಸೇವೆ ಮಾಡಲಿ ಎಂಬುದು ಅವರ ಅಭಿಮಾನಿಗಳ ಆಶಯವಾಗಿದೆ.

ವಿಠಲರಾವ್ ಸಿ. ನಾಫ್ಡಿ,
ಸಾ : ಟಕ್ಕಳಕಿ,
ತಾ : ಜಮಖಂಡಿ, ಜಿ : ಬಾಗಲಕೋಟೆ.

## ರಾಮಣ್ಣಾ ವೆಂಕಪ್ಪ ಶಿರೋಳ

ಜಮಖಂಡಿಯಿಂದ ಪೂರ್ವದಿಕ್ಕಿನಲ್ಲಿ ಸುಮಾರು ೮ ಕಿ. ಮೀ. ಚಲಿಸಿದರೆ ಕೃಷ್ಣಾ ನದಿಯ ದಂಡೆಯ ಮೇಲೆ ಒಂದು ಊರು ಸಿಗುವುದು. ಇದು ಕುಂಚನೂರು ಗ್ರಾಮ. ಕೃಷ್ಣಪಾರಿಜಾತ, ಕರಡಿ ಮಜಲು ಗಳಂತ ಜಾನಪದ ಕಲೆಗಳ ತವರೂರು ಅವರ ಜೊತೆಯಾಗಿ ದೇಶಿಯ ಆಟವಾದ ಕಬಡ್ಡಿಗೆ ವಿಶೇಷ ಒತ್ತು ನೀಡಿ ಈ ಕಬಡ್ಡಿ ಆಟಗಾರರರನ್ನು ಬೆಳೆಸಿದ ಕೀರ್ತಿ ಈ ಗ್ರಾಮಕ್ಕೆ ಸಲ್ಲುತ್ತದೆ. ಇಂತಹ ಇತಿಹಾಸ ಹೊಂದಿದ ಗ್ರಾಮದ ವೆಂಕಪ್ಪ ಭಾಗೀರತಿ ಎಂಬ ದಂಪತಿಗಳ ೪ನೇ ಮಗನಾಗಿ ೧೯೩೫ರಲ್ಲಿ ಜನಿಸಿದರು.

ಪ್ರಾಥಮಿಕ ಶಾಲೆಯಲ್ಲಿಯೇ ಓದುತ್ತಿರುವಾಗ ಊರಿನ ಹಿರಿಯ ಪಾರಿಜಾತ ಕಲಾವಿದರಾದ ಮಲ್ಲೇಶಪ್ಪ ಕೋಣೆಗೊಳ ಇವರನ್ನು ರಂಗ ಭೂಮಿಕಲಾಸೇವೆಗೆ ಕರೆತಂದರು. ೧೯೪೮ರಲ್ಲಿ ಶ್ರೀ ಗುರಪ್ಪ ಮಾಸ್ತರ ಆಲಗೂರ ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಶ್ರೀಕೃಷ್ಣಪಾರಿಜಾತದಲ್ಲಿ ಬರುವ ಗೊಲ್ಲತಿ, ಸತ್ಯಭಾಮಾ, ಕೊರವಂಜಿ ಪಾತ್ರಗಳನ್ನು ಅಭಿನಯಿಸುವ ಮೂಲಕ ಕಲಾಜೀವನ ಪ್ರಾರಂಭಿಸಿದರು. ಸುಮಾರು ೧೨ ವರ್ಷಗಳ ಕಾಲ ಕುಂಚನೂರ ಪಾರಿಜಾತ ಕಂಪನಿಯಲ್ಲಿ ಅಭಿನಯಿಸುವದರ ಜೊತೆಗೆ ಹಾರ್ಮೋನಿಯಂ ನುಡಿಸುವುದನ್ನು ಕಲಿತರು. ಮುಂದೆ ಸ್ಥಳೀಯ ಕಂಪನಿ ನಿಂತು ಹೋದಾಗ ಇವರು ಅನಿವಾರ್ಯವಾಗಿ ಬೇರೆ ಕಂಪನಿಯನ್ನು ಅವಲಂಬಿಸಬೇಕಾಯಿತು. ಮುಧೋಳ ತಾಲೂಕಿನ ಇಂಗಳಗಿಯ ಪಾರಿಜಾತ ಕಂಪನಿಯಲ್ಲಿ ಪಾತ್ರ ಮಾಡುವುದನ್ನು ನಿಲ್ಲಿಸಿ, ಹಾರ್ಮೋನಿಯಂ ನುಡಿಸುವುದರಲ್ಲಿ ತೊಡಗಿದರು. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಬಬಲಾದಿಯ ಶ್ರೀಕೃಷ್ಣಪಾರಿಜಾತ ಕಂಪನಿಯವರು ನಿರ್ದೇಶಕರೆಂದು ಕರೆದುಕೊಂಡು ಹೋದರು. ನಂತರ ಇಂಡಿ ತಾಲೂಕಿನ ಹಳಗುಣರೆಯ ಪಾರಿಜಾತ ಕಂಪನಿಗೆ ಗುರುಗಳಾಗಿ

ಪಾರಿಜಾತ ಕಲಿಸಿದರು. ೧೯೬೦ರ ಸುಮಾರಿಗೆ ಪ್ರಸಿದ್ಧ ಪಾರಿಜಾತ ಕಲಾವಿದ ಅಪ್ಪಾಲಾಲ್ ನದಾಫ್‌ರ ಕಂಪನಿಯಲ್ಲಿ ಹಾರ್ಮೋನಿಯಂ ವಾದಕರಾಗಿ ಸುಮಾರು ವರ್ಷಗಳ ಕಾಲ ಸೇವೆಮಾಡಿದರು. ಈ ಕಂಪನಿಯಲ್ಲಿ ಹಲವಾರು ಹಿರಿಯ ಕಲಾವಿದರು ಬಿಟ್ಟು ಹೋದಾಗ ತಾವೇ ಮುಂದಾಗಿ ವಿಠಲರಾವ್ ಟಕ್ಕಳಕಿ, ಕೋಲ್ಹಾರ ಮುಪ್ಪಯ್ಯ, ಕೃಷ್ಣಾಜಿ ದೇಶಪಾಂಡೆ, ಬೈಲಹೊಂಗಲದ ಬಾಳಪ್ಪ, ಬೈಲಹೊಂಗಲ ಮಲ್ಲವ್ವರಂತ ಶ್ರೇಷ್ಠ ಕಲಾವಿದರನ್ನು ಒಂದೆಡೆ ಸೇರಿಸಿ, ಶ್ರೀರಾಮೇಶ್ವರ ಶ್ರೀಕೃಷ್ಣ ಪಾರಿಜಾತ ಸಂಘ ಕಟ್ಟಿ ನಾಡಿನ ತುಂಬೆಲ್ಲ ಹೆಸರು ಮಾಡಿದರು.

ಒಟ್ಟು ಆರು ದಶಕಗಳ ಕಲಾ ಜೀವನದಲ್ಲಿ ಏನು ಎಡರು ತೊಡರುಗಳು ಬಂದರು ಎದೆಗುಂದದೆ ಸಂಘಕಟ್ಟಿ ಕಲೆಗಾಗಿ ತಮ್ಮ ಜೀವನ ನಡೆಸಿದರು. ನಾಡಿನ ಶ್ರೇಷ್ಠ ಪಾರಿಜಾತ ಕಲಾವಿದರುಗಳಿಗೆ ಸಂಗೀತ ಸಾತ ನೀಡಿದ ರಾಮಣ್ಣಾ ಮಾಸ್ತರರು ತಮ್ಮದೆ ಆದ ವಿಶೇಷ ಗುಣಗಳಿಂದ ಕಲಾವಿದರ ಮನಸ್ಸು ಗೆದ್ದವರು. ದೂರದರ್ಶನ ಆಕಾಶವಾಣಿಗಳಲ್ಲಿ ಕಲಾವಿದರಾಗಿ ಸೇವೆಸಲ್ಲಿಸಿ ಹಲವಾರು ಧ್ವನಿಸುರಳಿಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಇವರ ಕಲಾಸೇವೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಪುರಸ್ಕರಿಸಿ ಪ್ರೋತ್ಸಾಹಿಸಿವೆ. ಹಲವಾರು ರಾಷ್ಟ್ರೀಯ ಉತ್ಸವಗಳಲ್ಲಿ ಭಾಗವಹಿಸಿ ಜನಮೆಚ್ಚುಗೆ ಗಳಸಿದ್ದಾರೆ.

**ಅಕಾಡೆಮಿ ಪ್ರಶಸ್ತಿ :** ಇವರ ಏಳು ದಶಕಗಳ ಕಲಾ ಸೇವೆಯನ್ನು ಪರಿಗಣಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಕೊಡಮಾಡುವ ಜಾನಪದ ಕಲಾವಿದ ಪ್ರಶಸ್ತಿಯನ್ನು ೧೯೯೫ರಲ್ಲಿ ನೀಡಿ ಸನ್ಮಾನಿಸಿದೆ.

**ರಾಮಣ್ಣ ವೆಂಕಪ್ಪ ಶಿರೋಳ,**
**ಸಾ : ಕುಂಚನೂರ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

# ರಾಚಯ್ಯ ಚನ್ನಯ್ಯ ಹಿರೇಮಠ

ಶ್ರೀಕೃಷ್ಣ ಪಾರಿಜಾತ ಸಂಗೀತ ತನ್ನದೇ ಆದ ವಿಶಿಷ್ಠ ಶೈಲಿಯಿಂದ ಪ್ರೇಕ್ಷಕರ ಹಾಗೂ ಕಲಾವಿದರ ಮನಸ್ಸು ಸೆರೆಹಿಡಿಯುವ ವಿಶಿಷ್ಠ ಸಂಗೀತ ಪ್ರಕಾರವಾಗಿದೆ. ಇಂತಹ ಪ್ರಸಿದ್ಧ ಸಂಗೀತವನ್ನು ಕರತಲಾಮಲಕ ಮಾಡಿಕೊಂಡವರು ರಾಚಯ್ಯ ಹಿರೇಮಠ.

ಜಮಖಂಡಿ ತಾಲೂಕಿನ ತೊದಲುಬಾಗಿಯ ಹಿರೇಮಠದ ವೇ. ಮೂ ಚನ್ನಯ್ಯ ಮತ್ತು ಮಹಾಂತಮ್ಮ ಎಂಬ ಶರಣದಂಪತಿಗಳ ಉದರದಲ್ಲಿ ೧೯೨೩ರಲ್ಲಿ ರಾಚಯ್ಯನವರು ಜನಿಸಿದರು. ಈ ಭಾಗದಲ್ಲಿ ಶ್ರೀಕೃಷ್ಣ ಪಾರಿಜಾತ, ಸಂಗ್ಯಾ ಬಾಳ್ಯ, ಭಜನೆ, ಮುಂಡಗಿ ಪದ ಹಲವಾರು ಕಲಾ ಪ್ರಕಾರಗಳು ಬಾಲಕನಾದ ರಾಚಯ್ಯನವರ ಮನಸ್ಸು ಸೂರೆಗೊಂಡವು. ಈ ಕಲೆ ಮತ್ತು ಕಲಾವಿದರ ಪ್ರೇರಣೆಯಿಂದ ಅತಿ ಚಿಕ್ಕ ವಯಸ್ಸಿನಲ್ಲಿ ಈ ಬಯಲಾಟಗಳ ಸಂಗೀತವನ್ನು ಕಲಿಯಬೇಕೆಂದು ಆಸೆಪಟ್ಟು ಶ್ರೀ ಸಿದ್ಧಲಿಂಗಯ್ಯ ಹಿರೇಮಠ ಇವರಲ್ಲಿ ಸಂಗೀತ ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿ ಸುಮಾರು ನಾಲ್ಕಾರು ವರ್ಷಗಳು ಗತಿಸಿದ ಮೇಲೆ ಬಾಡಗಿಯ ಶ್ರೀಕೃಷ್ಣಪಾರಿಜಾತ ಕಂಪನಿಯಲ್ಲಿ ಹಾರ್ಮೋನಿಯಂ ಮಾಸ್ತರರಾಗಿ ಸೇರಿಕೊಂಡು ಶ್ರೀಕೃಷ್ಣನ ನಾಮಸ್ಮರಣೆ ಮಾಡುತ್ತಾ ಕಲಾಜೀವನದಲ್ಲಿ ಪಾದಾರ್ಪಣೆ ಮಾಡಿದರು. ಅತ್ಯಲ್ಪ ದಿವಸಗಳಲ್ಲಿ ಇವರ ಹೆಸರು ಬೆಳೆಯತೊಡಗಿತು. ಅದರ ಹಿಂದೆ ಇವರ ಪ್ರಾಮಾಣಿಕ ಪ್ರಯತ್ನ ಬಹಳಷ್ಟಿದೆ. ಜಾನಪದ ಕಲೆ ಹಾಗೂ ಸಂಗೀತದ ಬಗ್ಗೆ ವಿಶೇಷವಾದ ಕಾಳಜಿ ಮತ್ತು ಪ್ರೀತಿಯನ್ನು ಇಟ್ಟುಕೊಂಡ ರಾಚಯ್ಯನವರು ಸುಮಾರು ೫೦ ಶ್ರೀಕೃಷ್ಣಪಾರಿಜಾತ ಕಂಪನಿ ತರಬೇತಿಗೊಳಿಸುವುದರ ಜೊತೆಗೆ ಹಲವಾರು ಯುವ ಕಲಾವಿದರಿಗೆ ಹಾರ್ಮೋನಿಯಂ, ತಬಲಾ ನುಡಿಸುವುದನ್ನು ಕಲಿಸುವುದರ ಜೊತೆಗೆ ಆ ಎಲ್ಲ ಕಲಾವಿದರ ಬಾಳಿಗೆ ಜ್ಯೋತಿಯಾಗುವುದಲ್ಲದೆ ಅಳಿವಿನಂಚಿನಲ್ಲಿರುವ ಈ ಜಾನಪದ ಕಲೆಗಳ ಉಳಿವಿಗಾಗಿ ಹಗಲಿರುಳು ದುಡಿಯುತ್ತಾ ಇನ್ನು ಪ್ರಾಯದ ಹುಡುಗರಂತೆ ಯುವ ಪ್ರತಿಭೆಗಳಿಗೆ

ಮಾರ್ಗದರ್ಶನ ಹಾಗೂ ಸಲಹೆ ಸೂಚನೆಗಳನ್ನು ನೀಡುತ್ತಾ ಕಲಾ ಪೋಷಕರಾಗಿದ್ದಾರೆ. ಜೀವನದ ಹಲವಾರು ತೊಂದರೆಗಳಿದ್ದರೂ ಅವುಗಳನ್ನೆಲ್ಲಾ ಬದಿಗಿಟ್ಟು ಒಂದೇಭಾವದಿಂದ ಕಲಾಜೀವ ನಡೆಸಿದ ಕೀರ್ತಿ ರಾಚಯ್ಯನವರದು.

ಶ್ರೀಕೃಷ್ಣಪಾರಿಜಾತದ ತಂಡ ಕಟ್ಟಿ ಈ ಕಂಪನಿಯ ಮೂಲಕ ಸುಮಾರು ೮೦೦೦ ಪ್ರಯೋಗಗಳನ್ನು ಮಾಡಿ ಜನಮೆಚ್ಚುಗೆ ಗಳಿಸಿದವರು. ೧೯೭೩ರಲ್ಲಿ ಶ್ರೀಮತಿ ಇಂದಿರಾಗಾಂಧಿ ಭಾರತದ ಮಾಜಿಪ್ರಧಾನ ಮಂತ್ರಿಗಳು ಹಾಗೂ ಆಗಿನ ರೈಲ್ವೆ ಮಂತ್ರಿಗಳಾಗಿದ್ದ ಶ್ರೀ ಟಿ. ಎ. ಪೈ ಅವರ ಮುಂದೆ ಪಾರಿಜಾತ ಪ್ರಯೋಗ ಮಾಡಿ ಅವರಿಂದ ಸನ್ಮಾನಗೊಂಡ ಶ್ರೇಯಸ್ಸು ರಾಚಯ್ಯನವರದು. ಸಾರವಾಡ ಹಾಗೂ ಜಮಖಂಡಿ ಭಾಗದ ಪ್ರಸಿದ್ಧ ಪಾರಿಜಾತ ಕಂಪನಿಗಳ ಸಂಗೀತ ನಿರ್ದೇಶಕರಾಗಿ ಸೇವೆ ಮಾಡಿದ ಅನುಭವ ಇವರದು. ನಾಡಿನ ಹೆಸರಾಂತ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳು, ಆಕಾಶವಾಣಿ, ದೂರದರ್ಶನಗಳಲ್ಲಿ ಹಲವಾರು ಸಲ ಇವರ ಪಾರಿಜಾತ ಪ್ರಸಾರವಾಗಿವೆ.

ಹಿಂದಿನ ಪ್ರಧಾನಿ ದಿ. ರಾಜೀವ್‌ಗಾಂಧಿ ಇವರ ನೇತೃತ್ವದಲ್ಲಿ ನಡೆದ ಅಖಿಲಭಾರತ ಜಾನಪದ ಕಲಾಮೇಳ ದೆಹಲಿಯಲ್ಲಿ ಭಾಗವಹಿಸಿ ಜನಮೆಚ್ಚುಗೆ ಗಳಸಿದ್ದಾರೆ. ಸುಮಾರು ದಿನಗಳವರೆಗೆ ಕಲಾಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಈ ಹಿರಿಯ ಕಲಾವಿದರಿಗೆ ನಾಡಿನ ಹೆಸರಾಂತ ಸಂಘ ಸಂಸ್ಥೆಗಳು, ಮಠಾಧೀಶರು ಪುರಸ್ಕರಿಸಿದ್ದಾರೆ. ಇವೆಲ್ಲ ಸನ್ಮಾನ ನಯವಾಗಿ ಸ್ವೀಕರಿಸಿದ ಶಾಂತ ಮೂರ್ತಿಗಳಾದ ರಾಚಯ್ಯನವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ೧೯೮೫ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದ್ದಾರೆ. ಇವೆಲ್ಲವುಗಲನ್ನು ಸಂತೋಷದಿಂದ ಸ್ವೀಕರಿಸಿ ತಮ್ಮ ಲಹರಿಯಲ್ಲಿ ಕಲಾಸೇವೆಯಲ್ಲಿ ತೊಡಗಿದ ಶ್ರೀಯುತರಿಗೆ ಇನ್ನೂ ಹೆಚ್ಚಿನ ಸ್ಥಾನಮಾನ ಗೌರವಗಳು ಸಿಗಬೇಕೆಂಬುದ ಅವರ ಶಿಷ್ಯ ಬಳಗದ ಆಸೆಯಾಗಿದೆ.

ರಾಚಯ್ಯ ಚನ್ನಯ್ಯ ಹಿರೇಮಠ
ಸಾ : ತೊದಲಬಾಗಿ,
ತಾ : ಜಮಖಂಡಿ, ಜಿ : ಬಾಗಲಕೋಟೆ.

## ಚಂಪಾಬಾಯಿ ಸುಳೆ

ಶ್ರೀಕೃಷ್ಣಪಾರಿಜಾತದ ಪ್ರಥಮ ರಂಗನಟಿ ಕೌಜಲಗಿ ನಿಂಗಮ್ಮ. ಸುಮಾರು ೧೫೦ ವರ್ಷಗಳ ಇತಿಹಾಸ ಹೊಂದಿದ ಶ್ರೀಕೃಷ್ಣಪಾರಿಜಾತ ರಂಗಕಲೆಗೆ ಹಲವಾರು ಜನ ಮಹಿಳಾ ಕಲಾವಿದರು ಸೇವೆಸಲ್ಲಿಸಿದ್ದು. ಅಂತಹ ಕೆಲವೇ ಕೆಲವು ಹಿರಿಯಕಲಾವಿದರಲ್ಲಿ ಜಮಖಂಡಿಯ ಚಂಪಾಬಾಯಿ ಸುಳೆ ಒಬ್ಬಳು.

ಮೂಲತಃ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ನನದಿ ಗ್ರಾಮದವರು ಬೆಳೆದದ್ದು ಮಾತ್ರ ಬಾಗಲಕೋಟೆ ಜಿಲ್ಲೆ ಜಮಖಂಡಿಯಲ್ಲಿ ಪ್ರಸಿದ್ಧ ಶ್ರೀಕೃಷ್ಣಪಾರಿಜಾತ ಕಲಾವಿದರೂ, ಹಿರಿಯರೂ ಆದ ಶ್ರೀ ಗುರುಪ್ಪ ಬಸೆಟ್ಟೆಪ್ಪ ಅನಂತಪೂರ ಸಾ : ಆಲಗೂರು ಇವರ ಮಾರ್ಗದರ್ಶನದಲ್ಲಿ ವಿದ್ಯೆಕಲಿತರು. ಸ್ವತಃ ಗುರಪ್ಪ ಅನಂತಪೂರ ಅವರು ಕಂಪನಿ ನಡೆಸುತ್ತಿದ್ದರು. ಅವರ ಕಂಪನಿಯಲ್ಲಿ ಸುಮಾರು ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿ ಮುಂದೆ ಹಿರಿಯ ಕಲಾವಿದರೂ ಶ್ರೀಕೃಷ್ಣಪಾರಿಜಾತಕ್ಕೆ ವಿಶೇಷ ಇಂಬು ನೀಡಿದ ಜಮಖಂಡಿ ಅಪ್ಪಾಲಾಲರ್ ಕಂಪನಿಯಲ್ಲಿ ವಿವಿಧ ಸ್ತ್ರೀಪಾತ್ರಗಳನ್ನು ನಿರ್ವಹಿಸಿ ಸಮರ್ಥ ನಟಿ ಎನಿಸಿಕೊಂಡರು. ಜಮಖಂಡಿ ಅಪ್ಪಾಲಾಲರ್ ಪಾರಿಜಾತ ಕಂಪನಿಯಲ್ಲಿ ಅಭಿನಯಿಸಿ ಕೀರ್ತಿಗಳಿಸುವುದು ಸಾಮಾನ್ಯವಾದ ಮಾತಲ್ಲ. ಹಲವಾರು ತೊಂದರೆಗಳು ಬಂದರೂ ಎದೆಗುಂದದೆ ಮುನ್ನುಗ್ಗಿ ಶ್ರೀಕೃಷ್ಣನ ನಾಮಸ್ಮರಣೆಯಲ್ಲಿ ಕಾಲ ಕಳೆದರು. ೧೯೭೩ರಲ್ಲಿ ನವದೆಹಲಿ ಹಾಗೂ ದೂರದರ್ಶನದಲ್ಲಿ ಇವರು ಶ್ರೀಕೃಷ್ಣ ಪಾರಿಜಾತ ಪ್ರಸಾರಗೊಂಡಿದೆ. ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಮುಂದೆ ಆಟ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿಕೊಂಡಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನಗಳ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಅಪ್ಪಾಲಾಲರ ಕಂಪನಿಯಲ್ಲಿ ಸುಮಾರು ೩೦ ವರ್ಷಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಗೋವಾ ರಾಜ್ಯಗಳಲ್ಲಿ ತಮ್ಮ ಕಲಾಪ್ರದರ್ಶನ ನೀಡಿದ್ದಾರೆ. ಅಷ್ಟೇ ಪಾರಿಜಾತದ ಕೀರ್ತಿಯನ್ನು ಬೆಳೆಸಿದ್ದಾರೆ.

ಶ್ರೀಕೃಷ್ಣಪಾರಿಜಾತದ ಹಲವಾರು ಧ್ವನಿ ಸುರಳಿಗಳು ಬಿಡುಗಡೆಗೊಂಡು ಪಾರಿಜಾತ ಪ್ರೇಮಿಗಳಿಗೆ ಅನುಕೂಲ ಮಾಡಿಕೊಟಿದ್ದಾರೆ. ಸಾವಿರಾರು ಪ್ರಯೋಗಗಳನ್ನು ಅಪ್ಪಾಲಾಲರ್ ಕಂಪನಿಯಲ್ಲಿ ಮಾಡಿದ ಚಂಪಾಬಾಯಿ ಅಪ್ಪಾಲಾಲರ ಕಂಪನಿ ಕುಂಠಿತಗೊಂಡಾಗ ಇವರಷ್ಟೆ ಹೆಸರು ಮಾಡಿದ ಹಿರಿಯ ಕಲಾವಿದರಾದ ವಿಠಲರಾವ್ ಟಿಕ್ಕಳಕಿ ಇವರ ಕಂಪನಿಯಲ್ಲಿ ರುಕ್ಮಿಣಿ, ಗೊಲ್ಲತಿ, ಪಾತ್ರಗಳನ್ನು ಮಾಡಲು ಪ್ರಾರಂಭಿಸದರು. ಶ್ರೀ ವಿಠಲರಾವ್ ಟಕ್ಕಳಕಿಯವರ ಕಂಪನಿಯಲ್ಲಿ ಹಲವಾರು ಹಿರಯ ಕಲಾವಿದರು ಉತ್ತಮ ತಂಡಕಟ್ಟಿದ್ದರು. ಅವರೊಂದಿಗೆ ಹೊಂದಿಕೊಂಡು ಸುಮಾರು ವರ್ಷಗಳ ಕಾಲ ಕಲಾಸೇವೆ ಮಾಡಿದರು.

ರಾಷ್ಟ್ರೀಯ ಉತ್ಸವಗಳಾದ, ಪಟ್ಟದಕಲ್ಲು, ನವರಸಪುರ ದಸರಾ ಉತ್ಸವ, ಕಿತ್ತೂರ ಉತ್ಸವ, ಜಾನಪದ ಸಮ್ಮೇಳದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಎಂಬತ್ತರ ವಯಸ್ಸಿನಲ್ಲಿರುವ ಚಂಪಾಬಾಯಿ ಮಾತುಗಳು ಮೃದು, ಅಷ್ಟೇ ಸತ್ಯವಾದ ಮಾತುಗಳನ್ನು ಹೇಳುತ್ತಾ, ತಮ್ಮ ಹಿಂದಿನ ದಿನಗಳನ್ನು ಮೆಲಕು ಹಾಕುತ್ತಾ ಕಾಲಕಳೆಯುತ್ತಿದ್ದಾಳೆ.

**ಪ್ರಶಸ್ತಿ** : ಇವರ ಅಭಿನಯವನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಪ್ರೋತ್ಸಾಹಿಸಿವೆ. ಪ್ರಥಮ ಶ್ರೀಕೃಷ್ಣ ಪಾರಿಜಾತ ಸಮ್ಮೇಳನದಲ್ಲಿ ಸನ್ಮಾನಿಸಿದ್ದಾರೆ. ಜಾನಪದ ಸಂಶೋಧನ ಕೇಂದ್ರ ಕಿತ್ತೂರು ಇವರಿಂದ ಪುರಸ್ಕೃತಗೊಂಡಿದ್ದಾರೆ. ಇಷ್ಟೆಲ್ಲಕ್ಕಿಂತ ಮಿಗಿಲಾಗಿ ೧೯೮೩ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಅಖಂಡವಾಗಿ ಏಳು ದಶಕಗಳವರೆಗೆ ಕಲಾ ಸೇವೆಯಲ್ಲಿ ನಿರತರಾಗಿ ಆ ನಲಿವು ನೋವುಗಳನ್ನು ಉಂಡು ಬೆಳೆದ ಶ್ರೇಷ್ಠ ಕಲಾವಿದೆ. ಚಂಪಾಬಾಯಿ ಸುಳೆಯವರು.


**ಚಂಪಾಬಾಯಿ ಸುಳೆ,**
**ಪಾರಿಜಾತ ಕಲಾವಿದರು,**
**ಕೆರೆಯ ಮೇಲ್ಗಡೆ, ಜಮಖಂಡಿ,**
**ಜಿ : ಬಾಗಲಕೋಟೆ.**

## ೭೩ ಕೃಷ್ಣಾಜಿ ದೇಶಪಾಂಡೆ

ರಂಗಕಲೆಗಳ ರಾಜ ಶ್ರೀಕೃಷ್ಣಪಾರಿಜಾತಕ್ಕೆ ಒಂದುವರೇ ಶತಮಾನಗಳ ಇತಿಹಾಸ. ಪಾರಿಜಾತದ ಯಶಸ್ಸು ಇರುವದು ಅದರ ದೇಶಿಮೂಲದ ಆಧ್ಯಾತ್ಮಿಕ ನಡೆಯಲ್ಲಿ ಕೃಷ್ಣ, ರುಕ್ಮಿಣಿ, ಸತ್ಯಭಾಮೆಯವರ ಗೃಹಕಲಹದ ಕತೆಯನ್ನು ಹೊಂದಿದ ಈ ಆಟ ತನ್ನ ಪಾರಮಾರ್ಥಿಕ ಪರಿಕಲ್ಪನೆಯಿಂದಾಗಿ ಆಟ ಮಂಗಳವಾಗುವವರೆಗೂ ನಡೆದ ಎಲ್ಲ ಸಾಮಾಜಿಕ ಮಾತುಗಳು ಅನುಭಾವದ ಅರ್ಥಕ್ಕೆ ರೂಪಾಂತರಗೊಳ್ಳುತ್ತವೆ. ಮನುಷ್ಯ ಮೂಲದಿಂದ ದೈವ ಸಾಕ್ಷಾತ್ಕಾರಕ್ಕೆ ರೂಪಾಂತರಗೊಳ್ಳುವ ವಿಸ್ಮಯವೇ ಇಲ್ಲಿ ಹಂಬಲವಾಗಿ, ಭಕ್ತಿಯಾಗಿ, ಸಂಗೀತವಾಗಿ ಕಲಾರಸಿಕರನ್ನು ಮಂತ್ರಮುಗ್ಧಗೊಳಿಸುತ್ತದೆ. ಇಂತಹ ವಿಶಿಷ್ಟ ಕಲೆಯನ್ನು ಕರಗತ ಮಾಡಿಕೊಂಡವರು ಕೃಷ್ಣಾಜಿ ಗೊ. ದೇಶಪಾಂಡೆಯವರು.

ಮುಧೋಳ ತಾಲೂಕಿನ ಗಂಡು ಮೆಟ್ಟಿನ ಲೋಕಾಪುರದ ಶ್ರೀಮಂತ ಮನೆತನ ಗೋವಿಂದರಾವ ಮತ್ತು ಇಂದಿರಾಬಾಯಿಯವರ ಸುಪುತ್ರರಾಗಿ ೫-೮-೧೯೩೨ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಮುಗಿಸಿಕೊಂಡು ಮಾಧ್ಯಮಿಕ ಶಿಕ್ಷಣ ಪಡೆಯುವುದಕ್ಕಾಗಿ ಬಾಗಲಕೋಟೆಗೆ ತೆರಳಿದರು. ಓದಿಕೊಂಡು ಹದಿಹರೆಯದ ವಯಸ್ಸಿನಲ್ಲಿ ಭಾರತ ಸೇನೆಯನ್ನು ಸೇರಿಕೊಂಡರು. ಬಹಳ ದಿನ ಸೇವೆ ಸಲ್ಲಿಸದೆ ಮರಳಿ ಸ್ವ ಗ್ರಾಮಕ್ಕೆ ಮರಳಿದರು. ಇವರು ಸೇನೆ ಬಿಟ್ಟು ಬರುವ ವೇಳೆಗೆ ಲೋಕಾಪೂರದಲ್ಲಿ ಒಂದು ಶ್ರೀಕೃಷ್ಣಪಾರಿಜಾತ ಕಂಪನಿ ಆರಂಭವಾಗಿತ್ತು. ಈ ತಂಡದ ನೇತೃತ್ವವನ್ನು ಸಗರೆಪ್ಪ ಯಾದವಾಡ ಹಾಗೂ ವೆಂಕಣ್ಣ ಹೂಗಾರ ವಹಿಸಿದ್ದರು. ಇವರು ಜ್ಞಾನೇಶ್ವರ ಮಠದಲ್ಲಿ ತಾಲಿಮು ಮಾಡುತ್ತಿದ್ದರು. ಈ ತಾಲಿಮು ನೋಡಲು ದಿನಾಲೂ ಕೃಷ್ಣಾಜಿಯವರು ಅಲ್ಲಿಗೆ ಬರ ತೊಡಗಿದರು. ಕನ್ನಡ ಮತ್ತು ಮರಾಠಿ ಎರಡು ಭಾಷೆಗಳನ್ನು ಚೆನ್ನಾಗಿ ಬಲ್ಲ ದೇಶಪಾಂಡೆಯವರು ಆ ಕಂಪನಿಯಲ್ಲಿ ಸಹಕಲಾವಿದರಾಗಿ ಸೇರಿಕೊಂಡರು.

ಮುಂದೆ ಶ್ರೀಕೃಷ್ಣಪಾರಿಜಾತವನ್ನು ವಿಶೇಷವಾಗಿ ಅಭ್ಯಸಿಸಿ ೧೯೫೬ರಲ್ಲಿ ಶ್ರೀಕೃಷ್ಣಪಾರಿಜಾತ ಸಂಘ ಕಟ್ಟಿದರು. ಕಂಪನಿಯ ಎಲ್ಲ ಕಲಾವಿದರಿಗೆ ಮನೆಯಲ್ಲಿಯೇ ಊಟ, ತಿಂಡಿ ನೀಡಿ ಹೊಸ ಕಲಾವಿದರನ್ನು ತರಬೇತಿಗೊಳಿಸಿ ರಂಗ ಪ್ರವೇಶಕ್ಕೆ ಸಜ್ಜಾದರು. ಪ್ರಪ್ರಥಮ ಕಲಾ ಪ್ರದರ್ಶನ ಬಾದಾಮಿ ತಾಲೂಕಿನ ಅಗಸನಕೊಪ್ಪದಲ್ಲಿ ಪ್ರದರ್ಶನಗೊಂಡಾಗ ಎಲ್ಲರ ಮೆಚ್ಚುಗೆ ಗಳಿಸಿ ಯಶಸ್ವಿ ಕಲಾವಿದರೆನಿಸಿಕೊಂಡರು. ಶ್ರೀಕೃಷ್ಣಪಾರಿಜಾತ ನಿತ್ಯ ನೂತನ ವಾಗಬೇಕಾದರೆ ಹಲವಾರು ಕಲಾವಿದರ ಜ್ಞಾನ ಸಂಪತ್ತು, ಅವರ ತ್ಯಾಗ ಬಹಳಷ್ಟು ಇದೆ ಅಂತ ಜ್ಞಾನವನ್ನು ಪಡೆಯಲು ಮಾಚಕನೂರಿನ ತುಕಾರಾಮ ಮಾಸ್ತರ ಮತ್ತು ಚಂದ್ರಯ್ಯ ಸ್ವಾಮಿಗಳ ಶಿಷ್ಯರಾಗಿ ನಿತ್ಯ ಹೊಸದನ್ನು ಹುಡುಕಾಡಲು ಅವರೊಂದಿಗೆ ಚರ್ಚೆ ಮಾಡುತ್ತಾ ತಿಳಿದುಕೊಂಡರು. ಸಂಸ್ಕೃತ ಪಂಡಿತರಾಗಿದ್ದ ಶ್ರೀ ರಾಮಾಚಾರ್ಯ ಗೋಠೆ, ಶ್ರೀ ಭೀ.ನಾ ಜೋಶಿಯವರ ಬಳಿ ಅಭ್ಯಾಸ ಮಾಡಿದರು. ಕೃಷ್ಣಾಜಿಯವರ ಸತತ ಪ್ರಯತ್ನದ ಫಲವಾಗಿ ಶ್ರೀಕೃಷ್ಣ ಪಾರಿಜಾತ ಭಾಗವತಕ್ಕೊಂದು ಹೊಸ ರೂಪು ತಂದು ಕೊಟ್ಟರು. ಶ್ರೀಕೃಷ್ಣ ಪಾರಿಜಾತದಲ್ಲಿ ಭಾಗವತ (ದೂತೆ) ಪಾತ್ರ ಬಹಳ ಪ್ರಮುಖವಾದುದು. ಅಂತಹ ಪ್ರಮುಖ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದ ಕೀರ್ತಿ ಕೃಷ್ಣಾಜಿಯವರದು. ಇವರ ನವೀನತೆಯ ಪಾರಿಜಾತವನ್ನು ನೋಡಿ ಹಲವಾರು ಕಲಾರಸಿಕರು ಇವರ ಹೆಸರನ್ನು ಭಾರತದ ತುಂಬೆಲ್ಲ ಪಸರಿಸಿದರು. ಪಾರಿಜಾತದ ಈ ಕಥಾನಕವನ್ನು ಸತತ ಮೂರು ದಿನಗಳವರೆಗೆ ಆಡುವಷ್ಟು ವಿಷಯ ಸಂಗ್ರಹಣೆ ಮಾಡಿಕೊಂಡ ಕೃಷ್ಣಾಜಿಯವರ ಹಿಂದಿನ ಶ್ರಮ ಬಹಳಷ್ಟಿದೆ.

**ದೇಶಪಾಂಡೆಯವರ ವಿಶೇಷತೆ :**

ಶ್ರೀಕೃಷ್ಣಪಾರಿಜಾತದಲ್ಲಿ ಬರುವ ಸ್ತ್ರೀ ಪಾತ್ರಗಳನ್ನು ಮೊದ ಮೊದಲು ಗಂಡು ಹುಡುಗರು ನಿರ್ವಹಿಸುತ್ತಿದ್ದರು ಇದನ್ನು ಮನಗಂಡು ಹಲವಾರು ಹಿಂದುಳಿದ ವರ್ಗದ ಅನಕ್ಷರಸ್ಥ ಮಹಿಳೆಯರನ್ನು ಗುರುತಿಸಿ ಅವರಿಂದ ಪಾರಿಜಾತದ ಪಾತ್ರಗಳ ಬಗ್ಗೆ ತರಬೇತಿ ಕೊಟ್ಟು ಅವರ ನಾಲಿಗೆಯಿಂದ ಪಾರಮಾರ್ಥಿಕ ವಿಷಯಗಳು ಬರುವಂತೆ ಮಾಡಿದರು. ಅವರಲ್ಲಿ ಪ್ರಮುಖರೆಂದರೆ ಸೂಳಿಕೇರಿ ಯಮನವ್ವ, ಲೋಕಾಪೂರ ಯಲ್ಲವ್ವ, ಮಲ್ಲಮ್ಮ ಮ್ಯಾಗೇರಿ, ಕಾಶಿಬಾಯಿ ದಾದನಟ್ಟಿಯಂತಹ ಹಿರಿಯ ಕಲಾವಿದರು ಇಂದು ಸ್ವಂತ ಪಾರಿಜಾತ ಕಂಪನಿ ಕಟ್ಟಿ ನಾಡಿನ ತುಂಬೆಲ್ಲ ಹೆಸರು ಮಾಡಿದ್ದಾರೆ ಮತ್ತು ಹಲವಾರು ಯುವ ಕಲಾವಿದರಿಗೆ ತರಬೇತಿಗೊಳಿಸಿ ಪಾರಿಜಾತಕ್ಕೆ ಹೊಸ ದಿಕ್ಕು ತೋರಿಸಿದ ಬಂಟ ಕೃಷ್ಣಾಜಿ ದೇಶಪಾಂಡೆ.

ದೇಶಪಾಂಡೆಯವರ ಕಂಪನಿಯಲ್ಲಿ ಕೇವಲ ಪುರುಷರು ಅಭಿನಯಿಸುತ್ತಿದ್ದ ಕೃಷ್ಣನ ಪಾತ್ರವನ್ನು ಯಮನವ್ವ ಸೂಳಿಕೇರಿ, ಯಲ್ಲವ್ವ ಲೋಕಾಪೂರ ಇವರಿಂದ ಮಾಡಿಸಿ, ತೋರಿಸಿ ತಾವೇ ಭಾಗವತರಾಗಿ ಪಾತ್ರ ನಿರ್ವಹಿಸಿ ಜನ ಮೆಚ್ಚುಗೆ ಗಳಿಸಿದರು. ತಮ್ಮ ಅಖಂಡ ಜೀವನವನ್ನು ಪಾರಿಜಾತದ ಹೊಸ ಹೊಸ ಆಯಾಮಗಳ ಬಗ್ಗೆ

ಚಿಂತಿಸುತ್ತಾ ಕಳೆದರು. ನಿತ್ಯವಿನೂತನದ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಿದ್ದರು. ತಮ್ಮ ತಂಡದಲ್ಲಿದ್ದ ಎಲ್ಲ ಕಲಾವಿದರನ್ನು ಸ್ವತಃ ಮನೆಯವರಂತೆ ನೋಡಿಕೊಳ್ಳುತ್ತಿದ್ದರು.

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿ ಸೇವೆ :**

ಜಾನಪದ ಕಲೆಗಳ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿದ ಇವರನ್ನು ಕರ್ನಾಟಕ ಸರ್ಕಾರ ಎರಡು ಅವಧಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರದ ಸದಸ್ಯರನ್ನಾಗಿ ನೇಮಕ ಮಾಡಿ ಕಲಾವಿದರ ಸೇವೆ ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ತಮ್ಮ ಅಧಿಕಾರಾವಧಿಯ ಆರು ವರ್ಷಗಳ ಕಾಲದಲ್ಲಿ ಉತ್ತರ ಕರ್ನಾಟಕದ ಕಲಾವಿದರ ಬಗ್ಗೆ ಒಳ್ಳೆಯ ಕೆಲಸಮಾಡಿ ಕಲಾವಿದರ ಪ್ರೀತಿಗೆ ಪಾತ್ರರಾಗಿದ್ದಾರೆ.

**ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ :**

ಸುಮಾರು ೪೦ ವರ್ಷಗಳ ಕಲಾಸೇವೆಯನ್ನು ಕಂಡು ನಾಡಿನ ಉದ್ದಗಲಕ್ಕೆ ಹಲವರು ಸತ್ಕರಿಸಿದ್ದಾರೆ. ೧೯೯೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರು ರಾಜ್ಯ ಪ್ರಶಸ್ತಿ ನೀಡಿ ಪುರಸ್ಕರಿಸಿದರೆ ಇವೆಲ್ಲಕ್ಕೆ ಕೀರಟವಿಟ್ಟಂತೆ ಕನ್ನಡ ನಾಡಿನ ಹಿರಿಯ ಪ್ರಶಸ್ತಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸತ್ಕರಿಸಿದ್ದಾರೆ. ಈ ಎಲ್ಲ ಪ್ರಶಸ್ತಿಗಳನ್ನು ಪಡೆದುಕೊಂಡ ದೇಶಪಾಂಡೆಯವರು ತಾವು ಇರುವವರೆಗೂ ಈ ಪಾರಿಜಾತದ ಬಗ್ಗೆ ಬಹಳಷ್ಟು ಪ್ರೀತಿ ಇಟ್ಟು ಕೊಂಡು ಬಾಳಿದರು.

**ಕೃಷ್ಣಾಜಿಯವರ ತಂಡದಲ್ಲಿ ಪಾತ್ರ ನಿರ್ವಹಿಸಿದವರು (ಕೊನೆಯ ತಂಡ) :**

ಕೃಷ್ಣಾಜಿಯವರ ಪಾರಿಜಾತ ತಂಡದಲ್ಲಿ ಹಲವಾರು ಜನ ಕಲಾವಿದರ ಸಂದರ್ಭಕ್ಕೆ ತಕ್ಕಂತೆ ಬಂದು ಹೋಗಿದ್ದಾರೆ. ಆದರೆ ದೇಶಪಾಂಡೆಯವರು ಕಂಪನಿಯನ್ನು ಮುರಿಯುವಾಗ ಇದ್ದ ಕಲಾವಿದರ ಮಾಹಿತಿ. ಯಲ್ಲವ್ವ ರೊಡ್ಡಪ್ಪನವರ, ಕಮಲವ್ವ ಖಜ್ಜಿಡೋಣಿ, ರೇಣುಕಾ ಕಲ್ಯಾಣಿ, ಶಂಕರಪ್ಪ ಬರಗಿ, ಸಿದ್ದಣ್ಣ ಕುರಿ ಹೊಳಬಸಯ್ಯಾ ಸಂಬಾಳದ, ವೀರಭದ್ರಯ್ಯ ಸಂಬಾಳದ ಮೊದಲಾದ ಕಲಾವಿದರು ತಮ್ಮ ತಮ್ಮ ಪಾತ್ರಗಳಲ್ಲಿ ಉತ್ತಮ ಅಭಿನಯ ಮಾಡಿ ಹೆಸರುಗಳಿಸಿದರು. ಕಲಾವಿದರ ಸಂತೋಷವೇ ನನ್ನ ಸಂತೋಷವೆಂದು ತಿಳಿದಿದ್ದ ದೇಶಪಾಂಡೆಯವರ ಕನಸು ನನಸಾಗಿದೆ.

**ಕೊನೆಯ ದಿನಗಳು :** ಕೃಷ್ಣಾಜಿ ದೇಶಪಾಂಡೆಯವರು ತಮ್ಮ ಜೀವನ ಉಸಿರು ಇರುವವರೆಗೂ ಪಾರಿಜಾತ ಕಲೆ ಬೆಳವಣಿಗೆಗಾಗಿ ಜೀವ ಸವೆಸಿದರು. ತಮ್ಮ ಇಳಿವಯಸ್ಸಿನಲ್ಲಿಯೂ ನಿತ್ಯ ಲೋಕಾಪುರದಿಂದ ತುಳಸಿಗಿರಿ ಎಂಬ ಹಳ್ಳಿಗೆ ದಿನಾಲೂ ಸಂಚರಿಸಿ ಬಾಲಕಲಾವಿದರಿಗೆ ತರಬೇತಿ ನೀಡಿ ಅವರನ್ನು ರಂಗದ ಮೇಲೆ ತಂದು ಖುಷಿಪಟ್ಟರು. ಈ ಖುಷಿಯನ್ನು ಬಹಳ ದಿನಗಳವರೆಗೆ ನೋಡುವ ಆಸೆ ಭಗವಂತನಿಗೆ

ಶ್ರೀಕೃಷ್ಣಪಾರಿಜಾತದ ಹಲವಾರು ಧ್ವನಿ ಸುರಳಿಗಳು ಬಿಡುಗಡೆಗೊಂಡು ಪಾರಿಜಾತ ಪ್ರೇಮಿಗಳಿಗೆ ಅನುಕೂಲ ಮಾಡಿಕೊಟಿದ್ದಾರೆ. ಸಾವಿರಾರು ಪ್ರಯೋಗಗಳನ್ನು ಅಪ್ಪಾಲಾಲರ್ ಕಂಪನಿಯಲ್ಲಿ ಮಾಡಿದ ಚಂಪಾಬಾಯಿ ಅಪ್ಪಾಲಾಲರ ಕಂಪನಿ ಕುಂಠಿತಗೊಂಡಾಗ ಇವರಷ್ಟೆ ಹೆಸರು ಮಾಡಿದ ಹಿರಿಯ ಕಲಾವಿದರಾದ ವಿಠಲರಾವ್ ಟಿಕ್ಕಳಕಿ ಇವರ ಕಂಪನಿಯಲ್ಲಿ ರುಕ್ಮಿಣಿ, ಗೊಲ್ಲತಿ, ಪಾತ್ರಗಳನ್ನು ಮಾಡಲು ಪ್ರಾರಂಭಿಸದರು. ಶ್ರೀ ವಿಠಲರಾವ್ ಟಕ್ಕಳಕಿಯವರ ಕಂಪನಿಯಲ್ಲಿ ಹಲವಾರು ಹಿರಯ ಕಲಾವಿದರು ಉತ್ತಮ ತಂಡಕಟ್ಟಿದ್ದರು. ಅವರೊಂದಿಗೆ ಹೊಂದಿಕೊಂಡು ಸುಮಾರು ವರ್ಷಗಳ ಕಾಲ ಕಲಾಸೇವೆ ಮಾಡಿದರು.

ರಾಷ್ಟ್ರೀಯ ಉತ್ಸವಗಳಾದ, ಪಟ್ಟದಕಲ್ಲು, ನವರಸಪುರ ದಸರಾ ಉತ್ಸವ, ಕಿತ್ತೂರ ಉತ್ಸವ, ಜಾನಪದ ಸಮ್ಮೇಳದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಎಂಬತ್ತರ ವಯಸ್ಸಿನಲ್ಲಿರುವ ಚಂಪಾಬಾಯಿ ಮಾತುಗಳು ಮೃದು, ಅಷ್ಟೇ ಸತ್ಯವಾದ ಮಾತುಗಳನ್ನು ಹೇಳುತ್ತಾ, ತಮ್ಮ ಹಿಂದಿನ ದಿನಗಳನ್ನು ಮೆಲಕು ಹಾಕುತ್ತಾ ಕಾಲಕಳೆಯುತ್ತಿದ್ದಾಳೆ.

**ಪ್ರಶಸ್ತಿ** : ಇವರ ಅಭಿನಯವನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಪ್ರೋತ್ಸಾಹಿಸಿವೆ. ಪ್ರಥಮ ಶ್ರೀಕೃಷ್ಣ ಪಾರಿಜಾತ ಸಮ್ಮೇಳನದಲ್ಲಿ ಸನ್ಮಾನಿಸಿದ್ದಾರೆ. ಜಾನಪದ ಸಂಶೋಧನ ಕೇಂದ್ರ ಕಿತ್ತೂರು ಇವರಿಂದ ಪುರಸ್ಕೃತಗೊಂಡಿದ್ದಾರೆ. ಇಷ್ಟೆಲ್ಲಕ್ಕಿಂತ ಮಿಗಿಲಾಗಿ ೧೯೮೩ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಅಖಂಡವಾಗಿ ಏಳು ದಶಕಗಳವರೆಗೆ ಕಲಾ ಸೇವೆಯಲ್ಲಿ ನಿರತರಾಗಿ ಆ ನಲಿವು ನೋವುಗಳನ್ನು ಉಂಡು ಬೆಳೆದ ಶ್ರೇಷ್ಠ ಕಲಾವಿದೆ. ಚಂಪಾಬಾಯಿ ಸುಳೆಯವರು.

**ಚಂಪಾಬಾಯಿ ಸುಳೆ,**<br>
**ಪಾರಿಜಾತ ಕಲಾವಿದರು,**<br>
**ಕೆರೆಯ ಮೇಲ್ಗಡೆ, ಜಮಖಂಡಿ,**<br>
**ಜಿ : ಬಾಗಲಕೋಟೆ.**

## ೭೮॥ ಕೃಷ್ಣಾಜಿ ದೇಶಪಾಂಡೆ

ರಂಗಕಲೆಗಳ ರಾಜ ಶ್ರೀಕೃಷ್ಣಪಾರಿಜಾತಕ್ಕೆ ಒಂದುವರೇ ಶತಮಾನಗಳ ಇತಿಹಾಸ. ಪಾರಿಜಾತದ ಯಶಸ್ಸು ಇರುವದು ಅದರ ದೇಶಿಮೂಲದ ಆಧ್ಯಾತ್ಮಿಕ ನಡೆಯಲ್ಲಿ ಕೃಷ್ಣ, ರುಕ್ಮಿಣಿ, ಸತ್ಯಭಾಮೆಯವರ ಗೃಹಕಲಹದ ಕತೆಯನ್ನು ಹೊಂದಿದ ಈ ಆಟ ತನ್ನ ಪಾರಮಾರ್ಥಿಕ ಪರಿಕಲ್ಪನೆಯಿಂದಾಗಿ ಆಟ ಮಂಗಳವಾಗುವವರೆಗೂ ನಡೆದ ಎಲ್ಲ ಸಾಮಾಜಿಕ ಮಾತುಗಳು ಅನುಭಾವದ ಅರ್ಥಕ್ಕೆ ರೂಪಾಂತರಗೊಳ್ಳುತ್ತವೆ. ಮನುಷ್ಯ ಮೂಲದಿಂದ ದೈವ ಸಾಕ್ಷಾತ್ಕಾರಕ್ಕೆ ರೂಪಾಂತರಗೊಳ್ಳುವ ವಿಸ್ಮಯವೇ ಇಲ್ಲಿ ಹಂಬಲವಾಗಿ, ಭಕ್ತಿಯಾಗಿ, ಸಂಗೀತವಾಗಿ ಕಲಾರಸಿಕರನ್ನು ಮಂತ್ರಮುಗ್ಧಗೊಳಿಸುತ್ತದೆ. ಇಂತಹ ವಿಶಿಷ್ಟ ಕಲೆಯನ್ನು ಕರಗತ ಮಾಡಿಕೊಂಡವರು ಕೃಷ್ಣಾಜಿ ಗೊ. ದೇಶಪಾಂಡೆಯವರು.

ಮುಧೋಳ ತಾಲೂಕಿನ ಗಂಡು ಮೆಟ್ಟಿನ ಲೋಕಾಪುರದ ಶ್ರೀಮಂತ ಮನೆತನ ಗೋವಿಂದರಾವ ಮತ್ತು ಇಂದಿರಾಬಾಯಿಯವರ ಸುಪುತ್ರರಾಗಿ ೫-೮-೧೯೩೨ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಮುಗಿಸಿಕೊಂಡು ಮಾಧ್ಯಮಿಕ ಶಿಕ್ಷಣ ಪಡೆಯುವುದಕ್ಕಾಗಿ ಬಾಗಲಕೋಟೆಗೆ ತೆರಳಿದರು. ಓದಿಕೊಂಡು ಹದಿಹರೆಯದ ವಯಸ್ಸಿನಲ್ಲಿ ಭಾರತ ಸೇನೆಯನ್ನು ಸೇರಿಕೊಂಡರು. ಬಹಳ ದಿನ ಸೇವೆ ಸಲ್ಲಿಸದೆ ಮರಳಿ ಸ್ವ ಗ್ರಾಮಕ್ಕೆ ಮರಳಿದರು. ಇವರು ಸೇನೆ ಬಿಟ್ಟು ಬರುವ ವೇಳೆಗೆ ಲೋಕಾಪೂರದಲ್ಲಿ ಒಂದು ಶ್ರೀಕೃಷ್ಣಪಾರಿಜಾತ ಕಂಪನಿ ಆರಂಭವಾಗಿತ್ತು. ಈ ತಂಡದ ನೇತೃತ್ವವನ್ನು ಸಗರೆಪ್ಪ ಯಾದವಾಡ ಹಾಗೂ ವೆಂಕಣ್ಣ ಹೂಗಾರ ವಹಿಸಿದ್ದರು. ಇವರು ಜ್ಞಾನೇಶ್ವರ ಮಠದಲ್ಲಿ ತಾಲಿಮು ಮಾಡುತ್ತಿದ್ದರು. ಈ ತಾಲಿಮು ನೋಡಲು ದಿನಾಲೂ ಕೃಷ್ಣಾಜಿಯವರು ಅಲ್ಲಿಗೆ ಬರ ತೊಡಗಿದರು. ಕನ್ನಡ ಮತ್ತು ಮರಾಠಿ ಎರಡು ಭಾಷೆಗಳನ್ನು ಚೆನ್ನಾಗಿ ಬಲ್ಲ ದೇಶಪಾಂಡೆಯವರು ಆ ಕಂಪನಿಯಲ್ಲಿ ಸಹಕಲಾವಿದರಾಗಿ ಸೇರಿಕೊಂಡರು.

ಮುಂದೆ ಶ್ರೀಕೃಷ್ಣಪಾರಿಜಾತವನ್ನು ವಿಶೇಷವಾಗಿ ಅಭ್ಯಸಿಸಿ ೧೯೫೬ರಲ್ಲಿ ಶ್ರೀಕೃಷ್ಣಪಾರಿಜಾತ ಸಂಘ ಕಟ್ಟಿದರು. ಕಂಪನಿಯ ಎಲ್ಲ ಕಲಾವಿದರಿಗೆ ಮನೆಯಲ್ಲಿಯೇ ಊಟ, ತಿಂಡಿ ನೀಡಿ ಹೊಸ ಕಲಾವಿದರನ್ನು ತರಬೇತಿಗೊಳಿಸಿ ರಂಗ ಪ್ರವೇಶಕ್ಕೆ ಸಜ್ಜಾದರು. ಪ್ರಪ್ರಥಮ ಕಲಾ ಪ್ರದರ್ಶನ ಬಾದಾಮಿ ತಾಲೂಕಿನ ಅಗಸನಕೊಪ್ಪದಲ್ಲಿ ಪ್ರದರ್ಶನಗೊಂಡಾಗ ಎಲ್ಲರ ಮೆಚ್ಚುಗೆ ಗಳಿಸಿ ಯಶಸ್ವಿ ಕಲಾವಿದರೆನಿಸಿಕೊಂಡರು. ಶ್ರೀಕೃಷ್ಣಪಾರಿಜಾತ ನಿತ್ಯ ನೂತನ ವಾಗಬೇಕಾದರೆ ಹಲವಾರು ಕಲಾವಿದರ ಜ್ಞಾನ ಸಂಪತ್ತು, ಅವರ ತ್ಯಾಗ ಬಹಳಷ್ಟು ಇದೆ ಅಂತ ಜ್ಞಾನವನ್ನು ಪಡೆಯಲು ಮಾಚಕನೂರಿನ ತುಕಾರಾಮ ಮಾಸ್ತರ ಮತ್ತು ಚಂದ್ರಯ್ಯ ಸ್ವಾಮಿಗಳ ಶಿಷ್ಯರಾಗಿ ನಿತ್ಯ ಹೊಸದನ್ನು ಹುಡುಕಾಡಲು ಅವರೊಂದಿಗೆ ಚರ್ಚೆ ಮಾಡುತ್ತಾ ತಿಳಿದುಕೊಂಡರು. ಸಂಸ್ಕೃತ ಪಂಡಿತರಾಗಿದ್ದ ಶ್ರೀ ರಾಮಾಚಾರ್ಯ ಗೋಠೆ, ಶ್ರೀ ಭೀ.ನಾ ಜೋಶಿಯವರ ಬಳಿ ಅಭ್ಯಾಸ ಮಾಡಿದರು. ಕೃಷ್ಣಾಜಿಯವರ ಸತತ ಪ್ರಯತ್ನದ ಫಲವಾಗಿ ಶ್ರೀಕೃಷ್ಣ ಪಾರಿಜಾತ ಭಾಗವತಕ್ಕೊಂದು ಹೊಸ ರೂಪು ತಂದು ಕೊಟ್ಟರು. ಶ್ರೀಕೃಷ್ಣ ಪಾರಿಜಾತದಲ್ಲಿ ಭಾಗವತ (ದೂತೆ) ಪಾತ್ರ ಬಹಳ ಪ್ರಮುಖವಾದುದು. ಅಂತಹ ಪ್ರಮುಖ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದ ಕೀರ್ತಿ ಕೃಷ್ಣಾಜಿಯವರದು. ಇವರ ನವೀನತೆಯ ಪಾರಿಜಾತವನ್ನು ನೋಡಿ ಹಲವಾರು ಕಲಾರಸಿಕರು ಇವರ ಹೆಸರನ್ನು ಭಾರತದ ತುಂಬೆಲ್ಲ ಪಸರಿಸಿದರು. ಪಾರಿಜಾತದ ಈ ಕಥಾನಕವನ್ನು ಸತತ ಮೂರು ದಿನಗಳವರೆಗೆ ಆಡುವಷ್ಟು ವಿಷಯ ಸಂಗ್ರಹಣೆ ಮಾಡಿಕೊಂಡ ಕೃಷ್ಣಾಜಿಯವರ ಹಿಂದಿನ ಶ್ರಮ ಬಹಳಷ್ಟಿದೆ.

**ದೇಶಪಾಂಡೆಯವರ ವಿಶೇಷತೆ :**

ಶ್ರೀಕೃಷ್ಣಪಾರಿಜಾತದಲ್ಲಿ ಬರುವ ಸ್ತ್ರೀ ಪಾತ್ರಗಳನ್ನು ಮೊದ ಮೊದಲು ಗಂಡು ಹುಡುಗರು ನಿರ್ವಹಿಸುತ್ತಿದ್ದರು ಇದನ್ನು ಮನಗಂಡು ಹಲವಾರು ಹಿಂದುಳಿದ ವರ್ಗದ ಅನಕ್ಷರಸ್ಥ ಮಹಿಳೆಯರನ್ನು ಗುರುತಿಸಿ ಅವರಿಂದ ಪಾರಿಜಾತದ ಪಾತ್ರಗಳ ಬಗ್ಗೆ ತರಬೇತಿ ಕೊಟ್ಟು ಅವರ ನಾಲಿಗೆಯಿಂದ ಪಾರಮಾರ್ಥಿಕ ವಿಷಯಗಳು ಬರುವಂತೆ ಮಾಡಿದರು. ಅವರಲ್ಲಿ ಪ್ರಮುಖರೆಂದರೆ ಸೂಳಿಕೇರಿ ಯಮನವ್ವ, ಲೋಕಾಪೂರ ಯಲ್ಲವ್ವ, ಮಲ್ಲಮ್ಮ ಮ್ಯಾಗೇರಿ, ಕಾಶಿಬಾಯಿ ದಾದನಟ್ಟಿಯಂತಹ ಹಿರಿಯ ಕಲಾವಿದರು ಇಂದು ಸ್ವಂತ ಪಾರಿಜಾತ ಕಂಪನಿ ಕಟ್ಟಿ ನಾಡಿನ ತುಂಬೆಲ್ಲ ಹೆಸರು ಮಾಡಿದ್ದಾರೆ ಮತ್ತು ಹಲವಾರು ಯುವ ಕಲಾವಿದರಿಗೆ ತರಬೇತಿಗೊಳಿಸಿ ಪಾರಿಜಾತಕ್ಕೆ ಹೊಸ ದಿಕ್ಕು ತೋರಿಸಿದ ಬಂಟ ಕೃಷ್ಣಾಜಿ ದೇಶಪಾಂಡೆ.

ದೇಶಪಾಂಡೆಯವರ ಕಂಪನಿಯಲ್ಲಿ ಕೇವಲ ಪುರುಷರು ಅಭಿನಯಿಸುತ್ತಿದ್ದ ಕೃಷ್ಣನ ಪಾತ್ರವನ್ನು ಯಮನವ್ವ ಸೂಳಿಕೇರಿ, ಯಲ್ಲವ್ವ ಲೋಕಾಪೂರ ಇವರಿಂದ ಮಾಡಿಸಿ, ತೋರಿಸಿ ತಾವೇ ಭಾಗವತರಾಗಿ ಪಾತ್ರ ನಿರ್ವಹಿಸಿ ಜನ ಮೆಚ್ಚುಗೆ ಗಳಿಸಿದರು. ತಮ್ಮ ಅಖಂಡ ಜೀವನವನ್ನು ಪಾರಿಜಾತದ ಹೊಸ ಹೊಸ ಆಯಾಮಗಳ ಬಗ್ಗೆ

ಚಿಂತಿಸುತ್ತಾ ಕಳೆದರು. ನಿತ್ಯವಿನೂತನದ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಿದ್ದರು. ತಮ್ಮ ತಂಡದಲ್ಲಿದ್ದ ಎಲ್ಲ ಕಲಾವಿದರನ್ನು ಸ್ವತಃ ಮನೆಯವರಂತೆ ನೋಡಿಕೊಳ್ಳುತ್ತಿದ್ದರು.

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿ ಸೇವೆ :**

ಜಾನಪದ ಕಲೆಗಳ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿದ ಇವರನ್ನು ಕರ್ನಾಟಕ ಸರ್ಕಾರ ಎರಡು ಅವಧಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರದ ಸದಸ್ಯರನ್ನಾಗಿ ನೇಮಕ ಮಾಡಿ ಕಲಾವಿದರ ಸೇವೆ ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ತಮ್ಮ ಅಧಿಕಾರಾವಧಿಯ ಆರು ವರ್ಷಗಳ ಕಾಲದಲ್ಲಿ ಉತ್ತರ ಕರ್ನಾಟಕದ ಕಲಾವಿದರ ಬಗ್ಗೆ ಒಳ್ಳೆಯ ಕೆಲಸಮಾಡಿ ಕಲಾವಿದರ ಪ್ರೀತಿಗೆ ಪಾತ್ರರಾಗಿದ್ದಾರೆ.

**ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ :**

ಸುಮಾರು ೪೦ ವರ್ಷಗಳ ಕಲಾಸೇವೆಯನ್ನು ಕಂಡು ನಾಡಿನ ಉದ್ದಗಲಕ್ಕು ಹಲವರು ಸತ್ಕರಿಸಿದ್ದಾರೆ. ೧೯೯೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರು ರಾಜ್ಯ ಪ್ರಶಸ್ತಿ ನೀಡಿ ಪುರಸ್ಕರಿಸಿದರೆ ಇವೆಲ್ಲಕ್ಕೆ ಕೀರಟವಿಟ್ಟಂತೆ ಕನ್ನಡ ನಾಡಿನ ಹಿರಿಯ ಪ್ರಶಸ್ತಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸತ್ಕರಿಸಿದ್ದಾರೆ. ಈ ಎಲ್ಲ ಪ್ರಶಸ್ತಿಗಳನ್ನು ಪಡೆದುಕೊಂಡ ದೇಶಪಾಂಡೆಯವರು ತಾವು ಇರುವವರೆಗೂ ಈ ಪಾರಿಜಾತದ ಬಗ್ಗೆ ಬಹಳಷ್ಟು ಪ್ರೀತಿ ಇಟ್ಟು ಕೊಂಡು ಬಾಳಿದರು.

**ಕೃಷ್ಣಾಜಿಯವರ ತಂಡದಲ್ಲಿ ಪಾತ್ರ ನಿರ್ವಹಿಸಿದವರು (ಕೊನೆಯ ತಂಡ) :**

ಕೃಷ್ಣಾಜಿಯವರ ಪಾರಿಜಾತ ತಂಡದಲ್ಲಿ ಹಲವಾರು ಜನ ಕಲಾವಿದರ ಸಂದರ್ಭಕ್ಕೆ ತಕ್ಕಂತೆ ಬಂದು ಹೋಗಿದ್ದಾರೆ. ಆದರೆ ದೇಶಪಾಂಡೆಯವರು ಕಂಪನಿಯನ್ನು ಮುರಿಯುವಾಗ ಇದ್ದ ಕಲಾವಿದರ ಮಾಹಿತಿ. ಯಲ್ಲವ್ವ ರೊಡ್ಡಪ್ಪನವರ, ಕಮಲವ್ವ ಖಜ್ಜಿಡೋಣಿ, ರೇಣುಕಾ ಕಲ್ಯಾಣಿ, ಶಂಕರಪ್ಪ ಬರಗಿ, ಸಿದ್ದಣ್ಣ ಕುರಿ ಹೊಳಬಸಯ್ಯಾ ಸಂಬಾಳದ, ವೀರಭದ್ರಯ್ಯ ಸಂಬಾಳದ ಮೊದಲಾದ ಕಲಾವಿದರು ತಮ್ಮ ತಮ್ಮ ಪಾತ್ರಗಳಲ್ಲಿ ಉತ್ತಮ ಅಭಿನಯ ಮಾಡಿ ಹೆಸರುಗಳಿಸಿದರು. ಕಲಾವಿದರ ಸಂತೋಷವೇ ನನ್ನ ಸಂತೋಷವೆಂದು ತಿಳಿದಿದ್ದ ದೇಶಪಾಂಡೆಯವರ ಕನಸು ನನಸಾಗಿದೆ.

**ಕೊನೆಯ ದಿನಗಳು :** ಕೃಷ್ಣಾಜಿ ದೇಶಪಾಂಡೆಯವರು ತಮ್ಮ ಜೀವನ ಉಸಿರು ಇರುವವರೆಗೂ ಪಾರಿಜಾತ ಕಲೆ ಬೆಳವಣಿಗೆಗಾಗಿ ಜೀವ ಸವೆಸಿದರು. ತಮ್ಮ ಇಳಿವಯಸ್ಸಿನಲ್ಲಿಯೂ ನಿತ್ಯ ಲೋಕಾಪುರದಿಂದ ತುಳಸಿಗಿರಿ ಎಂಬ ಹಳ್ಳಿಗೆ ದಿನಾಲೂ ಸಂಚರಿಸಿ ಬಾಲಕಲಾವಿದರಿಗೆ ತರಬೇತಿ ನೀಡಿ ಅವರನ್ನು ರಂಗದ ಮೇಲೆ ತಂದು ಖುಷಿಪಟ್ಟರು. ಈ ಖುಷಿಯನ್ನು ಬಹಳ ದಿನಗಳವರೆಗೆ ನೋಡುವ ಆಸೆ ಭಗವಂತನಿಗೆ

ಸರಿಬರಲಿಲ್ಲವೆಂದು ಕಾಣುತ್ತದೆ. ಕೆಲವೇ ಕೆಲವು ದಿನಗಳಲ್ಲಿ ದಿನಾಂಕ ೧೪-೩-೧೯೯೭ರಂದು ಮಧ್ಯಾಹ್ನ ೧೨-೧೦ ಗಂಟೆಗೆ ಇಹಲೋಕಯಾತ್ರೆ ಮುಗಿಸಿದರು. ಕೃಷ್ಣಾಜಿಯವರು ನಮ್ಮ ಮುಂದೆ ಇಲ್ಲ ಆದರೆ ಅವರ ಸಾಧನೆಗಳು ಅವರನ್ನು ನೆನಪಿಸುತ್ತಿವೆ.

ಕೃಷ್ಣಾಜಿ ಗೋ. ದೇಶಪಾಂಡೆ,
ಸಾ : ಲೋಕಾಪೂರ,
ತಾ : ಮುಧೋಳ, ಜಿ : ಬಾಗಲಕೋಟೆ.

## ಸತ್ಯಪ್ಪ ಚಿಗರಿ

ಜಮಖಂಡಿ ಪಟ್ಟಣ ಪಲವಾರು ಕಲಾವಿದರ ಆಶ್ರಯತಾಣ. ಪಟ್ಟಣದ ಹೆಸರನ್ನು ಉತ್ತುಂಗ ಶಿಖರಕ್ಕೆರಿಸಿದವರು ಇಲ್ಲಿಯ ಹಲವಾರು ಸಮಾಜ ಸೇವಕರು, ಸಾಹಿತಿಗಳು, ಕ್ರೀಡಾಪಟುಗಳು ಕಲಾವಿದರು. ಅಂತಹ ಕೆಲವೇ ಕೆಲವು ಹೆಸರುಗಳಲ್ಲಿ ಎದ್ದು ಕಾಣುವ ಹೆಸರು ಸತುಪ್ಪ ಚಿಗರಿಯವರದು.

ತಂದೆ ಅದೃಶ್ಯಪ್ಪ, ತಾಯಿ ತಂಗೆವ್ವ ಎಂಬ ದಂಪತಿಗಳ ಗರ್ಭದಲ್ಲಿ ೧೯೩೯ರಲ್ಲಿ ಸತ್ಯಪ್ಪನವರ ಜನನವಾಯಿತು. ಸಂಗೀತದ ಬಗ್ಗೆ ಅಪಾರವಾದಂತ ಕಾಳಜಿ ಹೊಂದಿ ಇವರು ಗುರುಮೂರ್ತಿ ಕೊಡ್ಲಿ ಸಾ : ಜಮಖಂಡಿ ಇವರನ್ನು ಗುರುಗಳನ್ನಾಗಿ ಮಾಡಿಕೊಂಡು ಹಾರ್ಮೋನಿಯಂ ನುಡಿಸುವದರಲ್ಲಿ ಶ್ರೇಷ್ಠ ಕಲಾವಿದರಾದರು. ಸಂಗೀತದ ಎಲ್ಲ ರಾಗವನ್ನು ಪರಿಪೂರ್ಣವಾಗಿ ಅಭ್ಯಸಿಸಿ ಇತರರಿಗೆ ಮಾದರಿಯಾದರು. ಎಂತಹ ಹಾಡುಗಾರರು ಇದ್ದರು ಅವರೊಂದಿಗೆ ಹೊಂದಾಣಿಕೆಯಿಂದ ಸಾತ್ ನೀಡುವ ಕಲೆಯನ್ನು ಇವರು ಹೊಂದಿದ್ದಾರೆ. ಈ ಭಾಗದ ಶ್ರೇಷ್ಠ ಪಾರಿಜಾತ ಕಲಾವಿದರಾದ ವಿಠಲರಾವ್ ಟಕ್ಕಳಕಿ, ಚಂಪಾಬಾಯಿ ಸುಳೆ, ಕಾಶಿಬಾಯಿ ದಾದನಟ್ಟಿ, ಅಪ್ಪಾಲಾಲ್ ನದಾಫ್‌ರಂತಹ ಕಲಾವಿದರುಗಳಿಗೆ ಸಾತ್ ನೀಡಿ ಆ ಕಂಪನಿಯ ಕೀರ್ತಿ ದಶದಿಕ್ಕುಗಳಲ್ಲಿ ಹರಡುವಂತೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇಂತಹ ಪ್ರಬುದ್ಧ ಹಾರ್ಮೋನಿಯಂ ವಾದಕನಿಗೆ ಅವರ ಅನುಪಮ ಸೇವೆಯನ್ನು ನೋಡಿ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿ ಮತ್ತಷ್ಟು ಕೆಲಸ ಮಾಡಲು ಹುರುಪು ನೀಡಿವೆ.

ಉತ್ತರ ಕರ್ನಾಟಕದ ಸಣ್ಣಾಟ, ದೊಡ್ಡಾಟ, ಶ್ರೀಕೃಷ್ಣಪಾರಿಜಾತ, ಹೇಮರಡ್ಡಿ ಮಲ್ಲಮ್ಮ ಮುಂತಾದ ಎಲ್ಲಾ ಕಲೆಗಳಿಗೆ ಹಾರ್ಮೋನಿಯಂ ನುಡಿಸುವುದನ್ನು ರೂಢಿಸಿಕೊಂಡ ಇವರು ಎಲ್ಲರೊಂದಿಗೆ ಬೆರೆಯುವ ಗುಣವನ್ನು ಹೊಂದಿದ್ದಾರೆ.

ನಾಡಿನ ದಿಗ್ಗಜರಾದ ರಾಜಗುರು, ಡಿ. ಕುಮಾರದಾಸ್, ಬಾಲಚಂದ್ರ ನಾಕೋಡ, ಪಾಡೇಗಾರ ಶ್ರೀಪತಿಯವರೊಂದಿಗೆ ಸಾತ ನೀಡಿ ನೆರೆದ ಪ್ರೇಕ್ಷಕರ ಪ್ರೀತಿಗೆ ಪಾತ್ರರಾಗಿದ್ದಾರೆ.

ಇವರ ನಿರ್ದೇಶನದಲ್ಲಿ ಹಲವಾರು ಭಜನಾಮಂಡಳಿಗೆ ಮಾರ್ಗದರ್ಶನ ನೀಡಿದ್ದಾರೆ. ನಾಡಿನ ಉದ್ದಗಲಕ್ಕೂ ಸಂಗೀತ ಕ್ಷೇತ್ರದಲ್ಲಿ ಹೆಸರು ಸತ್ಯಪ್ಪ ಚಿಗರಿ ಇವರದು. ದೂರದರ್ಶನ ಹಾಗೂ ಆಕಾಶವಾಣಿ ಕಲಾವಿದರಾಗಿಯೂ ಸೇವೆಸಲ್ಲಿಸಿದ್ದಲ್ಲದೆ ಹಲವಾರು ಧ್ವನಿಸುರುಳಿಗಳಿಗೆ ಸಂಗೀತ ನಿರ್ದೇಶಕರಾಗಿ ಸೇವೆ ಮಾಡಿದ್ದಾರೆ. ತಾವು ಬೆಳೆಯುವದರ ಜೊತೆಗೆ ಈ ಕಲಾ ಪ್ರಪಂಚ ಇನ್ನಷ್ಟು ಬೆಳೆಯಬೇಕೆಂಬ ಮಹದಾಸೆಯಿಂದ ಹಲವಾರು ಯುವಕರಿಗೆ ಈ ಕಲೆಯನ್ನು ಕಲಿಸಿದ್ದಾರೆ. ದೆಹಲಿ, ಬಾಂಬೆಗಳಲ್ಲಿ ಶ್ರೀ ನಾರಾಯಣ ಗೊಡಬೊಲೆ, ಜಮಖಂಡಿ ಇವರೊಂದಿಗೆ ಕಲಾಪ್ರದರ್ಶನ ನೀಡಿದ್ದಾರೆ. ಈ ಭಾಗದ ಪ್ರಸಿದ್ಧ ಕಲಾವಿದರಿಗೆ ಹಾರ್ಮೋನಿಯಂ ಸಾತ್ ನೀಡುವ ಕಲೆಯನ್ನು ಇವರು ಸಂಪಾದಿಸಿಕೊಂಡಿದ್ದು ಒಟ್ಟು ಆರುದಶಕಗಳಿಂದ ಸಂಗೀತ ದೇವತೆ ಆರಾಧಕರಾಗಿ ನಿಷ್ಠೆಯಿಂದ ಸೇವೆಮಾಡುತ್ತಿರುವ ಶ್ರೀಯುತರಿಗೆ ಸರ್ಕಾರದಿಂದ ಕಲಾವಿದರ ಮಾಸಾಶನ ಮಾತ್ರ ಸಿಗುತ್ತಿದೆ. ಇದನ್ನೇ ಪಡೆದುಕೊಂಡು ಸಂತೃಪ್ತ ಜೀವನ ನಡೆಸುತ್ತಿರುವ ಸತ್ಯಪ್ಪನವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕೆನ್ನುತ್ತಾರೆ ಅವರ ಶಿಷ್ಯ ಬಳಗ.

**ಸತ್ಯಪ್ಪ ಅದೃಶ್ಯಪ್ಪ ಚಿಗರಿ,**<br>
**ಸಾ : ಲಿಂಗನೂರ,**<br>
**ತಾ : ಜಮಖಂಡಿ, ಜಿ : ಬಾಗಲಕೋಟೆ.**

# ಮಲ್ಲಯ್ಯ ಗುರುಪಾದಯ್ಯ ಅಥಣಿ

ಜಮಖಂಡಿ ಪಟ್ಟಣ ಶ್ರೀಕೃಷ್ಣಪಾರಿಜಾತ ಕಲಾವಿದರ ತವರುಮನೆ. ಹೆಸರಾಂತ ಕಲಾವಿದರಿಗೆ ಆಶ್ರಯ ನೀಡಿದ ಪುಣ್ಯಭೂಮಿ ಇಂತಹ ಪುಣ್ಯನೆಲದಲ್ಲಿ ಶ್ರೀಕೃಷ್ಣಪಾರಿಜಾತ ಕಲಿತು ಹೆಸರು ಮಾಡಿದವರು ಮಲ್ಲಯ್ಯಸ್ವಾಮಿಗಳು ಅಥಣಿ.

೧೪-೧-೧೯೧೮ರಲ್ಲಿ ಜಮಖಂಡಿ ತಾಲೂಕಿನ ಮೈಗೂರ ಗ್ರಾಮದಲ್ಲಿ ಜನಿಸಿದರು. ತಂದೆಯವರು ಹಾಡುತ್ತಿರುವ ಮಂಗಳಾರುತಿ ಪದ, ಭಜನಾ ಹಾಡುಗಳು ಮಲ್ಲಯ್ಯನವರ ಮೇಲೆ ಪ್ರಭಾವ ಬೀರಿದವು. ಮೈಗೂರಿಗೆ ಒಮ್ಮೆ ಪ್ರಸಿದ್ಧ ಪಾರಿಜಾತ ಕಲಾವಿದರಾದ ಸವದಿಯ ಮಲ್ಲಯ್ಯನವರ ಶ್ರೀಕೃಷ್ಣಪಾರಿಜಾತ ಪ್ರಯೋಗವಿತ್ತು. ಆ ಶ್ರೀಕೃಷ್ಣಪಾರಿಜಾತವನ್ನು ಕಂಡು ಬಹಳಷ್ಟು ಪ್ರಭಾವಿತರಾಗಿ ತಿಕೋಟಾದ ವಿರುಪಾಕ್ಷಯ್ಯ ಸಾಲಿಮಠ ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ೧೯೩೦ರಲ್ಲಿ ರಂಗಪ್ರವೇಶಮಾಡಿ ತಿಕೋಟಾ ಗ್ರಾಮದಲ್ಲಿ ಸತ್ಯಭಾಮಾ ಕೊರವಂಜಿ ಪಾತ್ರ ನಿರ್ವಹಿಸಿ ಪ್ರೇಕ್ಷಕರ ಹೊಗಳಿಕೆಗೆ ಪಾತ್ರರಾದರು. ಮುಂದೆ ಅಥಣಿ ಪಟ್ಟಣಕ್ಕೆ ಹೋಗಿ ಅಲ್ಲಿ ಸ್ವಂತ ಕಂಪನಿಕಟ್ಟಿ ಸುಮಾರು ೫ ವರ್ಷಗಳವರೆಗೆ ಈ ಕಂಪನಿ ನಡೆಸಿಕೊಂಡು ೧೯೪೦ರ ಸುಮಾರಿಗೆ ಜಮಖಂಡಿಗೆ ಬಂದು ಶ್ರೀವೆಂಕಟೇಶ್ವರ ಶ್ರೀಕೃಷ್ಣಪಾರಿಜಾತ ಕಂಪನಿ ಜಮಖಂಡಿ ಎಂಬ ಸಂಘ ಕಟ್ಟಿ ಈ ಕಂಪನಿಯ ಮೂಲಕ ಕಲಾಸೇವೆಗೆ ಅನುವುಮಾಡಿಕೊಂಡರು.

೧೯೪೦ರಿಂದ ಇಲ್ಲಿಯವರೆಗೆ ಹಲವಾರು ಪ್ರಯೋಗಗಳನ್ನು ಕಂಡ ಮಲ್ಲಯ್ಯನವರು ಕಂಪನಿಯು ಹಾಗೂ ಇಲ್ಲಿರುವ ಕಲಾವಿದರು ಉತ್ತಮ ಕಲಾಸೇವೆಯಿಂದ ಹೆಸರುಗಳಿಸಿದ್ದಾರೆ. ಸುಮಾರು ಜನ ಕಲಾವಿದರಿಗೆ ತರಬೇತಿಗೊಳಿಸಿದ್ದಾರೆ. ಧಾರವಾಡ, ಮೈಸೂರ, ಗುಲಬರ್ಗಾ, ಭದ್ರಾವತಿ,

ಆಕಾಶವಾಣಿಯಲ್ಲಿ ಇವರ ಪಾರಿಜಾತ ಹಲವಾರು ಸಲ ಪ್ರಸಾರಗೊಂಡಿದೆ ಮತ್ತು ಬೆಂಗಳೂರು ಮತ್ತು ಹೈದ್ರಾಬಾದ್ ದೂರದರ್ಶನದಲ್ಲಿ ಇವರ ಪಾರಿಜಾತ ಪ್ರಸಾರಗೊಂಡಿದೆ.

ಸುಮಾರು ೧೨೦೦೦ ಪ್ರಯೋಗಗಳನ್ನು ಕಂಡ ಮಲ್ಲಯ್ಯನವರ ಪಾರಿಜಾತ ಕಂಪನಿ ಪ್ರಯೋಗದಿಂದ ಪ್ರಯೋಗಕ್ಕೆ ಹೊಸದನ್ನು ಪ್ರೇಕ್ಷಕರಿಗೆ ಕೊಡುತ್ತ ಜನ ಮೆಚ್ಚಿಗೆ ಗಳಿಸಿದ್ದಾರೆ. ಅಖಂಡ ಏಳುದಶಕಗಳನ್ನು ಕಲಾ ಜೀವನ ನಡೆಸುವುದು ಸಾಮಾನ್ಯವಾದ ಮಾತಲ್ಲ. ಆ ಮಾತಿನ ಮರ್ಮ ತಿಳಿದ ಮಲ್ಲಯ್ಯನವರು ತಮ್ಮ ಪರಿವಾರದ ಕಲಾವಿದರನ್ನು ತರಬೇತಿಗೊಳಿಸಿ ಅವರಿಂದ ಪಾತ್ರ ಮಾಡಿಸಿ ಖುಷಿಪಡುವ ಮಲ್ಲಯ್ಯನವರ ಅನುಭವವನ್ನು ಕೇಳಿಯೆ ಆನಂದಪಡಬೇಕು. ಕರ್ನಾಟಕ, ಮಹಾರಾಷ್ಟ್ರ, ಗೋವಾ, ದೆಹಲಿ, ಆಂಧ್ರಪ್ರದೇಶಗಳಲ್ಲಿ ಪಾರಿಜಾತವನ್ನು ಪಸರಿಸಿದ ಮಲ್ಲಯ್ಯನವರಿಗೆ ಹಲವಾರು ತೊಂದರೆ ಬಂದರೂ ನಿಷ್ಠೆಯಿಂದ ಕಲೆಗಾಗಿ ಜೀವನ ನಡೆಸಿದವರು. ಇವರು ಹಲವಾರು ರಾಷ್ಟ್ರೀಯ ಉತ್ಸವಗಳಲ್ಲಿ ಭಾಗವಹಿಸಿ ಪ್ರೇಕ್ಷಕರಿಂದ ಜನ ಮನ್ನಣೆ ಗಳಿಸಿದ್ದಾರೆ.

**ಪ್ರಶಸ್ತಿ ಮತ್ತು ಪುರಸ್ಕಾರಗಳು :** ಇವರ ಸುದೀರ್ಘ ಕಲಾಜೀವನವನ್ನು ಕಂಡು ಕರ್ನಾಟಕ ಸರ್ಕಾರ ೨೦೦೩ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ ಮತ್ತು ೧೯೯೫ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಇದು ಅಲ್ಲದೆ ಕನ್ನಡ ಸಾಹಿತ್ಯ ಸಮ್ಮೇಳನ, ಜಾನಪದ ಸಮ್ಮೇಳನಗಳಲ್ಲಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರ ಸದಸ್ಯರಾಗಿ ಮೂರು ವರ್ಷಗಳ ಕಾಲ ಸೇವೆ ಮಾಡಿ ಕಲಾವಿದರ ಬೆಳವಣಿಗೆ ಹಾಗೂ ಪ್ರೋತ್ಸಾಹಿಸುವದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿ ಅವರಿಗೆ ಪ್ರೋತ್ಸಾಹಿಸಿದ್ದಾರೆ.

ಶ್ರೀವೆಂಕಟೇಶ್ವರ, ಶ್ರೀಕೃಷ್ಣ ಪಾರಿಜಾತ ಸಂಘ ಜಮಖಂಡಿಯ ತಂಡ ಮಾಲೀಕರಾಗಿ ಯುವ ಕಲಾವಿದರನ್ನು ಮೇಳೈಸಿಕೊಂಡು ತಂಡ ಸುಭದ್ರ ಸ್ಥಿತಿಯಲ್ಲಿ ನಿಲ್ಲುವಂತೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಆರು ದಶಕಗಳ ಅನುಭವದ ಮಾತುಗಳು ಯುವ ಕಲಾವಿದರಿಗೆ ಮಾರ್ಗದರ್ಶನದಂತೆ ಹೇಳುವ ಮಲ್ಲಯ್ಯನವರು ಶ್ರೀಕೃಷ್ಣಪಾರಿಜಾತಕ್ಕಾಗಿ ಎಲ್ಲವನ್ನು ಕಳೆದುಕೊಂಡಿದ್ದರೂ ಹೆಸರು ಮಾತ್ರ ಗಳಿಸಿದ್ದಾರೆ.


ಮಲ್ಲಯ್ಯಸ್ವಾಮಿ ಅಥಣಿ,
ಪಿ. ಬಿ. ಹೈಸ್ಕೂಲ್ ಗಲ್ಲಿ,
ಸಾ : ತಾ : ಜಮಖಂಡಿ, ಜಿ : ಬಾಗಲಕೋಟೆ.

## ರಾಯಪ್ಪ ಸಂಗಪ್ಪ ಕುಂಬಾರ

ಶ್ರೀಕೃಷ್ಣಪಾರಿಜಾತ ಆಲಗೂರು, ಕೂಂಚನೂರು ಕಂಪನಿಗಳೆಂದರೆ ಪ್ರಸಿದ್ಧವಾದವು. ಇಂತಹ ಪ್ರಸಿದ್ಧ ಗ್ರಾಮವಾದ ಕುಂಚನೂರಿನಲ್ಲಿ ೧೯೪೨ರಲ್ಲಿ ಸಂಗಪ್ಪ ಮತ್ತು ಲಕ್ಕವ್ವ ಎಂಬ ದಂಪತಿಗಳ ೩ನೇಯ ಮಗನಾಗಿ ಜನಿಸಿದರು. ಸ್ವ ಗ್ರಾಮವಾದ ಕುಂಚನೂರಿನಲ್ಲಿ ೫ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ೧೯೫೦ರ ಸುಮಾರಿಗೆ ಮಲ್ಲೇಶಪ್ಪ ಕೋನೆಗೋಳ ಮತ್ತು ಧರ್ಮನಗೌಡ ಪಾಟೀಲ ಅವರ ಪಾರಿಜಾತ ಕಂಪನಿಯಲ್ಲಿ ತಾಳವಾದಕರಾಗಿ ವಿದ್ಯೆ ಕಲಿಯಲು ಪ್ರಾರಂಭಿಸಿದರು. ಮುಂದೆ ಕೆಲವೇ ದಿನಗಳ ನಂತರ ಅದೆ ಕಂಪನಿಯಲ್ಲಿ ಭಾಗವತರಾಗಿ ಅಭಿನಯಿಸಲು ಪ್ರಾರಂಭಿಸಿದರು. ಮುಂದೆ ಈ ಕಂಪನಿ ನಿಂತು ಹೋದಾಗ ಮಹಾಲಿಂಗಪೂರದ ಹಿರಿಯ ಕಲಾವಿದರಾದ ದಿ|| ಮುರಿಗೆಪ್ಪ ಸೋರಗಾಂವಿ ಇವರ ಕಂಪನಿಯಲ್ಲಿ ಭಾಗವತರಾಗಿ ಸುಮಾರು ೧೦ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಮುಂದೆ ಹಿರಿಯ ಕಲಾವಿದರಾದ ವಿಠಲ್‌ರಾವ್ ಟಕ್ಕಳಕಿ, ಅಪ್ಪಾಲಾಲ್ ನದಾಫ್ ಅವರು ಪಾರಿಜಾತ ಕಂಪನಿಯಲ್ಲಿ ತಾಳವಾದಕರಾಗಿ, ಭಾಗವತರಾಗಿ ವಿಶೇಷವಾಗಿ ಸೇವೆಸಲ್ಲಿಸಿದ್ದಾರೆ. ಶ್ರೀಕೃಷ್ಣಪಾರಿಜಾತದಲ್ಲಿ ಎಷ್ಟು ತಬಲಾಕ್ಕೆ ಮಹತ್ವ ಇದೆಯೋ ಅಷ್ಟೆ ಮಹತ್ವ ತಾಳವಾದ್ಯಕ್ಕೆ ಇದೆ. ಶ್ರೀಕೃಷ್ಣಪಾರಿಜಾತದ ವಿಶೇಷ ಸಂಗೀತ ಶೈಲಿಗೆ ತಾಳಬಾರಿಸುವಕಲೆ ಇವರದು. ಹಿರಿಯ ಭಜನಾ ಕಲಾವಿದ ಮಹಾದೇವಪ್ಪ ಹಲ್ಯಾಳರ ಭಜನಾ ತಂಡದಲ್ಲಿ ತಾಳವಾದಕರಾಗಿ ಸೇವೆಸಲ್ಲಿಸಿದ್ದಾರೆ.

ಆಕಾಶವಾಣಿ, ಬಿ. ಗ್ರೇಡ್ ಹಾಗೂ ದೂರದರ್ಶನ ಕಲಾವಿದರಾಗಿ ಸೇವೆಸಲ್ಲಿಸಿ ಜನಮೆಚ್ಚುಗೆ ಗಳಿಸಿದ್ದಾರೆ. ಶ್ರೀಪ್ರಭುಲಿಂಗ ಕೃಷ್ಣಪಾರಿಜಾತ ಸಂಘ ತೇರದಾಳ ಎಂಬ ತಂಡಕಟ್ಟಿ ತಾವೇ ತಂಡದ ನೇತೃತ್ವವಹಿಸಿ ಶ್ರೀಕೃಷ್ಣನ ನಾಮಸ್ಮರಣೆಯಲ್ಲಿ ತೊಡಗಿದ್ದಾರೆ. ಸ್ವಗ್ರಾಮ ಕುಂಚನೂರು ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾಗಲಿರುವ ಕಾರಣ

ಇವರು ಜಮಖಂಡಿ ತಾಲೂಕಿನ ತೇರದಾಳ ಪಟ್ಟಣದಲ್ಲಿ ನೆಲೆಸಿ ತಮ್ಮ ಕಲಾ ಸೇವೆಯಲ್ಲಿ ತೊಡಗಿದ್ದಾರೆ.

ಹಲವಾರು ಹಿರಿಯ ಕಲಾವಿದರ ಒಡನಾಟದಿಂದ ಬೆಳೆದ ಇವರು ಹಲವಾರು ರಾಷ್ಟ್ರೀಯ ಉತ್ಸವಗಳಲ್ಲಿ ಭಾಗವಹಿಸಿ ಕಲಾಪ್ರದರ್ಶನ ನೀಡಿ ಪ್ರೇಕ್ಷಕರಿಗೆ ರಸದೌತಣ ಉಣಬಡಿಸಿದ್ದಾರೆ. ಇವರ ಅಖಂಡವಾದ ಕಲಾಸೇವೆಯನ್ನು ಕಂಡು ಹಲವಾರು ಸಂಘ ಸಂಸ್ಥೆ ಸನ್ಮಾನಿಸಿ ಪುರಸ್ಕರಿಸಿವೆ. ಶ್ರೀಮಂಜುನಾಥ ಶ್ರೀಕೃಷ್ಣಪಾರಿಜಾತ ಸಂಘ, ದಾದನಟ್ಟಿ ಇವರು ಹಮ್ಮಿಕೊಂಡ ಶ್ರೀಕೃಷ್ಣಪಾರಿಜಾತರಂತ ತರಬೇತಿ ಶಿಬಿರದಲ್ಲಿ ಸನ್ಮಾನಿಸಲಾಗಿದೆ. ೨೦೦೫ರಲ್ಲಿ ಮಾನಸ ಸಂಗೀತ ಸಾಂಸ್ಕೃತಿಕ ಸಂಸ್ಥೆ, ಬೆಂಗಳೂರು ಇವರು ಜ್ಞಾನ ಸರೋವರ ಪ್ರಶಸ್ತಿ ನೀಡಿ ಗೌರವಿಸಿದೆ. ಉಡುಪಿಯಲ್ಲಿ ಜರುಗಿದ ರಾಷ್ಟ್ರೀಯ ಯಕ್ಷಗಾನ ಮೇಳದಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದಾರೆ. ಶ್ರೀಕೃಷ್ಣಪಾರಿಜಾತದ ಭಾಗವತರಾಗಿ, ತಾಳವಾದಕರಾಗಿ ವಿಶೇಷ ಸೇವೆ ಸಲ್ಲಿಸಿ ಹೆಸರು ಮಾಡಿದ ರಾಯಪ್ಪ ಕುಂಬಾರ ಆಧ್ಯಾತ್ಮದಲ್ಲಿ ವಿಶೇಷವಾದ ಆಸಕ್ತಿ ಹೊಂದಿದವರು. ಇಂತ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಬೇಕಾದ ಕೆಲಸ ಆಗಬೇಕಿದೆ.

ರಾಯಪ್ಪ ಸಂಗಪ್ಪ ಕುಂಬಾರ,<br>ಸಾ : ತೇರದಾಳ,<br>ತಾ : ಜಮಖಂಡಿ, ಜಿ : ಬಾಗಲಕೋಟೆ.

## ಸಿದ್ಧಪ್ಪ ಅಮ್ಮಣ್ಣ ತಳೆವಾಡ

ಶ್ರೀಕೃಷ್ಣಪಾರಿಜಾತದಲ್ಲಿ ಭಾಗವತನ ಪಾತ್ರ ಬಹಳ ಮುಖ್ಯವಾದದು. ಸಂಪೂರ್ಣ ಆಟದ ಶ್ರೇಯಸ್ಸು ಇವರು ತೆಗೆದುಕೊಳ್ಳುವ ನಿರ್ಧಾರದಲ್ಲಿ ಇರುತ್ತದೆ. ಅಂತಹ ಪ್ರಮುಖ ಭಾಗವತರಲ್ಲಿ ಸಿದ್ದಪ್ಪ ತಳೆವಾಡ ಒಬ್ಬರು. ವಾಣಿಜ್ಯಕೇಂದ್ರ ಮಹಾಲಿಂಗಪೂರ ಮತ್ತು ತಾಲೂಕ ಕೇಂದ್ರ ಮುಧೋಳದ ನಡುವೆ ಇವರು ಪುಟ್ಟಗ್ರಾಮ ಮುಗಳಖೋಡ. ಇಲ್ಲಿಯ ತಂದೆ ಅಮ್ಮಣ್ಣ, ತಾಯಿ ಸತ್ಯವ್ವ ಎಂಬ ದಂಪತಿಗಳ ಉದರದಲ್ಲಿ ೫-೧-೧೯೪೪ರಲ್ಲಿ ಜನಿಸಿದರು. ಮಧ್ಯಮ ವರ್ಗದಲ್ಲಿ ಜನಿಸಿದ ಸಿದ್ದಪ್ಪ ಕೇವಲ ೪ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ನಂತರದ ದಿನಗಳಲ್ಲಿ ಸಂಗೀತದ ಗೀಳು ಹಚ್ಚಿಕೊಂಡು ನಿಂಗಪ್ಪ ಸಿದ್ಧಪ್ಪ ಗುಂಡಕಲ್ಲ ಸಾ : ಮುಗಳಖೋಡ ಇವರ ನೇತೃತ್ವದಲ್ಲಿ ಪ್ರಥಮಬಾರಿಗೆ ಶ್ರೀ ಪರಮಾನಂದ ಪಾರಿಜಾತ ಕಂಪನಿ ಮುಗಳಖೋಡ ಎಂಬ ಸಂಘ ಕಟ್ಟಿ ರಂಗದ ಮೇಲೆ ಬಂದರು. ಸೈದುಸಾಬ ಲಾಡಕಾನ್-ಕೃಷ್ಣ, ಸಿದ್ದಪ್ಪ ತಳೆವಾಡ-ಭಾಗವತ, ದೊರೆಸಾನಿ-ಸತ್ಯಭಾಮಾ, ಸೋಮಲಿಂಗ ಪೀಠಕ-ಗೊಲ್ಲತಿ, ಮಸ್ತಾನಸಾಬ ಮುಲ್ಲಾ-ಕೊರವಂಜಿ, ಶಂಕ್ರಪ್ಪ ಬಬಲಾದಿ-ರುಕ್ಮಿಣಿ, ಸಿದ್ಧಪ್ಪ ಕೋಳಿ-ನಾರದ, ಫಕೀರಪ್ಪ ಸುಣಗಾರ-ಹಾರ್ಮೋನಿಯಂ, ಸಂಗಪ್ಪ ಒಡಯರ-ತಬಲಾ ಇಂತಹ ಕಲಾವಿದರು ಸೇರಿಸಿ ತಂಡ ಮುನ್ನಡಿಸಿದರು. ಮುಂದೆ ಹಲವಾರು ತೊಂದರೆಗಳಿಂದ ತಂಡ ನಿಂತು ಹೋದರೂ, ಭಾಗವತರಾದ ಸಿದ್ಧಪ್ಪನವರು ತಮ್ಮ ಕಲೆಯನ್ನು ಬೇರೆ ಬೇರೆ ಕಂಪನಿಯಲ್ಲಿ ಸೇವೆಸಲ್ಲಿಸುತ್ತಾ ಕಾಲಕಳೆದರು. ೧೯೭೭ರಿಂದ ೧೯೭೭ರ ವರೆಗೆ ಪಾರಿಜಾತ ಪ್ರಥಮ ರಂಗನಟಿ ಕೌಜಲಗಿಯ ನಿಂಗಮ್ಮನ ಕಂಪನಿಯಲ್ಲಿ ಭಾಗವತರಾಗಿ ಸೇವೆಸಲ್ಲಿಸಿದರು. ನಂತರ ಮುಂದೆ ೧೯೭೭ ರಿಂದ ೧೯೫೫ರ ವರೆಗೆ ಜಮಖಂಡಿಯ ಅಪ್ಪಾಲಾಲ್ ನದಾಫ್‌ರ ಕಂಪನಿಯಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದರು.

ಒಂದು ಆಟಕ್ಕೆ ೮೦ ರೂಪಾಯಿ ಕೊಡುತ್ತಿದ್ದಾಗ ಆಟ ಆಡಲು ಆರಂಭಿಸಿದ ಸಿದ್ದಪ್ಪನವರು ಸುಮಾರು ೧೦ ಸಾವಿರ ಪ್ರಯೋಗಗಳನ್ನು ಮಾಡಿದ್ದೇನೆಂದು ಹೆಮ್ಮೆಯಿಂದ ಹೇಳುವಾಗ ಕಣ್ಣಲ್ಲಿ ಆನಂದದ ಬಾಷ್ಪಗಳು ಬರುತ್ತವೆ. ಇಂತ ಶ್ರೇಷ್ಠ ಕಲಾವಿದರಾದ ಇವರು ಬೆಂಗಳೂರಿನ ವಿಧಾನ ಸಭೆಯಲ್ಲಿ ಆಟಮಾಡಿ ಅಂದಿನ ಮುಖ್ಯಮಂತ್ರಿ ದಿ॥ ದೇವರಾಜ ಅರಸ್ ಅವರಿಂದ ಪುರಸ್ಕೃತಗೊಂಡು ಪ್ರೇಕ್ಷಕರ ಮೆಚ್ಚುಗೆಗಳಿಸಿದ್ದಾರೆ. ಆಕಾಶವಾಣಿ–ಧಾರವಾಡ, ಬೆಂಗಳೂರು, ಗುಲಬರ್ಗಾದ ನಿಲಯ ಕಲಾವಿದರಾಗಿ ಸೇವೆಸಲ್ಲಿಸಿ, ಕರ್ನಾಟಕ, ಮಹಾರಾಷ್ಟ್ರ, ಗೋವಾಗಳಲ್ಲಿ ಪ್ರದರ್ಶನ ನೀಡಿ ದೂರದ ಪ್ರದೇಶಗಳಲ್ಲಿ ಪಾರಿಜಾತದ ಕಂಪು–ಇಂಪು ಪಸರಿಸಿದ್ದಾರೆ. ಸತತವಾಗಿ ೩ ದಿನಗಳವರೆಗೆ ಆಗುವಷ್ಟು ವಿಷಯ ಸಂಗ್ರಹಣೆ ಮಾಡಿಕೊಂಡಿರುವ ಸಿದ್ಧಪ್ಪ ತಳವಾಡ ಇನ್ನೂವರೆಗೂ ಈ ಕಲಾಸೇವೆಮಾಡುವುದನ್ನು ನಿಲ್ಲಿಸಿರುವುದಿಲ್ಲಾ. ಶ್ರೀ ಬಸವೇಶ್ವರ ಪಾರಿಜಾತ ಕಂಪನಿ ಬಬಲೇಶ್ವರ, ಕಾಡಸಿದ್ಧೇಶ್ವರ ಪಾರಿಜಾತ ಸಂಘ, ಜಂಖಂಡಿ, ಸಾರವಾಡ, ಚಿಮ್ಮಡ ಪಾರಿಜಾತ ಕಂಪನಿಗಳಲ್ಲಿ ಪಾರಿಜಾತದ ಭಾಗವತರಾಗಿ ಜನಪ್ರಿಯರಾಗಿದ್ದಾರೆ. ಈ ಕಲೆ ಉಳಿಯಬೇಕು, ಬೆಳೆಯಬೇಕು ಎಂದು ಸಂತೋಷದಿಂದ ಹೇಳುವ ಇವರು ಕೃಷ್ಣನ ನಾಮಸ್ಮರಣೆಯಿಂದ ನೆಮ್ಮದಿ ಸಿಗುತ್ತದೆ ಎಂದು ಹೇಳುತ್ತಾರೆ. ಇವರಿಗೆ ಸರ್ಕಾರದಿಂದ ಸಿಗುವ ಕಲಾವಿದರ ಮಾಸಾಶನವಾಗಿದೆ.

ಸಿದ್ದಪ್ಪ ಅಮ್ಮಣ್ಣ ತಳೆವಾಡ,<br>ಸಾ : ಮುಗಳಖೋಡ,<br>ತಾ : ಮುಧೋಳ, ಜಿ : ಬಾಗಲಕೋಟೆ.

# ಯಮನವ್ವ ಸ. ಮಾದರ

ಬಾದಾಮಿಯಿಂದ ಉತ್ತರ ಮುಖವಾಗಿ ಸುಮಾರು ೨೫ ಕಿ.ಮೀ. ಚಲಿಸಿದರೆ ಸಿಗುವ ಪುಟ್ಟಗ್ರಾಮ ಸೂಳಿಕೇರಿ. ಈ ಗ್ರಾಮದ ಕಡು ಬಡತನದಲ್ಲಿ ಹುಟ್ಟಿದ ಯಮನವ್ವ ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಚಿಕ್ಕಂದಿನಿಂದಲೆ ಆಧ್ಯಾತ್ಮಿಕ ವಿಷಯಗಳತ್ತ ಒಲವು ತೋರಿಸಿದಳು. ಅಂದಿನ ಕಾಲದಲ್ಲಿ ಸ್ತ್ರೀಯರು ರಂಗವೇರುವದು ಕಷ್ಟದ ಮಾತಾಗಿತ್ತು. ಓದು-ಬರಹ ಬಾರದ ಮುಗ್ಧ ಸ್ವಭಾವದ ಯಮನವ್ವನನ್ನು ತಿದ್ದಿ ತೀಡಿ ಅವಳಿಂದ ಶ್ರೀಕೃಷ್ಣಪಾರಿಜಾತದಲ್ಲಿ ಪಾತ್ರ ಮಾಡಲು ಹಚ್ಚಿದ ಕೀರ್ತಿ ದಿ॥ ಕೃಷ್ಣಾಜಿ ದೇಶಪಾಂಡೆಯವರಿಗೆ ಸಲ್ಲುತ್ತದೆ.

ಮುಖಕ್ಕೆ ಬಣ್ಣ ಬಡೆದುಕೊಂಡು ಹಾಡು ಹೇಳುತ್ತಾ ರಂಗಪ್ರವೇಶ ಮಾಡಿದರೆ ಹಾಡಿನಗುಂಗಿಗೆ ಮರುಳಾದವರು ಹಲವರು. ಅಂತಹ ಕಂಠ ಮಾಧುರ್ಯ, ಭಾಷೆಗೆ ತಕ್ಕಂತೆ ಅಭಿನಯಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ಯಮನವ್ವ ದಿ॥ ಕೃಷ್ಣಾಜಿ ದೇಶಪಾಂಡೆಯವರ ಕಂಪನಿಗೊಂದು ಹೆಸರು ತಂದುಕೊಟ್ಟಳು. ಶ್ರೀಕೃಷ್ಣಪಾರಿಜಾತದಲ್ಲಿ ಬರುವ ಎಲ್ಲ ಪಾತ್ರಗಳನ್ನು ಅಭಿನಯಿಸುವಷ್ಟು ಇವಳನ್ನು ತರಬೇತಿಗೊಳಿಸಿದ ಕೃಷ್ಣಾಜಿಯವರ ಶ್ರಮಕ್ಕೆ ತಕ್ಕಂತೆ ಹೆಸರು ತಂದುಕೊಟ್ಟಳು.

**ಯಮನವ್ವ ವಿಶೇಷತೆ :** ಆಧ್ಯಾತ್ಮಿಕವಾದ ಮನಸ್ಸನ್ನು ಹೊಂದಿ ಯಮನವ್ವ ಬಹಳ ಮುಗ್ಧ ಸ್ವಭಾವದವಳು. ವಿನಯ ಸಂಪನ್ನೆ, ಇವಳು ಕೊರವಂಜಿ ಪಾತ್ರವನ್ನು ಸತತವಾಗಿ ಒಂದು ರಾತ್ರಿವರೆಗೆ ಒಬ್ಬಳೆ ಮಾಡುವಷ್ಟು ವಿಷಯ ಸಂಗ್ರಹಣೆ ಮಾಡಿಕೊಂಡಿದ್ದಳು. ಮುಂದೆ ಕಂಪನಿಯ ಇತ್ತೀಚಿನ ದಿನಗಳಲ್ಲಿ ಶ್ರೀಕೃಷ್ಣನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿ ಹೆಸರುಗಳಿಸಿದರು.

ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಸುತ್ತಾಡಿ ಕೃಷ್ಣನ ನಾಮಸ್ಮರಣೆಮಾಡಿ ಹೆಸರು ಗಳಿಸಿದ ಯಮನವ್ವ ಮುಂಬರುವಂತ ಯುವ ಕಲಾವಿದರಿಗೆ ಮಾದರಿಯಾಗಿದ್ದಾಳೆ. ಇವರ ಪ್ರಯೋಗಗಳು ಧ್ವನಿಸುರುಳಿಗಳಾಗಿವೆ. ಕರ್ನಾಟಕ ಆಕಾಶವಾಣಿಗಳಲ್ಲಿ ಸಹ ಹಲವಾರು ಸಲ ಪ್ರಸಾರಗೊಂಡಿವೆ. ಜೀವನದುದ್ದಕ್ಕೂ ಹಲವಾರು ತೊಂದರೆಗಳು ಬಂದರೂ ಅಂಜದೆ ಶ್ರೀಕೃಷ್ಣಪರಮಾತ್ಮನ ಸೇವೆಯಲ್ಲಿ ನೆಮ್ಮದಿ ಜೀವನ ನಡೆಸಿದಳು. ಸುಮಾರು ೧೦,೦೦೦ ಪ್ರಯೋಗಗಳನ್ನು ಮಾಡಿ ಕಂಪನಿಯ ಮಾಲೀಕರು ಕೊಟ್ಟಿದನ್ನು ಸಂತೋಷದಿಂದ ಸ್ವೀಕರಿಸಿ ಸಂತೃಪ್ತಿ ಜೀವನ ನಡೆಸಿದಳು. ತಮ್ಮ ಜೀವಿತದ ಬಹಳಷ್ಟು ದಿನಗಳನ್ನು ಈ ಕಲಾಪ್ರದರ್ಶನ ಹಾಗೂ ತರಬೇತಿಯಲ್ಲಿ ಕಳೆದ ಯಮನವ್ವ ಶ್ರೇಷ್ಠ ಕಲಾವಿದೆಯಾಗಿ ರೂಪಗೊಂಡಳು. ಯಮನವ್ವಳ ಕಲೆಯನ್ನು ಕಂಡು ಬೆರಗಾದವರು ಬಹಳ ಜನ. ಕೆಲವರು ಪ್ರಶಸ್ತಿ ಫಲ-ಪುಷ್ಪ ನೀಡಿ ಸನ್ಮಾನಿಸಿ, ಪ್ರೋತ್ಸಾಹಿಸಿದ್ದಾರೆ. ನಾಡಿನ ಹಲವಾರು ಮಠಾಧೀಶರು, ಸಂಘ-ಸಂಸ್ಥೆಗಳು ಪುರಸ್ಕರಿಸುವದರ ಜೊತೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೩ರಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸಿದೆ. ಇಂತಹ ಕಲಾಸಿರಿಗೆ ಇನ್ನಷ್ಟು ಪ್ರೋತ್ಸಾಹ ದೊರೆಯಬೇಕಾದ ಅವಶ್ಯಕತೆ ಇದೆ.

**ಯಮನವ್ವ ಸ. ಮಾದರ,**
**ಸಾ : ಸೂಳಿಕೇರಿ,**
**ತಾ : ಬಾದಾಮಿ, ಜಿ : ಬಾಗಲಕೋಟೆ.**

# ಮಾರುತೆಪ್ಪ ಪರಪ್ಪ ಪೆಟ್ಲೂರ

ಶ್ರೀ ಮಾರುತೆಪ್ಪ ಪೆಟ್ಲೂರವರು ೧೯೦೪ರಲ್ಲಿ ಕಲಾವಿದರ ಕರ್ಮಭೂಮಿ ಎಂದು ಖ್ಯಾತಿಗಳಿಸಿದ ನಾವಲಗಿಯಲ್ಲಿ ಜನಿಸಿದರು. ತಂದೆ ಪರಪ್ಪ, ತಾಯಿ ನೀಲಮ್ಮ ಇವರು ಸಹ ಕಲಾವಿದರಾಗಿದ್ದರು. ಕಲೆಯ ಪರಿಸರದಲ್ಲಿ ಹುಟ್ಟಿ ಬೆಳೆದ ಮಾರುತೆಪ್ಪನವರು ೧೯೫೪ರಲ್ಲಿ ಶ್ರೀ ಪಾಂಡಪ್ಪ ಬಡಿಗೇರ ಅವರಲ್ಲಿ ರುಕ್ಮಿಣಿ ದೊರೆಸಾನಿ ಪಾತ್ರವನ್ನು ಅಭಿನಯಿಸಲು ಆರಂಭಿಸಿದರು.

೧೯೬೦ರ ಸುಮಾರಿಗೆ ರಾಚಪ್ಪ ಓಂಕಾರೆಪ್ಪ ಮುಂಡಗನೂರ ಇವರೊಂದಿಗೆ ಸೇರಿ ಹಲವಾರು ಬಾಲಕಲಾವಿದರನ್ನು ಸಂಘಟಿಸಿ ಶ್ರೀಕೃಷ್ಣ ಪಾರಿಜಾತ ತಂಡ ಪ್ರಾರಂಭಿಸಿದರು. ಗಿರೀಶ ಹೀರೆಮಠ, ಸೋಮಯ್ಯ ಹೀರೆಮಠ, ಕಲ್ಲಪ್ಪ ಅಗಸರ, ಚಂದ್ರಯ್ಯ ಹೀರೆಮಠ ಇವರೆಲ್ಲ ಕಲಾವಿದರು ಈ ಕಂಪನಿಯಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿದರು. ಕೆಲವು ದಿನಗಳನಂತರ ಈ ಕಂಪನಿಯಲ್ಲಿ ಇದ್ದ ಕಲಾವಿದರ ಸ್ವರ ಕಡಿಮೆಯಾದ ಕಾರಣ ಈ ತಂಡ ತನ್ನ ಸೇವೆಯನ್ನು ನಿಲ್ಲಿಸಿತು. ೧೯೬೪ರಲ್ಲಿ ಶ್ರೀ ಮಾರುತೆಪ್ಪ ಪೆಟ್ಲೂರ ಇವರ ನೇತೃತ್ವದಲ್ಲಿ ಶ್ರೀ ಶಂಕರಾನಂದ ಪರಮಹಂಸ ಶ್ರೀಕೃಷ್ಣ ಪಾರಿಜಾತ ಸಂಘಕಟ್ಟಿ ಉತ್ತಮ ಕಲಾಸೇವೆಯನ್ನು ನೀಡುತ್ತಾ ಹೆಸರು ಮಾಡಿದರು.

ಕೃಷ್ಣ – ಲಕ್ಷ್ಮಣ ಅಗಸರ            ಭಾಗವತ – ಸೋಮಯ್ಯ ಸಂ. ಹೀರೆಮಠ
ಭಾಗವತ – ಸಿದ್ಧಪ್ಪ ತಳೆವಾಡ          ರುಕ್ಮಿಣಿ, ನಾರದ, ದೊರೆಸಾನಿ – ಸುಮಿತ್ರಾ ಮಾಂಗ
ಸತ್ಯಭಾಮ, ಕೊರವಂಜಿ, ಗೌಳಗಿತ್ತಿ – ಲಕ್ಷ್ಮೀಬಾಯಿ ಕಾಂಬಳೆ

ಎಂಬ ನಟವರ್ಗವನ್ನು ಸೇರಿಸಿ ಸ್ವತಃ ತಾವೇ ಹಾರ್ಮೋನಿಯಂ ವಾದಕರಾಗಿ ವಿಠಲ ಸಿರಗುಂಪಿ ಇವರನ್ನು ತಬಲಾವಾದಕರನ್ನಾಗಿ ಮೇಳೈಸಿಕೊಂಡು ಸುಮಾರು ೫ ದಶಕದಿಂದ ಈ ಕಲೆಯನ್ನು ಹಲವಾರು ಪ್ರದೇಶದಲ್ಲಿ ಪ್ರಚಾರಗೊಳಿಸಿದ್ದಾರೆ.

ನಾಡಿನ ಹಲವಾರು ರಾಷ್ಟ್ರೀಯ ಉತ್ಸವಗಳಾದ ಮೈಸೂರು ದಸರಾ ಉತ್ಸವ, ಚಾಲುಕ್ಯ ಉತ್ಸವಗಳಲ್ಲದೆ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ತಮ್ಮ ಕಲೆಯನ್ನು ಬಿತ್ತಿರಿಸಿದ್ದಾರೆ. ಇವರು ಶ್ರೀಕೃಷ್ಣಪಾರಿಜಾತದಲ್ಲಿ ಬರುವ ಸಂಗೀತವನ್ನು ವಿಶೇಷವಾಗಿ ಕಲಿತು ತಮ್ಮ ಕಲೆಯ ವಿಶೇಷತೆಯನ್ನು ಇತರರಿಗೆ ತೋರಿಸಿದ್ದಾರೆ. ಇವರ ಕಲೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಪುರಸ್ಕರಿಸಿವೆ. ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ತಮ್ಮ ಕಲಾ ಪ್ರದರ್ಶನ ನೀಡಿ ಉತ್ತಮ ಕಲಾವಿದರಾಗಿ ಹೆಸರು ಮಾಡಿದ್ದಾರೆ. ಶ್ರೀಕೃಷ್ಣ ಪಾರಿಜಾತದ ಹಾರ್ಮೋನಿಯಂ ಸೇವೆ ಸಲ್ಲಿಸಿದ ಕೆಲವೇ ಕೆಲವು ಉತ್ತಮರಲ್ಲಿ ಇವರು ಒಬ್ಬರು. ಇಂತಹ ಪ್ರಬುದ್ಧ ಕಲಾವಿದರಿಗೆ ಹಲವಾರು ಅವಕಾಶಗಳನ್ನು ಸಿಗಬೇಕು. ಆ ಕೆಲಸ ಮುಂದಿನ ದಿನಗಳಲ್ಲಿ ನಡೆಯಲಿ ಎಂಬುದು ಅವರ ಅಭಿಮಾನಿಗಳ ಬಯಕೆ.

**ಮಾರುತೆಪ್ಪ ಪರಪ್ಪ ಪೆಟ್ಲೂರ್,**<br>
**ಸಾ : ನಾವಲಗಿ,**<br>
**ತಾ : ಜಮಖಂಡಿ, ಜಿ : ಬಾಗಲಕೋಟೆ.**

## ಯಲ್ಲವ್ವಾ ರೊಡ್ಡಪ್ಪನವರ

ತೂಗಿರೆ ರಂಗನ
ತೂಗಿರೆ ಕೃಷ್ಣನ
ತೂಗಿರೆ ಅಚ್ಯುತ ಆನಂದ ಶಯನನ

ಎಂದು ಹಾಡುತ್ತಾ ರಂಗ ಪ್ರವೇಶ ಮಾಡಿದರೇ ಸಾಕ್ಷಾತ್ ದೇವಲೋಕದ ಕೊರವಂಜಿಯನ್ನು ನೋಡಿದಾಗ ಏನು ಹಾಡುಗಾರಿಕೆ, ಮಾತಿನ ಲಯ, ಕೇಳಿದರೆ ಸಾಕ್ಷಾತ ದೇವಲೋಕದಲ್ಲಿ ಕುಳಿತ ಅನುಭವವಾಗುತ್ತದೆ. ಇಂತಹ ಪ್ರತಿಭಾವಂತ ಕಲಾವಿದೆ ಯಾರುಗೊತ್ತೆ ಅವರೇ ಲೋಕಾಪೂರದ ಯಲ್ಲವ್ವ ರೊಡ್ಡಪ್ಪನವರ.

ತಂದೆ ದುರಗಪ್ಪಾ ತಾಯಿ ದುರಗವ್ವ ಎಂಬ ದಂಪತಿಗಳ ಉದರದಲ್ಲಿ ೧೯೪೨ರಲ್ಲಿ ಲೋಕಾಪೂರ (ಠಾಣಿಕೇರಿ)ಯಲ್ಲಿ ಜನಿಸಿದರು. ಕಡುಬಡತನದಲ್ಲಿ ಜನಿಸಿದ ಇವರು ಕೇವಲ ೫ನೇ ತರಗತಿಯವರೆಗೆ ವಿದ್ಯಾಭ್ಯಾಸಮಾಡಿ ಅನಿವಾರ್ಯ ಕಾರಣಗಳಿಂದ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ. ಕಲೆಯ ಗೀಳನ್ನು ಮೈಗೂಡಿಸಿಕೊಂಡು ಖ್ಯಾತ ಕಲಾವಿದರಾದ ಹನುಮಂತ ಭಟ್ಟ ಕಟಗೇರಿ ಹಾಗೂ ಮಳೆಪ್ಪ ಮಾಸ್ತರ ಸೋನಾರ ಇವರ ಶಿಷ್ಯಳಾಗಿ ರಂಗಭೂಮಿ ಕಲೆಯನ್ನು ತರಬೇತಿ ಪಡೆಯ ಹತ್ತಿದಳು. ಅವರ ಹತ್ತಿರ ಕುರುಕ್ಷೇತ್ರದಲ್ಲಿ ಉತ್ತಮ ಅಭಿನಯ ನೀಡಿ ಜನರಿಂದ ಭೇಷ್ ಎನಿಸಿಕೊಂಡರು. ಮುಂದೆ ತಮ್ಮ ಹದಿನಾರನೇಯ ವರ್ಷದಲ್ಲಿ ಲೋಕಾಪುರದ ಶ್ರೀಕೃಷ್ಣಪಾರಿಜಾತ ಕಲಾವಿದರಾದ ಶ್ರೀ ಲೋಕಯ್ಯ ಹೊಳಬಸಯ್ಯ ಗಣಾಚಾರಿ ಎಂಬುವವರಲ್ಲಿ ಪಾರಿಜಾತ ಹಾಗೂ ಸಂಗೀತ ತರಬೇತಿಯನ್ನು ಪಡೆದು ಪ್ರಥಮವಾಗಿ ಜಾನಪದ ರಂಗ ಭೂಮಿಯನ್ನು ಪ್ರವೇಶಮಾಡಿದರು. ನಂತರ ದಿವಸಗಳಲ್ಲಿ ಪಾರಿಜಾತ ಬಂಟನೆಂದು ಖ್ಯಾತಿ ಪಡೆದ ದಿ॥ ಕೃಷ್ಣಾಜಿ ದೇಶಪಾಂಡೆಯವರ ಮಾರ್ಗದರ್ಶನದಲ್ಲಿ ಶ್ರೀಕೃಷ್ಣ

ಪಾರಿಜಾತದ ಎಲ್ಲ ಪಾತ್ರಗಳನ್ನು ನಿರ್ವಹಿಸುವಷ್ಟು ಪಾಂಡಿತ್ಯವನ್ನು ಪಡೆದುಕೊಂಡರು. ಇಂತಹ ಒಬ್ಬ ಸಾಮಾನ್ಯ ಮಹಿಳೆ ಸಮಗ್ರವಾದಂತ ಪಾರಿಜಾತವನ್ನು ಕುರಿತು ಸರಳವಾಗಿ ಮಾತನಾಡಲು ಬರುವಂತೆ ತರಬೇತಿಗೊಳಿಸಲು ಇದರ ಹಿಂದೆ ದಿ॥ ಕೃಷ್ಣಾಜಿಯವರ ಶ್ರಮ ಬಹಳಷ್ಟಿದೆ ಎಂದು ಹೇಳಬಹುದು. ಜೊತೆಯಾಗಿಯೆ ಪಾರಿಜಾತದ ಸಂಗೀತವನ್ನು ತಾಳ, ಲಯದ ಅಭ್ಯಾಸ ಮಾಡಿದಳು. ಮುಂದೆ ಗೌಳಗಿತ್ತಿ, ನಾರದ, ಕೊರವಂಜಿ, ದೊರೆಸಾನಿ ಹಾಗೂ ಸತ್ಯಭಾಮಾ ಪಾತ್ರವನ್ನು ಉತ್ತಮವಾಗಿ ಅಭಿನಯಿಸುವ ಕಲೆಯ ಸಂಪಾದಿಸಿಕೊಂಡರು.

ದಿ ॥ ಕೃಷ್ಣಾಜಿ ದೇಶಪಾಂಡೆಯವರ ವಿಶೇಷ ಗುಣವೆಂದರೆ ಓದು–ಬರಹ ಬಾರದ ಹೆಣ್ಣು ಮಕ್ಕಳನ್ನು ಕಂಪನಿಗೆ ತಂದು ತರಬೇತಿಗೊಳಿಸಿ ಅವರಿಂದ ಶ್ರೀಕೃಷ್ಣನ ಪಾತ್ರ ಮಾಡಿಸಿ ತಾವು ಖುಷಿ ಪಡುವದು ಅವರ ಹವ್ಯಾಸವಾಗಿತ್ತು. ಅದೇ ರೀತಿ ಯಲ್ಲಮ್ಮನವರಿಗೆ ಶ್ರೀಕೃಷ್ಣ ಪಾತ್ರದ ತರಬೇತಿ ಕೊಟ್ಟು ಒಳ್ಳೆಯ ನಟಿಯನ್ನಾಗಿ ಮಾಡಲು ಪ್ರಯತ್ನಪಟ್ಟರು. ಅವರ ಕಲಿಕೆಯ ಎಲ್ಲ ಉಪಯೋಗವನ್ನು ಪಡೆದುಕೊಂಡ ಹಲವಾರು ಕಲಾವಿದರು ಇವರ ಕಂಪನಿಯಲ್ಲಿ ಬೆಳಕಿಗೆ ಬಂದವರಲ್ಲಿ ಯಲ್ಲವ್ವ ಒಬ್ಬರು. ಶ್ರೀಕೃಷ್ಣಪಾರಿಜಾತದಲ್ಲಿ ಬೇಕಾದ ಪಾತ್ರವನ್ನು ಕೊಟ್ಟರು. ನಿರರ್ಗಳವಾಗಿ ಅಭಿನಯಿಸುವ ಕಲೆಯನ್ನು ರೂಢಿಸಿಕೊಂಡು ಎಂತಹ ಪ್ರಾಪಂಚಿಕ ತೊಂದರೆ ಬಂದರೂ ಹೆದರದೆ ಕಲೆಗಾಗಿ ಜೀವನ ತತ್ವದಲ್ಲಿ ಮುಂದೆ ನಡೆದ ಕೆಲವೇ ಕೆಲವು ಮಹಿಳಾ ಕಲಾವಿದರಲ್ಲಿ ಯಲ್ಲವ್ವ ರೊಡ್ಡಪ್ಪನವರು ಒಬ್ಬರು ಎಂದು ಹೇಳಬಹುದು.

ಶ್ರೀಕೃಷ್ಣಪಾರಿಜಾತದಲ್ಲಿ ಬರುವ ಕೊರವಂಜಿಯ ಪಾತ್ರವನ್ನು ವಿಶೇಷವಾಗಿ ಅಭಿನಯಿಸುವ ಕಲೆಯನ್ನು ಪ್ರಬುದ್ಧವಾಗಿ ನಿರ್ವಹಿಸುವ ಕಲೆಯನ್ನು ರೂಢಿಸಿಕೊಂಡು ಕೊರವಂಜಿ ಭಾಗವನ್ನು ಸತತವಾಗಿ ೩ ದಿನಗಳವರೆಗೆ ಅಭಿನಯಿಸುವಷ್ಟು ವಿಷಯ ಸಂಗ್ರಹಣೆ ಯಲ್ಲವ್ವನವರಲ್ಲಿದೆ. ಇಂತಹ ಪರಿಪೂರ್ಣ ಕಲಾವಿದರಾಗಬೇಕಾದರೆ ಅದರ ಹಿಂದಿನ ಶ್ರಮ ಎಂತಹದು ಎಷ್ಟು ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಸುಮಾರು ೫೦ ವರ್ಷಗಳಿಂದ ಈ ಪಾರಿಜಾತ ಕಲೆ ಉಳಿವಿಗಾಗಿ ತಮ್ಮ ಜೀವಮಾನವಿಡಿ ಕರ್ತವ್ಯ ಮಾಡಿದ ನೆಮ್ಮದಿಯ ಬದುಕು ಇವರದು.

**ಪ್ರಶಸ್ತಿ** : ಇವರ ಅಭೂತ ಪೂರ್ವವಾದಂತ ಕಲೆಯನ್ನು ಕಂಡ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ೧೯೮೭ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿವೆ. ಇದು ಅಲ್ಲದೆ ಹಲವಾರು ಸಂಘ ಸಂಸ್ಥೆಗಳು ಕರೆದು ಸನ್ಮಾನಿಸಿವೆ.

**ಶ್ರೀಕೃಷ್ಣಪಾರಿಜಾತ ಕಲಿಸಿದ ವಿದ್ಯಾರ್ಥಿಗಳು** : ಆಧುನಿಕ ವಿದ್ಯುನ್ಮಾನಗಳಲ್ಲಿ ಸಿಕ್ಕು ಈ ಕಲೆ ನಶಿಸಬಾರದೆಂಬ ಮಹತ್ವಾಕಾಂಕ್ಷೆಯಿಂದ ಹಲವಾರು ಕಲಾವಿದರಿಗೆ ತರಬೇತಿಗೊಳಿಸಿದ ಕೀರ್ತಿ ಯಲ್ಲವ್ವನವರಿಗೆ ಸಲ್ಲುತ್ತದೆ. ಶಿಷ್ಯಬಳಗದಲ್ಲಿ ಪ್ರಮುಖ

ರಾದವರು. ಶ್ರೀಮತಿ ಪಾರವ್ವ ಮಾದರ, ಶ್ರೀಮತಿ ಶಾಂತವ್ವ ಜಾಲಿಕಟ್ಟಿ ಹಾಗೂ ದುರಗವ್ವ ಮಾದರ. ಇಂತಹ ಎಳೆಯ ಮಹಿಳಾ ಕಲಾವಿದರನ್ನು ಕಲೆಹಾಕಿ ಅವರಿಗೆ ತರಬೇತಿಗೊಳಿಸಿ ಅವರಿಂದ ಶ್ರೀಕೃಷ್ಣ ಪಾರಿಜಾತ ಮಾಡಿಸುತ್ತಾ ಜನರಿಗೆ ಮನಜಂಜನೆಯ ಜೊತೆಗೆ ಪಾರಿಜಾತ ಕಲೆ ಉಳಿವಿಗಾಗಿ ಸಾರ್ಥಕ ಪರಿಶ್ರಮ ಮಾಡುತ್ತಾ ನಡೆದಿದ್ದಾರೆ. ದಿ|| ಕೃಷ್ಣಾಜಿ ದೇಶಪಾಂಡೆಯವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಉತ್ತಮ ನಟಿಯಾಗಿ ಹೆಸರು ಮಾಡಿದರು. ಇಂತಹ ಶ್ರೇಷ್ಠ ಕಲಾವಿದಳಿಗೆ ಸರ್ಕಾರದಿಂದ ಸಿಗುವ ಸಹಾಯ ಸೌಲಭ್ಯಗಳು ದೊರೆಯಬೇಕು ಅಂದರೆ ಇನ್ನಷ್ಟು ಕೆಲಸ ಮಾಡಲು ಅನುಕೂಲವಾಗುತ್ತದೆ ಎಂಬುದು ಅವರ ಅನುಯಾಯಿಗಳ ಅಭಿಮತ. ಆ ನಿಟ್ಟಿನಲ್ಲಿ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕೆಂಬುದು ಯಲ್ಲವ್ವನವರ ಅಭಿಪ್ರಾಯವಾಗಿದೆ.

ಯಲ್ಲವ್ವ ರೊಡ್ಡಪ್ಪನವರ,
ಸಾ : ಲೋಕಾಪುರ (ಠಾಣಿಕೇರಿ),
ತಾ : ಮುಧೋಳ, ಜಿ : ಬಾಗಲಕೋಟೆ.

# ಮಲ್ಲಿಕಾರ್ಜುನ ರಾಚಪ್ಪ ಮುದಕವಿ

ಶ್ರೀಕೃಷ್ಣಪಾರಿಜಾತದ ಆಟದಲ್ಲಿ "೧೦೧ ಕೌರವರ ಹೆಸರು ಹೇಳತಾನ ಬಲು ಸ್ಯಾಣ್ಯಾ ಇದ್ದಾಂಗ ಅದಾನ" ಎಂದು ನಮ್ಮೂರಿನ ಹಿರಿಯರು ಮಾತನಾಡುತ್ತಿದ್ದರು. ೧೦೧ ಮಂದಿ ಕೌರವರ ಹೆಸರು ಹೇಳುವ ಭಾಗವತನೇ ಮುಧೋಳ ತಾಲೂಕಿನ ದಾದನಟ್ಟಿಯ ಮಲ್ಲಿಕಾರ್ಜುನ ಮುದಕವಿ.

ತಂದೆ ರಾಚಪ್ಪ, ತಾಯಿ ಬಸಲಿಂಗವ್ವ ಎಂಬವರ ಹೊಟ್ಟೆಯಲ್ಲಿ ಜನಿಸಿದ ಇವರು ಮಧ್ಯಮ ವರ್ಗದಲ್ಲಿ ಹುಟ್ಟಿ ಬೆಳೆದು ೯ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ಮುಂದೆ ಆಧ್ಯಾತ್ಮಿಕ ಒಲವುಳ್ಳ ಮಲ್ಲಿಕಾರ್ಜುನ ಅವರು ಶ್ರೀಕೃಷ್ಣನ ನಾಮಸ್ಮರಣೆಯಲ್ಲಿ ತೊಡಗಿದರು. ಸಗರಪ್ಪ ಮಾಸ್ತರ ಯಾದವಾಡ, ಯಲ್ಲಪ್ಪ ಹೆಳವರ, ತುಳಜಪ್ಪ ದಾಸರ ಇವರುಗಳನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು, ಸಂಪೂರ್ಣವಾಗಿ ಭಾಗವತದಲ್ಲಿ ಪರಿಣಿತರಾದರು. ಶ್ರೀ ಪಾಂಡುರಂಗ ಶ್ರೀಕೃಷ್ಣಪಾರಿಜಾತ ಕಂಪನಿ ದಾದನಟ್ಟಿ ಎಂಬ ಸಂಘಕಟ್ಟಿ ಆ ಸಂಘದ ಮೂಲಕ ಸುಮಾರು ಆರು ದಶಕಗಳಿಂದ ಕಲಾಸೇವೆ ಮಾಡುತ್ತಾ ಬಂದಿದ್ದಾರೆ. ಇಲ್ಲಿ ಕಲಾಸೇವೆಯಲ್ಲಿ ತೊಡಗಿದವರು ಈರಣ್ಣ ಬಡಿಗೇರ ಸಾ : ಉದಪುಡಿ ಕೃಷ್ಣ, ಮಲ್ಲಿಕಾರ್ಜುನ ಮುದಕವಿ, ಭೀಮಸಿ ಕಂಬಾರ ಭಾಗವತರಾಗಿ, ಸತ್ಯಭಾಮಾ, ಕೊರವಂಜಿ, ಗೌಳಗಿತ್ತಿ ಪಾತ್ರದಲ್ಲಿ ಶಾಂತಾ ದಾದನಟ್ಟಿ, ರುಕ್ಮಿಣಿ ದೊರೆಸಾನಿ ಪಾತ್ರದಲ್ಲಿ ಶಾರದಾ ಜಂಬಲಿ ಕಾಣಿಸಿಕೊಳ್ಳುತ್ತಿದ್ದು, ಸಂಗೀತಗಾರರಾಗಿ – ಕಮಲಸಾಬ ದಾದನಟ್ಟಿ– ಹಾರ್ಮೋನಿಯಂ ನುಡಿಸಿದರೆ ಹಣಮಂತ ಪೂಜಾರಿ ತಬಲಾ ಸಾತ ನೀಡುತ್ತಾರೆ. ಇಷ್ಟೆಲ್ಲ ಹಿರಿಯ ನುರಿತ ಕಲಾವಿದರನ್ನು ಸೇರಿಸಿಕೊಂಡು ೬ ದಶಕಗಳಿಂದ ಕಲಾಸೇವೆಯಲ್ಲಿ ತೊಡಗಿಕೊಂಡಿರುವ ಮಲ್ಲಿಕಾರ್ಜುನವರ ಪರಿಶ್ರಮ ಸಾರ್ಥಕವಾದದು.

ಪಾರಿಜಾತದ ಭಾಗವತರಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಹಲವಾರು ಶ್ರೀಕೃಷ್ಣಪಾರಿಜಾತ ಕಂಪನಿಗಳಿಗೆ ನಿರ್ದೇಶಕರಾಗಿ, ಮಾರ್ಗದರ್ಶಕರಾಗಿ ಸತತವಾಗಿ ಸೇವೆ

ಮಾಡುತ್ತಾ ಬಂದಿರುತ್ತಾರೆ. ಆಕಾಶವಾಣಿ ಧಾರವಾಡ ಹಾಗೂ ದೂರದರ್ಶನ ಬೆಂಗಳೂರದ ಕಲಾವಿದರಾದ ಇವರು ಹಲವಾರು ರಾಷ್ಟ್ರೀಯ ಉತ್ಸವಗಳಲ್ಲಿ ಭಾಗವಹಿಸಿ ಜನಪ್ರಿಯ ಕಲಾವಿದರೆನಿಸಿದ್ದಾರೆ. ಸಂಗೀತ ನಾಟಕ ಅಕಾಡೆಮಿ ನವದೆಹಲಿ ಇವರ ಆಶ್ರಯದಲ್ಲಿ ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ, ಮಣಿಪೂರ, ಚಂಡಿಗಡ, ಲೂಧಿಯಾನ, ಬಾಂಬೆ ಹೀಗೆ ರಾಷ್ಟ್ರದಾದ್ಯಂತ ಪಾರಿಜಾತದ ಕಂಪನು ಪಸರಿಸಿದ್ದಾರೆ. ಇಂತಹ ಪ್ರತಿಭಾವಂತ ಕಲಾವಿದನಿಗೆ ಪ್ರತಿಭಾವಂತ ಕಲಾವಿದರು ಸೇರಿಕೊಂಡು ಕಟ್ಟಿದ ಶ್ರೀಪಾಂಡುರಂಗ ಶ್ರೀಕೃಷ್ಣ ಕಂಪನಿಯ ದಾದನಟ್ಟಿಯ ಹೆಸರು ರಾಷ್ಟ್ರದಾದ್ಯಂತ ಪ್ರಸಾರಗೊಳ್ಳಲು ಕೃಷ್ಣ ನಾಮಸ್ಮರಣೆಯನ್ನು ಭಕ್ತಿಯಿಂದ ಮಾಡುವ ಇವರ ಸೇವೆ ಶ್ಲಾಘನೀಯ. ಇವರ ಮಹತ್ವಪೂರ್ಣ ಕಲಾಸೇವೆಯನ್ನು ಕಂಡು ಕಿತ್ತೂರ ಉತ್ಸವ, ನಾವಲಗಿ, ದಾದನಟ್ಟಿ ಹಾಗೂ ಹಲವಾರು ಗ್ರಾಮಗಳಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸಿದ್ದಾರೆ. ಇಷ್ಟು ಅಖಂಡ ಕಲಾಸೇವೆಯನ್ನು ಸಲ್ಲಿಸಿದ ಹಿರಿಯ ಕಲಾವಿದನಿಗೆ ಇನ್ನೂವರೆಗೂ ಯಾವುದೇ ಸರ್ಕಾರಿ ಪ್ರಶಸ್ತಿ ದೊರೆತಿರುವುದಿಲ್ಲ ಎಂಬುದು ಅವರ ಮನದ ಬಯಕೆಯಾಗಿದೆ. ನನ್ನ ಪರಿಶ್ರಮಕ್ಕೆ ಅಂತಹ ಪ್ರಶಸ್ತಿಗಳು ಸಿಗಬೇಕೆನ್ನುವದು ಅವರ ಆಸೆಯಾಗಿದೆ.

**ಮಲ್ಲಿಕಾರ್ಜುನ ಮುದಕವಿ**

**ಶ್ರೀ ಪಾಂಡುರಂಗ ಶ್ರೀಕೃಷ್ಣಪಾರಿಜಾತ ಸಂಘ,**

**ಸಾ : ದಾದನಟ್ಟಿ, ತಾ : ಮುಧೋಳ, ಜಿ : ಬಾಗಲಕೋಟೆ.**

## ಕಾಶಿಬಾಯಿ ದಾದನಟ್ಟಿ (ಭೂತಪ್ಪ ಗೋಳ)

ಉತ್ತರ ಕರ್ನಾಟಕದ ಪ್ರಸಿದ್ಧ ರಂಗ ಕಲೆಯಾದ ಶ್ರೀಕೃಷ್ಣಪಾರಿಜಾತದ ಪ್ರಸಾರ ಹಾಗೂ ಆ ಕಲೆ ಬೆಳವಣಿಗೆಗೆ ತಮ್ಮ ಜೀವನವನ್ನೆ ಮುಡುಪಾಗಿಟ್ಟವರು ಹಲವಾರು ಜನ. ಅಂತಹವರಲ್ಲಿ ಒಬ್ಬರು ಕಾಶಿಬಾಯಿ ದಾದನಟ್ಟಿ.

ಮೂಲತಃ ಮುಧೋಳ ತಾಲೂಕಿನ ದಾದನಟ್ಟಿಯ ಯಮನಪ್ಪ ರಾಣವ್ವ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು. ಕಿತ್ತು ತಿನ್ನುವ ಬಡತನದಲ್ಲಿ ಹುಟ್ಟಿದ ಕಾಶಿಬಾಯಿಗೆ ಶಿಕ್ಷಣ ಎಲ್ಲಿಂದ ದೊರೆಯಬೇಕು. ಶ್ರೀಮಂತರ ಮನೆಯ ದನಕಾಯುತ್ತ ತಿರುಗಾಡಿದಳು. ಇವಳಲ್ಲಿ ಇದ್ದ ಸಂಗೀತ ಕಲಿಯುವ ಗೀಳು ನೋಡಿಕೊಂಡು ಊರಿನ ಹಿರಿಯರು ಪಾರಿಜಾತ ಕಲಾವಿದರಾದ ಸಿದ್ಧಪ್ಪ ಕೃಷ್ಣಗೌಡರ ಇವರಿಗೆ ಪ್ರೋತ್ಸಾಹ ನೀಡಿದರು. ಅವರು ಹೇಳಿಕೊಟ್ಟ ಹಾಡುಗಳನ್ನು ಲಯಬದ್ಧವಾಗಿ ಹಾಡಿ ಅವರಿಂದ ಮೆಚ್ಚುಗೆ ಗಳಿಸಿಕೊಂಡು ಇವರ ತಂದೆ ತಾಯಿಯವರು ಅಪ್ಪಣೆ ಪಡೆದುಕೊಂಡು ಶ್ರೀಕೃಷ್ಣಪಾರಿಜಾತ ಕಲಿಸಲು ಪ್ರಾರಂಭಿಸಿದರು. ಇವರ ಶ್ರದ್ಧೆ ಆಸಕ್ತಿ ಇವರನ್ನು ದಿನದಿಂದ ದಿನಕ್ಕೆ ಎತ್ತರ ಮಟ್ಟಕ್ಕೆ ಕರೆದೊಯ್ದಿತು. ಸಿದ್ಧಪ್ಪ ಕೃಷ್ಣಗೌಡರ ಕಂಪನಿಯಲ್ಲಿ ಗೌಳಗಿತ್ತಿ ಹಾಗೂ ರುಕ್ಮಿಣಿ ಪಾತ್ರನಿರ್ವಹಿಸಿ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ನಂತರ ಈ ಕಂಪನಿ ನಿಂತು ಹೋದಾಗ ಮಲಗಡ್ಡಿಯ ಪಾರಿಜಾತ ಕಂಪನಿಗೆ ಹೋಗಿ ಅಲ್ಲಿಯೂ ಕೆಲ ದಿನ ಪಾತ್ರಗಳನ್ನು ನಿರ್ವಹಿಸಿದರು.

ಕೃಷ್ಣ ಪರಿಜಾತಕ್ಕೆ ಹೊಸರಂಗ ತಂದ ಹಿರಿಯ ಕಲಾವಿದರಾದ ದಿ॥ ಕೃಷ್ಣಾಜಿ ದೇಶಪಾಂಡೆಯವರ ಕಂಪನಿಯಲ್ಲಿ ಸೇರಿಕೊಂಡು ಅಲ್ಲಿ ಬಹಳಷ್ಟು ಕಲಿತುಕೊಂಡಳು. ಸುಮಾರು ಎಂಟು ವರ್ಷಗಳ ಕಾಲ ಈ ಕಂಪನಿಯಲ್ಲಿ ಪಾತ್ರ ನಿರ್ವಹಿಸಿದರು. ಮುಂದೆ ಕೌಜಲಗಿ ನಿಂಗಮ್ಮ ಕಂಪನಿಯಲ್ಲಿ ಎಂಟು ವರ್ಷಗಳ ಕಾಲ ಸೇವೆ ಸಲ್ಲಿಸಿ ಶ್ರೀಕೃಷ್ಣಪಾರಿಜಾತ

ಎಲ್ಲ ಹೊಳವುಗಳನ್ನು ತಿಳಿದುಕೊಂಡಳು. ಮುಂದೆ ಮಹಾಲಿಂಗಪೂರದ ರತ್ನಪ್ಪಾ ಮಂಟೂರ ಎಂಬುವವರ ತಂಡದಲ್ಲಿ ಸೇವೆಸಲ್ಲಿಸಿದಳು. ಈ ಎಲ್ಲ ತಂಡಗಳಲ್ಲಿ ಸುತ್ತಾಡಿ ತಂಡದ ಏಳು ಬೀಳುಗಳ ಬಗ್ಗೆ ಕಲಾವಿದರ ನೋವು-ನಲಿವುಗಳನ್ನುಂಡು ಬೆಳೆದ ಕಾಶಿಬಾಯಿ ದಾದನಟ್ಟಿ ೧೯೯೪ರಲ್ಲಿ ತನ್ನದೇ ಆದ ಶ್ರೀ ಮಂಜನಾಥ ಪಾರಿಜಾತ ಮಂಡಳಿ ದಾದನಟ್ಟಿ ಎಂಬ ಕಂಪನಿ ಪ್ರಾರಂಭಿಸಿ ಈ ತಂಡದ ಮೂಲಕ ನಾಡಿನಾದ್ಯಾಂತ ಕಲಾಸೇವೆಯಲ್ಲಿ ತೊಡಗಿದ್ದಾರೆ.

ಎತ್ತರ ನಿಲುವು ಹೊಂದಿದ ಕಾಶಿಬಾಯಿ ದಾದನಟ್ಟಿ ಬಣ್ಣ ಬಡೆದು ರಂಗಪ್ರವೇಶ ಮಾಡಿ ಸತ್ಯಭಾಮೆಯ ಪಾತ್ರ ನಿರ್ವಹಿಸಿದರು. ನೋಡುಗರು ಚಪ್ಪಾಳೆ ತಟ್ಟಬೇಕು. ಪಾತ್ರಕ್ಕೆ ತಕ್ಕಂತೆ ಅಭಿನಯ, ಸಂಭಾಷಣೆ, ಹಾಡುಗಾರಿಕೆಯನ್ನು ಮೈಗೂಡಿಸಿಕೊಂಡಿರುವ ಕಾಶಿಬಾಯಿಯ ಸತ್ಯಭಾಮೆಯ ಪಾತ್ರದ ಅಭಿನಯವನ್ನು ಮೆಚ್ಚದವರಾರಿಲ್ಲ. ಓದು ಬರಹ ಬಾರದ ಒಬ್ಬ ಹೆಣ್ಣು ಮಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆದಿರುವುದು ಅವರ ಸ್ವಪ್ರಯತ್ನದಿಂದ ಎಂಬುದು ಹೆಮ್ಮೆಯಿಂದ ಹೇಳಬೇಕು.

ಹಲವಾರು ಹಿರಿಯ ಪಾರಿಜಾತ ಕಲಾವಿದರು ಮಾರ್ಗದರ್ಶನ ಮಾಡಿದ್ದನ್ನು ಸ್ಮರಿಸಿಕೊಂಡು ಕಾಶಿಬಾಯಿ ಸಾಧನೆಯ ಹಾದಿಯಲ್ಲಿ ನಡೆದು, ಇತರೆ ಮಹಿಳಾ ಕಲಾವಿದರಿಗೆ ಮಾದರಿಯಾಗಿದ್ದಾರೆ. ಸುಮಾರು ಐದು ದಶಕಗಳ ಕಾಲದಲ್ಲಿ ಸುಮಾರು ೧೫,೦೦೦ ಪ್ರಯೋಗಗಳನ್ನು ಮಾಡಿ ಹಲವಾರು ಸಲ ಇವರು ರೇಡಿಯೋ ಹಾಗೂ ದೂರದರ್ಶನದಲ್ಲಿ ಇವರ ಪಾರಿಜಾತಗಳು ಪ್ರಸಾರವಾಗಿವೆ ಮತ್ತು ಧ್ವನಿಸುರುಳಿಗಳು ಬಿಡುಗಡೆಗೊಂಡಿವೆ.

**ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿ :** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಸದಸ್ಯರಾಗಿ ಜಿಲ್ಲೆಯ ಕಲಾವಿದರಿಗೆ, ಸಹಾಯ-ಸಹಕಾರ ಹಾಗೂ ಬೆಳವಣಿಗೆಗೆ ಪ್ರೋತ್ಸಾಹಿಸಿದ್ದಾರೆ.

**ಪ್ರಶಸ್ತಿ-ಪುರಸ್ಕಾರಗಳು :** ಇವರ ಅಖಂಡ ಕಲಾ ಸೇವೆಯನ್ನು ಕಂಡು ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರು ೧೯೯೦ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದ್ದಾರೆ. ೧೯೯೪ರಲ್ಲಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ೨೦೦೨ ರಲ್ಲಿ ಜಾನಪದ ಲೋಕ ಪ್ರಶಸ್ತಿ ೨೦೦೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರು ಕೊಡಮಾಡುವ ರಾಜ್ಯ ಜಾನಪದ ಕಲಾವಿದೆ ಪ್ರಶಸ್ತಿ ಮತ್ತು ೨೦೦೭ರಲ್ಲಿ ಡಾ. ಬಾಬು ಜಗಜೀವನರಾಮ್ ಪ್ರಶಸ್ತಿಗಳು ಲಭಿಸಿದ್ದು ಇಷ್ಟಲ್ಲದೆ ಹಲವಾರು ಸಂಘ ಸಂಸ್ಥೆಗಳು ಹಲವಾರು ಬಿರುದುಗಳನ್ನು ನೀಡಿ ಪುರಸ್ಕರಿಸಿ, ಪ್ರೋತ್ಸಾಹಿಸಿ ಹುರುಪು ತುಂಬಿವೆ.

**ಕಾಶಿಬಾಯಿ ಯ. ಮಾತಪ್ಪಗೋಳ,**

**ಸಾ : ದಾದನಟ್ಟಿ, ತಾ : ಮುಧೋಳ, ಜಿ : ಬಾಗಲಕೋಟೆ.**

## ಕಮಲವ್ವಾ ರಾ. ಜಾನಪ್ಪಗೋಳ

ಲೋಕಾಪುರ ಪಟ್ಟಣದ ಸುತ್ತ ಮುತ್ತಲಿನ ಪರಿಸರ ಶ್ರೀಕೃಷ್ಣಪಾರಿಜಾತಕ್ಕೆ ಉತ್ತಮವಾದ ಪರಿಸರವನ್ನುಂಟು ಮಾಡಿದ ಪ್ರದೇಶ. ಇಂತಹ ಒಂದು ಶ್ರೇಷ್ಠವಾದ ವಾತಾವರಣದಲ್ಲಿ ಬೆಳೆದವಳು ಕಮಲವ್ವಾ ಜಾನಪ್ಪಗೋಳ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮೆಟಗುಡ್ಡ ಎಂಬ ಪುಟ್ಟ ಗ್ರಾಮದಲ್ಲಿ ೧-೬-೧೯೪೧ರಲ್ಲಿ ಕಮಲಮ್ಮ ಜನಿಸಿದಳು. ಕಿತ್ತು ತಿನ್ನುವ ಕುಟುಂಬದಲ್ಲಿ ಹುಟ್ಟಿ ಕಮಲವ್ವನಿಗೆ ವಿದ್ಯೆಕಲಿಸುವದು ಅಸಾಧ್ಯವಾಗಿತ್ತು. ಕೂಲಿಮಾಡಿ ಜೀವನ ನಡೆಸುವ ಕುಟುಂಬಕ್ಕೆ ವಿದ್ಯಾಭ್ಯಾಸದ ಸುದ್ದಿಗೆ ಹೋಗದೆ ಜೀವನ ನಡೆಸುತ್ತಿರುವಾಗ ಬಾಲಕಿ ಕಮಲವ್ವನನ್ನು ಈ ಗ್ರಾಮೀಣ ಕಲೆಗಳು ಆಕರ್ಷಿಸಿದವು. ಈ ಮನಸ್ಸಿನ ಆಸೆಗೆ ಇಂಬು ನೀಡಿದ ಕಮಲವ್ವ ತಂದೆ-ತಾಯಿಗಳು ನಿಂಗಾಪೂರದ ಮಲ್ಲಪ್ಪ ಮಾಸ್ತರರ ಹತ್ತಿರ ರಂಗ ತರಬೇತಿ ಪಡೆಯುವಂತೆ ಅನುಕೂಲ ಮಾಡಿಕೊಟ್ಟರು. ಅವರಲ್ಲಿ ಸಂಗ್ಯಾ-ಬಾಳ್ಯಾ ಮತ್ತು ಶ್ರೀಕೃಷ್ಣಪಾರಿಜಾತದಲ್ಲಿ ಬರುವ ವಿವಿಧ ಸ್ತ್ರೀ ಪಾತ್ರಗಳ ಕುರಿತು ಅಭ್ಯಸಿಸಿ ಪರಿಪೂರ್ಣತೆಯನ್ನು ಪಡೆದುಕೊಂಡಳು. ಅಂದಿನ ಕಾಲ ಒಂದಿತ್ತು, ಅಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಸಮಾಜ ಎಲ್ಲ ಅವಹೇಳನಗಳನ್ನು ಸಹಿಸಿಕೊಂಡು ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಂಗ್ಯಾ ಬಾಳ್ಯಾನ ಆಟದಲ್ಲಿ ಗಂಗೆಯ ಪಾತ್ರಕ್ಕೆ ಕಳೆ ತುಂಬಿದರೆ, ಶ್ರೀಕೃಷ್ಣಪಾರಿಜಾತದಲ್ಲಿ ರುಕ್ಮಿಣಿ, ಗೊಲ್ಲತಿ ಪಾತ್ರ ನಿರ್ವಹಣೆಯನ್ನು ನೋಡಿ ಸಂತೋಷಪಡದ ಜನರಿಲ್ಲ. ಇಂದಿಗೂ ಹಳ್ಳಿಜನಾ ಗೊಲ್ಲತಿ ಪಾತ್ರ ಮಾಡಿದರ ಮೆಟಗುಡ್ಡ ಕಮಲವ್ವ ನಂಗ ಮಾಡಬೇಕು ಎಂದು ಮಾತನಾಡಿಕೊಳ್ಳುತ್ತಾರೆ. ಸ್ವತಃ ಕಂಪನಿ ಕಟ್ಟಿ, ಆ ಕಂಪನಿ ಮೂಲಕ ಕಲಾ ಸೇವೆಯನ್ನು ಮಾಡಿ ಹೆಸರು ಗಳಿಸಿದ ಕಮಲವ್ವನ ಅಭಿನಯದ ಪಾರಿಜಾತ ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ಹಲವಾರು ಹಲ ಪ್ರಸಾರಗೊಂಡಿವೆ. ಅಭಿನಯದ ಗೀಳು ಅಂಟಿಸಿಕೊಂಡ ಇವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ವಿಶ್ವವಿದ್ಯಾಲಯಗಳು ಹಮ್ಮಿಕೊಂಡ ರಂಗೋತ್ಸವ, ಕಲಾಮೇಳ, ಜಾನಪದ ಸಂಭ್ರಮಗಳಂತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಕಲಾಪ್ರಭುತ್ವವನ್ನು ಪ್ರೇಕ್ಷಕರಿಗೆ ತೋರಿಸಿದ್ದಾರೆ. ತಮ್ಮ ಇಡಿ ಜೀವನವನ್ನು ಈ ಕಲೆಗಾಗಿ ಸವೆಸಿದ ಕಮಲವ್ವ ಈ ಕಲೆ ಉಳಿಯಬೇಕು, ಬೆಳೆಯಬೇಕೆಂಬ ಹಿರಿಯಾಸೆಯಿಂದ ಹಲವಾರು ಯುವಕಲಾವಿದರಿಗೆ ರಂಗ ತರಬೇತಿ ನೀಡುವುದರ ಮೂಲಕ ಜಾನಪದ ಕಲೆ ಉಳಿವಿಗಾಗಿ ಶ್ರಮಿಸುತ್ತಿರುವ ಕಮಲವ್ವನ ಕಲಾ ಪ್ರೌಢಿಮೆ ನೋಡಿ ಹಲವಾರು ಸಂಘ ಸಂಸ್ಥೆಗಳು ಸತ್ಕರಿಸಿವೆ. ಬಾಗಲಕೋಟೆ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪುರಸ್ಕರಿಸುವುದಲ್ಲದೆ ೨೦೦೬ನೆ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಪ್ರಶಸ್ತಿ ನೀಡಿ ಸನ್ಮಾನಿಸಿದ್ದಾರೆ. ಈ ಪ್ರತಿಭಾನ್ವಿತ ಕಲಾವಿದೆಗೆ ಇನ್ನಷ್ಟು ಅವಕಾಶಗಳು ದೊರೆಯ ಬೇಕೆಂಬುದು ಅವರ ಹಿರಿಯಾಸೆ ಆಗಿದೆ.

ಕಮಲವ್ವಾ ರಾ. ಜಾನಪ್ಪಗೋಳ,
ಸಾ : ಮೆಟಗುಡ್ಡ,
ತಾ : ಮುಧೋಳ, ಜಿ : ಬಾಗಲಕೋಟೆ.

# ಲಕ್ಷ್ಮಣ ತಮ್ಮಣಪ್ಪ ಅಗಸರ

ಶ್ರೀಕೃಷ್ಣಪಾರಿಜಾತಕ್ಕೆ ಜಮಖಂಡಿ ಪರಿಸರ ಕೊಡುಗೆ ಅಪಾರವಾದುದು ಅದರೊಟ್ಟಿಗೆ ಶ್ರೇಷ್ಠಕಲಾವಿದರನ್ನು ಬೆಳೆಸಿದ ಕೀರ್ತಿ ಇಲ್ಲಿಯ ಜನರಿಗೆ ಸೇರುತ್ತದೆ. ಅಂತಹ ಹಿರಿಯ ಕಲಾವಿದರಲ್ಲಿ ಲಕ್ಷ್ಮಣ ಅಗಸರ ಒಬ್ಬರು.

ತಾಲೂಕಿನ ನಾವಲಗಿ ಗ್ರಾಮದ ತಮ್ಮಣ್ಣಪ್ಪ ಹಾಗೂ ಹನಮವ್ವ ಎಂಬ ಕಾಯಕ ಜೀವಿಗಳ ಉದರದಲ್ಲಿ ೧೯೪೩ರಲ್ಲಿ ಲಕ್ಷ್ಮಣ ಜನಿಸಿದರು. ನಾವಲಗಿ ಜಾನಪದ ಕಲೆಗಳ ತವರೂರು ಎಲ್ಲ ಕಲಾ ಪ್ರಕಾರಗಳು ಇಲ್ಲಿ ನಮಗೆ ಹೇರಳವಾಗಿ ದೊರೆಯುತ್ತವೆ. ಕನ್ನಡ ೪ನೇ ತರಗತಿಯವರೆಗೆ ಓದಿದ ಇವರನ್ನು ಆಕರ್ಷಣೆ ಮಾಡಿಕೊಂಡಿದ್ದು ಶ್ರೀಕೃಷ್ಣ ಪಾರಿಜಾತ. ಶ್ರೀ ಪಾಂಡಪ್ಪ ಬಡಿಗೇರ, ಸಾ: ನಾವಲಗಿ ಇವರು ಲಕ್ಷ್ಮಣರಿಗೆ ಕಲಾಗುರುವಾಗಿ ಮಾರ್ಗದರ್ಶನ ಮಾಡಿದರು. ಮೊದಮೊದಲು ಸ್ತ್ರೀಪತ್ರಗಳಲ್ಲಿ ಅಭಿನಯಿಸಿ ನಂತರದ ದಿನಗಳಲ್ಲಿ ಕೃಷ್ಣನ ಪಾತ್ರ ನಿರ್ವಹಿಸುತ್ತಾ ಹೆಸರು ಮಾಡಿದರು. ಮಾರುತೆಪ್ಪ ಪೆಟ್ಲೂರ್ ಹಾಗೂ ದಿ॥ ಚನ್ನಪ್ಪ ಪಟ್ಟಣಶೆಟ್ಟಿಯವರ ಶ್ರೀಕೃಷ್ಣ ಪಾರಿಜಾತ ಕಂಪನಿಯಲ್ಲಿ ಸೇವೆಸಲ್ಲಿಸಿ ಹೆಸರು ಮಾಡಿದರು.

ಶ್ರೀ ಶಂಕರಾನಂದ ಪರಮಹಂಸ ಶ್ರೀಕೃಷ್ಣಪಾರಿಜಾತ ಸಂಘ ನಾವಲಗಿ ಈ ತಂಡದ ಮೂಲಕ ನಾಡಿನ ತುಂಬೆಲ್ಲ ಸಂಚರಿಸಿ ಕಲಾ ಸೇವೆ ಮಡಿದರು. ಮಹಾರಾಷ್ಟ್ರದಲ್ಲಿ ತಿಕೇಟು ಹಚ್ಚಿ ಆಟ ಆಡಿದ ಕೀರ್ತಿ ಇವರದು. ಇವರ ಶ್ರೀಕೃಷ್ಣ ಪಾತ್ರದ ಅಭಿನಯ ಕಂಡು ಹಲವಾರು ಜನ ಗಣ್ಯರು, ವಿದ್ವಾಂಸರುಗಳು ಬೆರಗಾಗಿದ್ದಾರೆ. ಅಂತಹ ಕಂಠ ಮಾಧುರ್ಯ, ಪಾತ್ರಕ್ಕೆ ತಕ್ಕಂತ ಮೈಮಾಟಹೊಂದಿ ಕಂಪನಿಯ ಮುಮ್ಮೇಳ ಮತ್ತು ಹಿಮ್ಮೇಳಗಳನ್ನು ಸರಳವಾಗಿ ಜಗ್ಗಿಕೊಂಡು ಹೋಗುವ ಕಲೆ ಇವರಲ್ಲಿದೆ. ಸುಮಾರು ೪೦ ವರ್ಷಗಳ ಕಾಲ ಶ್ರೀಮಾರುತೆಪ್ಪ ಪೆಟ್ಲೂರ್ ಇವರ ಕಂಪನಿಯಲ್ಲಿ ಕಲಾಸೇವೆಗೈದು

ಚಾಲುಕ್ಯ ಉತ್ಸವ, ಮೈಸೂರ, ದಸರಾ ಉತ್ಸವ, ಹಂಪಿ ಉತ್ಸವ, ನವರಸಪುರ ಉತ್ಸವಗಳಲ್ಲಿ ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ಇವರ ಅಭಿನಯದ ಶ್ರೀಕೃಷ್ಣಪಾರಿಜಾತ ಹಲವಾರು ಸಲ ಪ್ರಸಾರಗೊಂಡಿವೆ.

ಒಕ್ಕಲುತನವನ್ನೆ ನಂಬಿ ಅದೇ ವೃತ್ತಿಯಲ್ಲಿ ಸುಖ ಕಂಡ ಲಕ್ಷ್ಮಣ ಪ್ರವೃತ್ತಿಯಿಂದ ಶ್ರೀಕೃಷ್ಣ ಪಾರಿಜಾತ ಕಲಾವಿದರಾಗಿ ಈ ಕಲೆಯ ಬಗ್ಗೆ ವಿಶೇಷವಾದಂತಹ ಕಾಳಜಿ ಹೊಂದಿದ ಪರಿಶ್ರಮಿ. ಹಲವಾರು ಯುವ ಕಲಾವಿದರುಗಳನ್ನು ತರಬೇತಿಗೊಳಿಸಬೇಕೆಂಬ ಹಂಬಲ ಇವರದಾಗಿದ್ದರೂ ಈ ಹಂಬಲಕ್ಕೆ ಇಂಬು ಕೊಡುವ ಮನಸ್ಸುಗಳ ಕೊರತೆ ಇದೆ ಎಂದು ಹಪಹಪಿಸುತ್ತಾ ತಮ್ಮ ನಿವೃತ್ತಿ ಜೀವನವನ್ನು ಸುಖಮಯವಾಗಿ ಕಳೆಯುತ್ತಾ, ಹಿಂದಿನ ದಿನಗಳನ್ನು ಮೆಲಕು ಹಾಕುತ್ತ ಜೀವನ ಕಳೆಯುತ್ತಿದ್ದಾರೆ. ಇವರ ಕಲಾಸೇವೆಗೆ ಪ್ರೋತ್ಸಾಹ ವೆಂಬಂತೆ ಶ್ರೀಬಸವೇಶ್ವರ ಕಲಾ ಕೇಂದ್ರ ನಾವಲಗಿ, ಪಾರಿಜಾತೋತ್ಸವಗಳಲ್ಲಿ ಸನ್ಮಾನಿಸಿದ್ದಾರೆ. ಇಂತಹ ಹಿರಿಯ ಕಲಾವಿದ ರಾಜ್ಯ ಸರ್ಕಾರ ಕೊಡಮಾಡುವ ಮಾಸಾಶನ ಪಡೆದು ಇದ್ದುದರಲ್ಲಿಯೇ ಸಂತೃಪ್ತರಾಗಿ ಕಾಲಕಳೆಯುತ್ತಿದ್ದಾರೆ.

ಲಕ್ಷ್ಮಣ ತಮ್ಮಣಪ್ಪ ಅಗಸರ,
ಸಾ : ನಾವಲಗಿ,
ತಾ : ಜಮಖಂಡಿ, ಜಿ : ಬಾಗಲಕೋಟೆ.

## ಕಲ್ಲಪ್ಪ ಚೆನ್ನಪ್ಪ ಪಟ್ಟಣಶೆಟ್ಟಿ

"ನೋಡಿರೋ ಬಲಭೀಮನ" ಎಂಬ ಪದ ಹಾಡುತ್ತಾ ಕೈಯಲ್ಲಿ ಕಂಚಿನ ತಾಳ ಹಿಡಿದು ರಂಗ ಪ್ರವೇಶ ಮಾಡಿದರೆ, ಪ್ರೇಕ್ಷಕರ ಮೈಮನಸ್ಸುಗಳಲ್ಲಿ ಆನಂದ ತುಂಬಿ ತುಳುಕುವಂತೆ ಮಾಡುವ ಮಹಾ ಮೋಡಿಕಾರ ಕಲ್ಲಪ್ಪ ಪಟ್ಟಣಶೆಟ್ಟಿ.

ಜಮಖಂಡಿ ತಾಲೂಕಿನ ನಾವಲಗಿ ಎಲ್ಲ ಜಾನಪದ ಕಲೆಗಳ ತವರೂರ ಇಂತಹ ಪರಿಸರದ ಕಲಾವಿದರಾದ ಚೆನ್ನಪ್ಪ ಮತ್ತು ಅಲ್ಲವ್ವ ಎಂಬ ದಂಪತಿಗಳ ಜೇಷ್ಠ ಸುಪುತ್ರರಾಗಿ ೧೯೩೩ರಲ್ಲಿ ನಾವಲಗಿಯಲ್ಲಿ ಜನಿಸಿದರು. ಮಧ್ಯಮವರ್ಗದಲ್ಲಿ ಜನಿಸಿದ ಇವರು ಸ್ಥಳೀಯ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿಕೊಂಡರು. ನಾವಲಗಿಯಲ್ಲಿದ್ದ ಕಲೆಗಳು ಇವರನ್ನು ಆಕರ್ಷಣೆ ಮಾಡಹತ್ತಿದವು. ಅದರ ಜೊತೆಗೆ ಕಲಾವಿದರಾದ ತಂದೆಯವರ ಸಹಕಾರ ದೊರೆಯಿತು. ಮೊದಮೊದಲು ಭಜನೆ, ಹಂತಿ ಪದ, ಹೋಳಿ ಪದಗಳನ್ನು ಹಾಡುತ್ತಾ ಹಾಡುಗಾರಿಕೆಯಲ್ಲಿ ಹಿಡಿತ ಸಾಧಿಸಿಕೊಂಡು, ಶಿವಲಿಂಗಪ್ಪ ಸಣ್ಣ ತಮ್ಮಪ್ಪ ಕಂಪೂ ಸಾ : ನಾವಲಗಿ ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಶ್ರೀಕೃಷ್ಣಪಾರಿಜಾತದ ಭಾಗವತರಾಗಿ ಅಭ್ಯಾಸ ಮಾಡತೊಡಗಿದರು. ಇವರಲ್ಲಿ ಅಭ್ಯಾಸ ಮಾಡಿಕೊಂಡು ಮುಂದಿನ ವ್ಯಾಸಂಗಕ್ಕೆಂದು ದಿ|| ಕೃಷ್ಣಾಜಿ ದೇಶಪಾಂಡೆ ಸಾ : ಲೋಕಾಪೂರ ಇವರಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮುಗಿಸಿಕೊಂಡು ೧೯೭೨ ರಿಂದ ಶ್ರೀ ಹನುಮಾನ ಶ್ರೀಕೃಷ್ಣ ಪಾರಿಜಾತ ಸಂಘ ನಾವಲಗಿ ಎಂಬ ಕಂಪನಿ ಕಟ್ಟಿ ಎಲ್ಲ ಹೊಸ ಯುವಕ-ಯುವತಿಯರಿಗೆ ತರಬೇತಿಗೊಳಿಸಿದರು.

ಶ್ರೀಕೃಷ್ಣನ ಪಾತ್ರದಲ್ಲಿ ಲಕ್ಷ್ಮಣ ಸೊರಗಾಂವಿ ಇವರು ಕಾಣಿಸಿಕೊಂಡರೆ ಭಾಗವತರಾಗಿ ಕಲ್ಲಪ್ಪ ಪಟ್ಟಣಶೆಟ್ಟಿ ಇವರು ಅಭಿನಯಿಸುತ್ತಾರೆ. ಕೊರವಂಜಿ, ಸತ್ಯಭಾಮೆಯಾಗಿ ಚಂದ್ರವ್ವ ಗುಡ್ಲಮನಿ ರಂಗ ಪ್ರವೇಶಿಸಿದರೆ, ನಾರದ ದೊರೆಸಾನಿ,

ರುಕ್ಮಿಣಿಯಾಗಿ ಕಸ್ತೂರಿ ರಗಪ್ಪಗೋಳ ಕಾಣಿಸಿಕೊಳ್ಳುತ್ತಾರೆ. ಸಂಗೀತಗಾರರಾಗಿ ಗಿರಿಮಲ್ಲಯ್ಯ ಮಠಪತಿ, ಶಂಕರ ಪಟ್ಟಣಶೆಟ್ಟಿ ಹಾಗೂ ಶ್ರೀಶೈಲ ಪಟ್ಟಣಶೆಟ್ಟಿ ಸಾತ್ ನೀಡುತ್ತಾರೆ. ಸುಮಾರು ನಾಲ್ಕು ದಶಕಗಳಿಂದ ಕಲೆಗಾಗಿ ಜೀವ ಸವೆಸಿದ ಈ ಹಿರಿಯ ಕಲಾವಿದರಿಗೆ ಹಲವಾರು ತೊಂದರೆ ಬಂದರೂ ಹೆದರದೆ ಎಲ್ಲ ತಂಡವನ್ನು ಧೈರ್ಯದಿಂದ ಮುನ್ನುಗ್ಗಿ ಮುಂದೆ ಬಂದಿದ್ದಾರೆ. ಸುಮಾರು ೮೦೦೦ ಪ್ರಯೋಗ ಕಂಡ ಈ ತಂಡ ದೇಶದ ವಿವಿಧ ಭಾಗಗಳಲ್ಲಿ ಸೇವೆಸಲ್ಲಿಸಿ ಎಲ್ಲ ಪ್ರೇಕ್ಷಕರ ಮನಸ್ಸು ಸೂರೆಗೊಂಡಿದ್ದಾರೆ. ತಂಡದಲ್ಲಿರುವ ಎಲ್ಲ ಕಲಾವಿದರು ನನ್ನ ತಮ್ಮಂದಿರು ಹಾಗೂ ತಂಗಿಯರು ಎಂಬ ಭಾವದಿಂದ ಅವರ ಆಗು ಹೋಗುಗಳನ್ನು ನೋಡಿಕೊಂಡು ಹೋಗುತ್ತಾರೆ. ರಾಷ್ಟ್ರೀಯ ಉತ್ಸವಗಳಾದ ಚಾಲುಕ್ಯ ಉತ್ಸವ, ಮೈಸೂರ ದಸರಾ, ಹಂಪಿ ಉತ್ಸವಗಳಲ್ಲಿ ತಮ್ಮ ಕಲಾ ಸೇವೆಯನ್ನು ಮಾಡಿದ್ದು ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಇವರ ಪಾರಿಜಾತ ಹಲವಾರು ಸಲ ಪ್ರಸಾರಗೊಂಡಿವೆ.

**ಪುರಸ್ಕಾರಗಳು :** ಶ್ರೀಕೃಷ್ಣಪಾರಿಜಾತದ ಜಿಲ್ಲೆಯ ಹಿರಿಯ ಕಲಾವಿದರಲ್ಲಿ ಇವರು ಒಬ್ಬರು ಅವರ ಕಲಾಪ್ರತಿಭೆಯನ್ನು ನೋಡಿ ರಂಗಭಾರತಿ ಹೂವಿನ ಹಡಗಲಿ, ಭೂಮಿಬಳಗ ಜಿಲ್ಲಾ ಘಟಕ ಬಿಜಾಪೂರ ಹಾಗೂ ಜಿಲ್ಲಾ ಆಡಳಿತ ಬಾಗಲಕೋಟೆ, ನಾಟಕ ಅಕಾಡೆಮಿ ಬೆಂಗಳೂರು ಇವರು ಸನ್ಮಾನಿಸಿ ಪುರಸ್ಕರಿಸಿರುವುದಲ್ಲದೆ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಆದರೆ ಇನ್ನೂವರೆಗೆ ಸರ್ಕಾರದ ಪ್ರಶಸ್ತಿಗಳು ಬಾರವು. ಇದು ಅವರಿಗೆ ಸ್ವಲ್ಪ ಅಸಮಾಧಾನವಾಗಿದೆ. ಆದರೂ ಎದೆಗುಂದದೆ ಮುಂದೊಂದು ದಿನ ಬಂದೆ ಬರುತ್ತದೆ ಎಂಬ ಇಚ್ಛೆಯಿಂದ ಕಲಾ ಜೀವನದಲ್ಲಿ ತಮ್ಮನ್ನು ತೊಡಗಿಸಿ ಕೊಂಡು ಹಲವಾರು ಯುವ ಕಲಾವಿದರಿಗೆ ತರಬೇತಿಗೊಳಿಸುತ್ತಾ ಜೀವನದ ಕಾಲ ಕಳೆಯುತ್ತಿದ್ದಾರೆ.

ಕಲ್ಲಪ್ಪ ಚನ್ನಪ್ಪ ಪಟ್ಟಣಶೆಟ್ಟಿ
ಸಾ : ನಾವಲಗಿ,
ತಾ : ಜಮಖಂಡಿ, ಜಿ : ಬಾಗಲಕೋಟೆ.

## ಗಫೂರಸಾಬ ಪತ್ತೆಸಾಬ ವಾಲೀಕಾರ

ಆಲಮಟ್ಟಿ ಹಿನ್ನೀರಿನಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಹಲವಾರು ಗ್ರಾಮಗಳು ಮುಳುಗಡೆಯಾಗಿವೆ. ಗ್ರಾಮ ಮುಳುಗಡೆಯಾದರೂ ಜಾನಪದಕಲೆ, ಶ್ರೀಕೃಷ್ಣ ಪಾರಿಜಾತ ಕಲೆ ಮುಳಗಬಾರದೆಂಬ ಮಹತ್ವಾಕಾಂಕ್ಷೆ ಹೊಂದಿವರು ಗಫೂರಸಾಬ ವಾಲೀಕಾರ.

ಮೂಲತಃ ಬಾಗಲಕೋಟೆ ತಾಲೂಕಿನ ಮುರನಾಳದವರು. ಈ ಗ್ರಾಮ ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾದರೂ ಶ್ರೀಕೃಷ್ಣಪಾರಿಜಾತವನ್ನು ಎಲ್ಲ ರೀತಿಯಿಂದ ಉಳಿಸಲು ಪ್ರಯತ್ನಿಸಿದವರು. ೧-೬-೧೯೩೯ರಲ್ಲಿ ತಂದೆ ಪತ್ತೆಸಾಬ ತಾಯಿ ಅಮೀರಬಿ ಎಂಬ ಮುಸ್ಲಿಂ ದಂಪತಿಗಳ ಉದರದಲ್ಲಿ ಮುರನಾಳದಲ್ಲಿ ಜನಿಸಿದರು. ಸ್ವಗ್ರಾಮವಾದ ಮುರನಾಳದಲ್ಲಿ ೭ನೆಯ ತರಗತಿವರೆಗೆ ವಿದ್ಯಾಭ್ಯಾಸವನ್ನು ಕಲಿತು ಮುಂದೆ ಕೃಷಿ ಬದುಕನ್ನೆ ಒಪ್ಪಿಕೊಂಡು ಈ ಕಲೆಯು ಗೀಳನ್ನು ಅಂಟಿಸಿಕೊಂಡವರು. ಮುಂದೆ ದುಡಿಯಲಿಕ್ಕೆಂದು ಬೀಳಗಿ ತಾಲೂಕಿನ ಸೊನ್ನಗ್ರಾಮಕ್ಕೆ ಬಂದು ನೆಲೆನಿಂತು ಅಲ್ಲಿ ಕಲಿಯುತ್ತಿದ್ದ ಶ್ರೀಕೃಷ್ಣಪಾರಿಜಾತ ಆಟಕ್ಕೆ ಮನಸೋತು ತಾವು ಕಲಿಯಬೇಕೆಂಬ ಆಸೆಯಿಂದ ಮಲ್ಲಣ್ಣ ದೇಸಾಯಿ ಸಾ : ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಮೊದಮೊದಲು ಶ್ರೀಕೃಷ್ಣನ ಪಾತ್ರ ನಿರ್ವಹಿಸಿದರು. ನಂತರ ಕೆಲದಿನಗಳ ನಂತರ ಕಂಕನವಾಡಿ ಶಂಕ್ರಯ್ಯ, ನಿಂಗನೂರ ಬಾಲಪ್ಪ, ಲೋಕಾಪುರ ದೇಶಪಾಂಡೆಯವರ ಭಾಗವತ ಮಾಡುವುದನ್ನು ನೋಡಿ ಪ್ರಭಾವಿತರಾಗಿ ಭಾಗವತ ಪಾತ್ರವನ್ನು ಕಲಿಯಬೇಕೆಂಬ ಇಚ್ಛೆಯಿಂದ ಹಲವಾರು ಹಿರಿಯ ಕಲಾವಿದರ ಮಾರ್ಗದರ್ಶನ ಪಡೆದುಕೊಂಡು ಭಾಗವತ ಕಲಿತರು. ಸೊನ್ನ ಕಡಕೊಳ, ಬೈಲಹೊಂಗಲ, ತುಳಸಿಗೇರಿಯ ತಂಡಗಳಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿ ಜನಮೆಚ್ಚುಗೆ ಗಳಿಸಿದರು. ವಿವಿಧ ತಂಡಗಳ ಆಟಕ್ಕೆ ಪ್ರಯೋಗಕ್ಕೆ ೫೦ ರೂಪಾಯಿಂದ ೨೦೦ ರೂ.ಗಳವರೆಗೆ ಗೌರವ ಸಂಭಾವನೆ ಪಡೆದುಕೊಂಡು ಕಲಾ ಜೀವನ ನಡೆಸಿದ್ದಾರೆ.

೧೯೯೨ರಲ್ಲಿ ಶ್ರೀಕಾಡಸಿದ್ದೇಶ್ವರ ಶ್ರೀಕೃಷ್ಣ ಪಾರಿಜಾತ ಕಂಪನಿ ಶಿರೋಳ ಎಂಬ ಸಂಘ ಕಟ್ಟಿ ಅಲ್ಲಿಂದ ಇಲ್ಲಿಯವರೆಗೆ ಶ್ರೀಕೃಷ್ಣನ ನಾಮಸ್ಮರಣೆಯಲ್ಲಿ ಕಾಲಕಳೆಯುತ್ತಿದ್ದಾರೆ. ಈ ತಂಡದಲ್ಲಿ ಹಲವಾರು ವಿಶೇಷಗಳನ್ನು ಮಾಡಿಕೊಂಡು ಹೊಸ ನಟವರ್ಗವನ್ನು ಸೇರಿಸಿಕೊಂಡು ಶಿವಾನಂದ ಬಡಿಗೇರ ಕೃಷ್ಣನ ಪಾತ್ರದಲ್ಲಿ ಕಾಣಿಸಿಕೊಂಡರೆ, ಸ್ವತಃ ಗಫೂರಸಾಬ ವಾಲೀಕಾರ ಭಾಗವತರಾಗಿ, ಸತ್ಯಭಾಮಾ, ಕೊರವಂಜಿಯಾಗಿ ಮಲ್ಲಪ್ಪ ಶಿರೋಳ ಅಭಿನಯಿಸುತ್ತಾರೆ. ರುಕ್ಮಿಣಿ ದೊರೆಸಾನಿಯಾಗಿ ಮಹಾದೇವ ಹಾದಿಮನಿ ಯವರು ರಂಗದ ಮೇಲೆ ಬಂದರೆ, ಸಂಗೀತಗಾರರಾಗಿ ಹನುಮಂತ ಬಡಿಗೇರ ಹಾಗೂ ಗೋವಿಂದಪ್ಪ ಬಡಿಗೇರ ಕಾರ್ಯನಿರ್ವಹಿಸುತ್ತಾರೆ. ಇಷ್ಟೆಲ್ಲ ನುರಿತ ಕಲಾವಿದರನ್ನು ಹೊಂದಿದ ಈ ತಂಡದ ಎಲ್ಲ ಆಗು ಹೋಗುಗಳನ್ನು ಗಫೂರಸಾಬ ವಾಲೀಕಾರ ನೋಡಿಕೊಂಡು ಹೋಗುತ್ತಾರೆ. ಶ್ರೀಕೃಷ್ಣಪಾರಿಜಾತದ ರಂಗದ ಮೇಲೆ ಬಂದ ಗಫೂರಸಾಬ ಹಲವಾರು ತೊಂದರೆಗಳನ್ನು ಕಂಡರು ಹೆದರದೆ ಮುನ್ನುಗ್ಗಿ ಜಯ ಕಾಣುವ ಛಲಗಾರನಾಗಿದ್ದಾರೆ.

**ಪ್ರಶಸ್ತಿ ಮತ್ತು ಸನ್ಮಾನ** : ಐದು ದಶಕಗಳ ಕಲಾಸೇವೆಯನ್ನು ಪೂರೈಸಿದ ಈ ಕಲಾವಿದನಿಗೆ ಯಾವ ಪ್ರಶಸ್ತಿಗಳು ಸಹ ಬಂದಿರುವುದಿಲ್ಲ. ಆದರೆ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಪುರಸ್ಕರಿಸಿವೆ. ಆ ಸನ್ಮಾನದಿಂದ ಆನಂದಪಟ್ಟು ಇನ್ನಷ್ಟು ಕೆಲಸ ಮಾಡುವ ಹಟತೊಟ್ಟು ಒಳ್ಳೆಯ ಪ್ರಯೋಗ ಮಾಡುತ್ತಾ ಜನಮನ್ನಣೆ ಗಳಿಸಿದ್ದಾರೆ.

**ಶ್ರೀಕೃಷ್ಣಪಾರಿಜಾತದ ಪ್ರಚಾರ** : ಕರ್ನಾಟಕ, ಮಹಾರಾಷ್ಟ್ರ, ಗೋವಾ, ಆಂಧ್ರ ಪ್ರದೇಶಗಳಲ್ಲಿ ಪಾರಿಜಾತದ ಕಂಪನ್ನು ಪಸರಿಸಿದ ಗಫೂರಸಾಬ ಆಕಾಶವಾಣಿ, ದೂರದರ್ಶನ ಹಾಗೂ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಕಲಾಪ್ರದರ್ಶನ ನೀಡಿದ್ದಾರೆ.

**ಗಫೂರಸಾಬ ಪ. ವಾಲೀಕಾರ,**<br>
**ಸಾ : ಮುರನಾಳ ಪು. ಕೇ.**<br>
**ತಾ : ಜಿ : ಬಾಗಲಕೋಟೆ.**

## ವಿಲಾಸಬಾಯಿ ಮ. ರಾಯಣ್ಣನವರ

ನಾರಾಯಣ ಹರಿ ಗೋವಿಂದಾರ್ಜುನ ಎಂದು ಹಾಡು ಹೇಳುತ್ತಾ ರಂಗದ ಮೇಲೆ ನಾರದನ ವೇಷದಲ್ಲಿ ಬಂದರೆ ಸಾಕ್ಷಾತ ದೇವಲೋಕದ ನಾರದನನ್ನು ನೋಡಿದಂತೆ ಆಗುತ್ತದೆ. ಅಷ್ಟು ಅಭಿನಯದಲ್ಲಿ ಪ್ರಾವೀಣ್ಯತೆ ಪಡೆದವರು ಯಾರು ಗೊತ್ತೆ ? ಇವರೇ ವಿಲಾಸಬಾಯಿ ರಾಯಣ್ಣವರ.

ಮೂಲತಃ ಜಮಖಂಡಿ ತಾಲೂಕಿನ ತೇರದಾಳ ಪಟ್ಟಣದಲ್ಲಿ ತಂದೆ ಮಗೆಪ್ಪ, ತಾಯಿ ತವನವ್ವ ಎಂಬ ದಂಪತಿಗಳ ಉದರದಲ್ಲಿ ೧೯೪೫ರಲ್ಲಿ ಜನಿಸಿದರು. ಕಡು ಬಡತನದಲ್ಲಿ ಹುಟ್ಟಿ ಬೆಳೆದ ವಿಲಾಸಬಾಯಿಯವರು ಶಾಲೆಯ ಕಟ್ಟೆಯನ್ನು ಹತ್ತದೆ ಈ ಕಲಾಜೀವನದ ಕಡೆಗೆ ಸಾಗಿ ಬಂದರು. ಪಾರಿಜಾತದ ತವರೂರು ಮಹಾಲಿಂಗಪೂರದ ಹಿರಿಯಕಲಾವಿದ ದಿ॥ ಮುರಿಗೆಪ್ಪ ಸೋರಗಾಂವಿ ಇವರ ಕಂಪನಿಯಲ್ಲಿ ಸುಮಾರು ೫ ವರ್ಷಗಳ ಕಾಲ ಸೇವೆಮಾಡಿ ರುಕ್ಮಿಣಿ ಪಾತ್ರವನ್ನು ಅಚ್ಚುಕಟ್ಟಾಗಿ ಅಭಿನಯಿಸಿ ಕಲೆಗೆ ಹೆಸರು ತಂದು ಕೊಟ್ಟರು. ನಂತರ ಸಂತ್ರಾಮ ಬಡಿಗೇರ ಸಾ: ಖೆಮಲಾಪುರ ಇವರ ಪಾರಿಜಾತ ಕಂಪನಿಯಲ್ಲಿ, ನಂತರ ಖ್ಯಾತ ಪಾರಿಜಾತ ಕಲಾವಿದೆ ಕಾಶಿಬಾಯಿ ದಾದನಟ್ಟಿ ಇವರ ಕಂಪನಿಯಲ್ಲಿ, ಅಪ್ಪಾಲಾಲ್ ನದಾಫ್‌ರ ಕಂಪನಿ, ನಂತರ ಹಿರಿಯ ಕಲಾವಿದ ವಿಠಲರಾವ್ ಟಕ್ಕಳಕಿ ಇವರ ಪಾರಿಜಾತ ಕಂಪನಿಯಲ್ಲಿ ಉತ್ತಮವಾದ ಸೇವೆ ಸಲ್ಲಿಸಿ ಮೆಚ್ಚುಗೆ ಗಳಿಸಿಕೊಂಡರು. ಸುಮಾರು ೩ ದಶಕಗಳ ಕಾಲ ವಿಠಲ್‌ರಾವ್ ಟಕ್ಕಳಕಿಯವರ ಕಂಪನಿಯಲ್ಲಿ ಸೇವೆ ಸಲ್ಲಿಸಿ ಉತ್ತಮ ಕಲಾವಿದರಾಗಿ ಹೊರಹೊಮ್ಮಿದರು.

ಹಿರಿಯ ಪಾರಿಜಾತ ಕಲಾವಿದರಾದ ವಿಠಲರಾವ್ ಟಕ್ಕಳಕಿಯರಂತ ಮಾರ್ಗದರ್ಶನದಲ್ಲಿ ಅಭಿನಯಿಸುವುದನ್ನು ಕಲಿತ ವಿಲಾಸಾಬಾಯಿ ಹಲವಾರು ವಿಷಯಗಳನ್ನು ಕಲಿತು ಪಕ್ವಕಲಾವಿದೆಯಾಗಿ ಮಾರ್ಪಟ್ಟಳು. ಓದು ಬರಹ ಬಾರದ

ವಿಲಾಸಾಬಾಯಿಯ ವಾಕ್‌ಚಾತುರ್ಯ, ಅಭಿನಯ, ಹಾಡುಗಾರಿಕೆಯನ್ನು ನೋಡಿ ಬೆರಗಾಗದವರಿಲ್ಲ. ರಾಜ್ಯದ ಒಳಗೆ ಹಾಗೂ ಹೊರಗೆ ಆಟ ಪ್ರದರ್ಶನಮಾಡಿ ಕೀರ್ತಿ ಗಳಿಸಿಕೊಂಡು ಜಮಖಂಡಿ ನಗರಕ್ಕೆ ಕೀರ್ತಿ ತಂದವರು. ೫ ದಶಕಗಳ ತಮ್ಮ ಕಲಾ ಜೀವನದಲ್ಲಿ ಹಲವಾರು ಏಳು–ಬೀಳುಗಳನ್ನು ಕಂಡರು ಅಂಜದೆ ಕಲೆಗಾಗಿ ಬದುಕಿದ ಹಿರಿಯ ಕಲಾ ಜೀವಿ ವಿಲಾಸಬಾಯಿ. ಇಂತಹ ಹಿರಿಯ ಕಲಾವಿದೆಯನ್ನು ಹಲವಾರು ಸಂಘ ಸಂಸ್ಥೆಗಳು ಪುರಸ್ಕರಿಸುವದರ ಜೊತೆಗೆ ಪ್ರೋತ್ಸಾಹಿಸಿವೆ. ಇಂತಹ ಶ್ರೇಷ್ಠ ಕಲಾವಿದೆ ಹಲವಾರು ಸಲ ದೂರದರ್ಶನ ಹಾಗೂ ಆಕಾಶವಾಣಿಗಳಲ್ಲಿ ಇವರ ಕಲೆ ಪ್ರಸಾರಗೊಂಡಿವೆ. ಇವರ ಕಲಾಸೇವೆಯನ್ನು ಕಂಡು ಭೂಮಿ ಬಳಗ ಬಿಜಾಪೂರ, ಅಲ್ಲಮ ಪ್ರಭು ಕರ್ಮವೀರ ಸಾಂಸ್ಕೃತಿಕ ವೇದಿಕೆ ತೇರದಾಳ, ಡಾ. ಫ. ಗು. ಹಳಕಟ್ಟಿ ಇವರ ಜಂಟಿಯಾಗಿ ಹಮ್ಮಿಕೊಂಡ ಜಾನಪದ ಕಲಾವಿದರ ಸಮ್ಮೇಳನದಲ್ಲಿ ಪುರಸ್ಕರಿಸಿವೆ. ಮತ್ತು ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರು ೨೦೦೭ನೇ ಸಾಲಿನ ಸುವರ್ಣ ಕರ್ನಾಟಕ ಕಲಾವಿದರ ಪ್ರಶಸ್ತಿ ನೀಡಿ ಪುರಸ್ಕರಿಸಿದ್ದಾರೆ. ಈ ಕಲಾವಿದೆಗೆ ಇನ್ನೂ ಹಲವಾರು ಸರ್ಕಾರಿ ಸದುಪಯೋಗಗಳು ಸಿಗಬೇಕೆಂಬುದು ಅವರ ಅಭಿಮಾನಿಗಳ ಆಸೆಯಾಗಿದೆ.

ವಿಲಾಸಬಾಯಿ ಮ. ರಾಯಣ್ಣವರ,
ದೇವರಾಜನಗರ, ಸಾ : ತೇರದಾಳ,
ತಾ : ಜಮಖಂಡಿ, ಜಿ : ಬಾಗಲಕೋಟೆ.

# ಸಿದ್ಧಗಿರಿಸ್ವಾಮಿ ಮಠಪತಿ

ಸಾಹಿತ್ಯ, ಸಂಗೀತ, ಪ್ರವಚನ, ನಿರ್ದೇಶನಗಳಂತ ಬಹುಮುಖ ಪ್ರತಿಭೆಯನ್ನು ಹೊಂದಿದ ಸಿದ್ದಗಿರಿಸ್ವಾಮಿ ಮಠಪತಿಯವರು ಮೂಲತಃ ಜಮಖಂಡಿ ತಾಲೂಕಿನ ಮಧುರಖಂಡಿಯವರು. ತಂದೆ ಈರಯ್ಯ ತಾಯಿ............. ಎಂಬ ದಂಪತಿಗಳ ಉದರದಲ್ಲಿ ೧೬-೮-೧೯೨೧ರಲ್ಲಿ ಮಧುರಖಂಡಿಯಲ್ಲಿ ಜನಿಸಿದರು. ಮರಾಠಿ ೪ನೇ ತರಗತಿಯವರೆಗೆ ಶಿಕ್ಷಣ ಪಡೆದರು. ಮುಂದೆ ಶಿಕ್ಷಣದ ಕಡೆಗೆ ಗಮನ ಹರಿಸದೆ ಆಧ್ಯಾತ್ಮಿಕವಾದ ಒಲವು ಬೆಳಸಿಕೊಂಡು ಹುನ್ನೂರಿ ಶಿವಪ್ಪಜ್ಜನವರಿಂದ ಆಧ್ಯಾತ್ಮದ ವಿಷಯಗಳಾದ ಕೈವಲ್ಯ ಪದ್ಧತಿ, ಪರಮಾನುಭವ, ಬೋಧೆ, ಪರಮಾರ್ಥಗೀತೆ, ವಿವೇಕ ಚಿಂತಾಮಣಿ, ಪರಮಾರ್ಥ ಪ್ರಕಾಶಿಕೆ, ಅನುಭವ ಸಾರ ವಿಚಾರ, ಚಂದ್ರೋದಯ ವಿಚಾರ ಸಾಗರ, ವೃತ್ತಿ ರತ್ನಾವಳಿ, ವೃತ್ತಿ ಪ್ರಭಾಕರ ಇತ್ಯಾದಿಗಳನ್ನು ಸತತವಾಗಿ ೧೨ ವರ್ಷಗಳ ಕಾಲ ಅಭ್ಯಾಸ ಮಾಡಿದರು. ಇವರ ಅಣ್ಣ ಚನ್ನಮಲ್ಲಯ್ಯನವರು ಶ್ರೇಷ್ಠ ಲಾವಣಿ ಕವಿಗಳಾಗಿದ್ದರು. ಇಂತಹವರೆಲ್ಲರ ಸಹಕಾರದಿಂದ ಸಿದ್ಧಗಿರಿ ಸ್ವಾಮಿಗಳು ಕಲಾಜೀವನಕ್ಕೆ ಕಾಲಿಡಲು ಅನುಕೂಲವಾಯಿತು. ೧೯೨೮ರ ಸುಮಾರಿಗೆ ಶ್ರೀ ಶಂಕರೆಪ್ಪ ಸಿದರೆಡ್ಡಿಯವರಲ್ಲಿ ಶ್ರೀಕೃಷ್ಣಪಾರಿಜಾತವನ್ನು ಕಲಿತರು. ಮುಂದೆ ಇವರ ಕಲೆಯನ್ನು ನೋಡಿ ಶ್ರೀಕೃಷ್ಣಪಾರಿಜಾತದ ಶ್ರೇಷ್ಠ ಕಲಾವಿದ ಜಮಖಂಡಿ ಅಪ್ಪಾಲಾಲರು ತಮ್ಮ ಕಂಪನಿಗೆ ತಂದು ರುಕ್ಮಿಣಿ ಪಾತ್ರ ನಿರ್ವಹಿಸಲು ತಿಳಿಸಿದರು. ಅವರ ಅಪ್ಪಣೆಯಂತೆ ಆ ಪಾತ್ರ ಮಾಡಿ ಅವರಿಂದ ಭೇಷ್ ಎನಿಸಿಕೊಂಡರು. ಕಲೆಯಲ್ಲಿ ಪರಿಣತಿ ಪಡೆದ ತಕ್ಷಣ ನಾನೇಕೆ ಮತ್ತೊಬ್ಬರ ಹತ್ತಿರ ಹೋಗಿ ದುಡಿಯಬೇಕು, ನಾನೇ ಒಂದು ತಂಡ ಕಟ್ಟಬೇಕೆಂದು ಆಸೆ ಹುಟ್ಟಿ ಅದರ ಫಲವಾಗಿಯೇ ೧೯೩೦ರಲ್ಲಿ ಶ್ರೀ ಮಲ್ಲಿಕಾರ್ಜುನ ಪ್ರಸಾದಿಕ ನಾಟ್ಯ ಸಂಘ ಮದರಖಂಡಿ ಎಂಬ ತಂಡ ಕಟ್ಟಿ ಆ ಕಂಪನಿಯ ಮೂಲಕ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಎಂಬ ಬಯಲಾಟವನ್ನು ಪ್ರಾರಂಭಿಸಿದರು. ಕೆಲವೆ ಕೆಲವು ದಿನಗಳಲ್ಲಿ ಈ

ತಂಡ ಪ್ರಸಿದ್ಧಿ ಪಡೆಯಿತು. ಶ್ರೇಷ್ಠ ಕಲಾವಿದರ ಸಂಗಮವಾಗಿದ್ದ ಈ ತಂಡದಲ್ಲಿ ಹಣಮಂತಪ್ಪ ಹೂಗಾರ, ಬನಹಟ್ಟಿ ಅಯ್ಯಪ್ಪ ಹೂಗ್ಗಾರ ಹುಲ್ಯಾಳ ಈ ಇಬ್ಬರು ಮಹನೀಯರು ಈ ತಂಡದಲ್ಲಿ ತಬಲಾ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ.

ಹೇಮರಡ್ಡಿ ಮಲ್ಲಮ್ಮ ನಾಟಕದಲ್ಲಿ ಮುಖ್ಯ ಪಾತ್ರವಾದ ಮಲ್ಲಮ್ಮ ಪಾತ್ರ ನಿರ್ವಹಿಸುತ್ತಿದ್ದ ಸ್ವಾಮಿಗಳು ಬಣ್ಣ ಬಡಿದು ರಂಗಸಜ್ಜಿಕೆಗೆ ಬಂದು ಅಭಿನಯದೊಂದಿಗೆ "ಹೃದಯ ವ್ಯಥೆ ನಾ ತಾಳೇ ಮಮ ಜನನೀ" ಈ ಪದವನ್ನು ಮಾಂಡ ರಾಗದಲ್ಲಿ ಹಾಡುವುದನ್ನು ಸ್ವತಃ ಅವರ ಬಾಯಿಯಿಂದಲೇ ಕೇಳಿ ಸಂತೋಷ ಪಡಬೇಕು.

ಹಿಂದೂಸ್ಥಾನಿ ಸಂಗೀತವನ್ನೇ ಮುಖ್ಯವಾಗಿ ಬಳಸಿಕೊಂಡಿದ್ದರು. ಕರ್ನಾಟಕ ಸಂಗೀತದ ರಾಗಗಳಿಂದ ಕೂಡಿದ ಹಾಡುಗಳನ್ನು ಈ ಬಯಲಟದಲ್ಲಿ ಇದ್ದವು. ಕನ್ನಡ ಮರಾಠಿ ಬಲ್ಲವರಾದ ಸ್ವಾಮಿಗಳು. ಕರ್ನಾಟಕದಲ್ಲಿ ಆದಷ್ಟೆ ಪ್ರಯೋಗಗಳನ್ನು ಮಹಾರಾಷ್ಟ್ರದಲ್ಲಿ ಮಾಡಿದರು. ಪ್ರಯೋಗದಿಂದ ಪ್ರಯೋಗಕ್ಕೆ ಹೊಸದನ್ನು ವೈವಿಧ್ಯತೆಯನ್ನು ಮಾಡುವ ಕಲೆ ಸಿದ್ಧ ಗಿರಿಸ್ವಾಮಿಗಳಲ್ಲಿದೆ ಎಂದು ಹೇಳಬಹುದು. ಇಲ್ಲಿಯವರೆಗೂ ಹಾಡುಗಾರಿಕೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದ್ದಾರೆ.

ಭಕ್ತಿಪ್ರಧಾನವಾದ ಈ ಬಯಲಾಟದಲ್ಲಿ ಎಲ್ಲ ಪತ್ರಧಾರಿಗಳನ್ನು ಭಕ್ತಿವಂತರನ್ನು ಕಲೆಹಾಕಿ ಈ ಬಯಲಾಟಕ್ಕೆ ಹೊಸ ದಿಕ್ಕನ್ನು ತೋರಿಸಿ ಮಧುರಖಂಡಿ ಮಲ್ಲಮ್ಮನ ಆಟ ಎಂದು ಹೆಸರು ಬರುವಂತೆ ಮಾಡಿದ ಕೀತಿ ಶ್ರೀ ಸಿದ್ಧಗಿರಿಸ್ವಾಮಿಗಳಿಗೆ ಸಲ್ಲಬೇಕು. ಅದರ ಹಿಂದಿನ ಅವರ ಪರಿಶ್ರಮವನ್ನು ಯಾರೂ ಮರೆಯುವಂತಿಲ್ಲಾ. ೧೯೩೦ರಿಂದ ೧೯೬೦ರವರೆಗೆ ಅಖಂಡ ಕಲಾಸೇವೆಯನ್ನು ಮಾಡಿದ ಶ್ರೀಯುತರು ಇಲ್ಲಿಗೆ ಈ ಕಲೆ ಅವನತಿ ಹೊಂದಬಾರದೆಂಬ ಆಸೆಯಿಂದ ೧೯೬೮ರಲ್ಲಿ ಶ್ರೀ ಮಲ್ಲಿಕಾರ್ಜುನ ನಾಟ್ಯಸಂಘ ಮಧುರಖಂಡಿ ಎಂಬ ಸಂಘ ಕಟ್ಟಿ ಅವರಿಗೆ ಕಲೆಯ ದಿಕ್ಷೆಯನ್ನು ಕೊಟ್ಟವರು, ಬೆಳೆಯುವಂತೆ ಮಧುರಖಂಡಿಯ ಹೆಸರು ಉಳಿಯುವಂತೆ ಮಾರ್ಗದರ್ಶನ ಮಾಡಿದರು. ಆ ತಂಡ ಅವರು ಹಾಕಿಕೊಟ್ಟ ದಾರಿಯಲ್ಲಿಯೇ ಇನ್ನೂವರೆಗೆ ಕಲಾ ಸೇವೆಯನ್ನು ಮಾಡುತ್ತಾ ನಡೆದಿದೆ.

**ಕಲಾ ಪ್ರವರ್ಧಕರಾಗಿ ಸೇವೆ :** ತಾವು ಬೆಳೆಯುವುದರೊಂದಿಗೆ ತನ್ನ ಕಲಾ ಪ್ರಪಂಚನ್ನೇ ಬೆಳೆಸಿದ ಕೀರ್ತಿ ಇವರದು ಬಹಳಷ್ಟು ತಂಡಗಳಿಗೆ ಗುರುಗಳಾಗಿ ಕಲೆಯನ್ನು ಧಾರೆ ಎರೆದಿದ್ದಾರೆ. ಮಧುರಖಂಡಿ, ಯಬರಟ್ಟಿ, ಇನಾಂ ಹಂಚಿನಾಳ, ತೆಗ್ಗಿ, ಹಿರೇ ಆಲಗುಂಡಿ, ಇನ್ನು ಹಲವಾರು ಗ್ರಾಮದ ಯುವಕರಿಗೆ ಭಜನೆಯ ದೀಕ್ಷೆಯನ್ನು ಕೊಟ್ಟಿದ್ದಾರೆ. ಶಿವಶರಣೆ ನೆಲ್ಲೂರ ನಿಂಬೆಕ್ಕ, ಹೇಮರಡ್ಡಿ ಮಲ್ಲಮ್ಮ ನಾಟಕಗಳನ್ನು

ಕಲಿಸಿದ್ದಾರೆ. ಈ ತಂಡಗಳಿಗೆ ಪಾತ್ರಧಾರಿಗಳ ಕೊರತೆ ಬಿದ್ದಾಗ ತಾವೇ ಬಣ್ಣ ಬಡೆದುಕೊಂಡು ಅಭಿನಯಿಸಿ ಜನರಿಂದ ಮೆಚ್ಚುಗೆ ಪಡೆದುಕೊಂಡಿದ್ದಾರೆ.

ಪ್ರವಚನ : ೧೯೬೭ರ ಸುಮಾರಿಗೆ ಬಯಲಾಟ ಮಾಡುವುದನ್ನು ನಿಲ್ಲಿಸಿ ಕೇವಲ ಕಿರಿಯ ಕಲಾವಿದರಿಗೆ ನಿರ್ದೇಶನ ನೀಡುವುದರ ಜೊತೆಗೆ ಪುರಾಣ ಪ್ರವಚನಗಳನ್ನು ಹೇಳುತ್ತಾ ಜನಮನ್ನಣೆ ಗಳಿಸಿದರು. ಸಂಗೀತ ಸಾಹಿತ್ಯದ ಅಭ್ಯಾಸ ಇವರಲ್ಲಿ ಮೇಳೈಸಿದ್ದರಿಂದ ಇವರಿಗೆ ಪುರಾಣವು ರಸವತ್ತಾಗಿ ನಡೆಯುತ್ತಿತ್ತು.

ಕೃತಿಗಳು : ೧. ಗಿರೀಶ ಗೀತೆ ಶತಕ

೨. ದೃಷ್ಟಾಂತ ದೀಪ್ತಿ

೩. ಶ್ರೀ ಸಿದ್ಧಲಿಂಗೇಶ್ವರರ ಅಕಾರಧಿಜ್ಞಕ್ಷಾರಾಂತ ಸ್ತುತಿ

೪. ಮಂಗಲ ಗೀತೆಗಳು

ಪ್ರಶಸ್ತಿಗಳು : ಸಂಗೀತ ಶಿವಭಜನಾ ಧುರೀಣ (ಭಜನೆ ಕಲೆಗಾಗಿ)

ಉಪನ್ಯಾಸದ ಉತ್ತುಂಗ (ಪುರಾಣ ಸೇವೆಗಾಗಿ)

ವೇದಾಂತ ರತ್ನ (ಪುರಾಣ ಸೇವೆಗಾಗಿ)

ಪುರಾಣ ರತ್ನ (ಪುರಾಣ ಸೇವೆಗಾಗಿ)

ವೇದಾಂತ ಕೇಸರಿ (ಪುರಾಣ ಸೇವೆಗಾಗಿ)

ಹೀಗೆ ಹಲವಾರು ಸಂಘ ಸಂಸ್ಥೆಗಳು ಬಿರುದು ನೀಡಿ ಸನ್ಮಾನಿಸಿವೆ. ೧೯೭೭ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಬಯಲಾಟ ಕಲೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಿ ಗೌರವಿಸಿ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ. ಇಂತಹ ಪ್ರಬುದ್ಧ ಕಲಾವಿದನಿಗೆ ಸರ್ಕಾರದ ಶ್ರೇಷ್ಠವಾದ ಪ್ರಶಸ್ತಿಗಳು ದೊರೆಯಬೇಕು ಎನ್ನುವದು ಅವರ ಅಭಿಮಾನಿ ಹಾಗೂ ಶಿಷ್ಯ ಬಳಗದ ಬಯಕೆಯಾಗಿದೆ.

**ಸಿದ್ದಗಿರಿಯಯ್ಯಾ ಈ. ಮಠಮಠಿ,**

**ಸಾ : ಮಧುರಖಂಡಿ,**

**ತಾ : ಜಮಖಂಡಿ, ಜಿ : ಬಾಗಲಕೋಟೆ.**

# ಮಲ್ಲಯ್ಯ ಬಸಲಿಂಗಯ್ಯ ಹಿಡಕಲ್ಲ

ಮಧುರಖಂಡಿ ಗ್ರಾಮಕ್ಕೆ ಹೆಸರು ತಂದು ಕೊಟ್ಟವರು ಸಿದ್ದಗಿರಿ ಸ್ವಾಮಿಗಳು. ಅವರು ಹೇಮರಡ್ಡಿಮಲ್ಲಮ್ಮ ಬಯಲಾಟವನ್ನು ಪ್ರದರ್ಶನ ಮಾಡುವುದನ್ನು ನಿಲ್ಲಿಸಿದ ನಂತರ ಮಧುರಖಂಡಿ ಗ್ರಾಮದಲ್ಲಿ ಹೊಸ ತಂಡವನ್ನು ಕಟ್ಟಿದರು. ಈ ತಂಡದಲ್ಲಿ ಗುರುಗಳ ಆಜ್ಞೆಯಂತೆ ಮಲ್ಲಮ್ಮನ ಪಾತ್ರ ನಿವಹಿಸಿದವರು ಮಲ್ಲಯ್ಯ ಹಿಡಕಲ್ಲ ಅವರು.

ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸವನ್ನು ಕಲಿತ ಇವರು ೧೯೫೦ ಜೂನ್ ಒಂದರಂದು ತಂದೆ ಬಸಲಿಂಗಯ್ಯಾ, ತಾಯಿ ದುಂಡಮ್ಮ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು. ಮುಂದೆ ಸಂಗೀತ ದೀಕ್ಷೆಯನ್ನು ಪಂ. ಸ್ವಾಮಿಸಂಗಮೇಶ್ವರ ಹೀರೆಮಠ ಕಲಾದೀಕ್ಷೆಯನ್ನು ಸಿದ್ಧಗಿರಿ ಮಹಾಸ್ವಾಮಿಗಳು ಮಧುರಖಂಡಿ ಇವರಿಂದ ಪಡೆದುಕೊಂಡು ಯಾವ ನೌಕರಿಗೆ ಆಸೆ ಪಡದೆ ಈ ಕಲೆಯ ಬೆನ್ನು ಹತ್ತಿ ಗುರುಗಳ ಆಜ್ಞೆಯಂತೆ ಕಲಾಸೇವೆ ಮಾಡಹತ್ತಿದರು. ಮಧುರಖಂಡಿ ಮಲ್ಲಮ್ಮನ ಬಯಲಾಟದಲ್ಲಿ ಸಿದ್ದಗಿರಿ ಸ್ವಾಮಿಗಳ ತಂಡ ಮುರಿದ ನಂತರ ಹೊಸ ತಂಡದಲ್ಲಿ ಎದ್ದು ಕೇಳುವ ಹೆಸರು ಮಲ್ಲಯ್ಯನವರದು. ಗುರುವಿಗೆ ತಕ್ಕ ಶಿಷ್ಯ ಎನ್ನುವಂತೆ ಅವರ ಹಾಗೆ ಅಭಿನಯ ಹಾಡುಗಾರಿಕೆ ಮಾಡಿ ಜನರನ್ನು ಆಕರ್ಷಿಸುತ್ತಿದ್ದರು. ಇವರ ತಂದೆಯು ಸಹ ಮೊದಲಿನ ಕಂಪನಿಯಲ್ಲಿ ಅಖಂಡ ೩೦ ವರ್ಷಗಳ ಕಾಲ ಮಲ್ಲಿಕಾರ್ಜುನನ ಪಾತ್ರದಲ್ಲಿ ಕಾಣಿಸಿಕೊಂಡವರು. ಇಂತಹ ಕಲಾವಿದರ ಪರಿಸರದಲ್ಲಿ ಬೆಳೆದ ಮಲ್ಲಯ್ಯನವರು ಬಹುಬೇಗ ಜನಪ್ರಿಯಗೊಂಡರು. ಅಖಂಡವಾಗಿ ೩೫ ವರ್ಷಕಲಾ ಸೇವೆಯನ್ನು ಮಾಡಿದ ಇವರು ಈ ಕಲೆ ನಶಿಸಬಾರದೆಂಬ ಆಸೆಯಿಂದ ಸ್ವತಃ ಇವರ ಮಗನಿಗೆ ಕಲಾ ದೀಕ್ಷೆಯನ್ನು ಕೊಟ್ಟು ತಮ್ಮ ಕಲಾ ಪ್ರೌಢಿಮೆಯನ್ನು ಧಾರೆ ಎರೆದು ಕೊಟ್ಟಿದ್ದಾರೆ. ಈ ತಂಡವು ಈಗ ಸತತವಾಗಿ ಕಲಾಸೇವೆಯನ್ನು ಮುಂದುವರಿಸಿಕೊಂಡು ಬಂದಿದೆ.

ಇತ್ತೀಚಿನ ದಿನಗಳಲ್ಲಿ ಮಲ್ಲಯ್ಯನವರು ಭಜನೆ, ಪುರಾಣ, ಪ್ರವಚನಗಳಂತಹ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಯುವ ಪೀಳಿಗೆಗೆ ಮಾರ್ಗದರ್ಶನ ನೀಡುತ್ತಾ ಕಲಾಪೋಷಕರಾಗಿ ನಡೆಯುತ್ತಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಇವರ ನಾಟಕ ಪ್ರಸಾರಗೊಂಡಿವೆ. ಇವರ ಕಲೆಯನ್ನು ನೋಡಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಬಿರುದು ನೀಡಿ ಗೌರವಿಸಿವೆ. ಜಮಖಂಡಿ ತಾಲೂಕಾ ಆಡಳಿತದಿಂದ ವಿಶೇಷವಾಗಿ ಸನ್ಮಾನಿಸಿ ಪುರಸ್ಕರಿಸಿದ್ದಾರೆ. ಚಂದನ ದೂರದರ್ಶನದಲ್ಲಿ ಇವರ ಸಂದರ್ಶನವಾಗಿದೆ. ಈ ಕಲೆಯು ಉಳಿದು ಬೆಳೆಯ ಬೇಕೆಂಬುದು ಇವರ ಆಸೆ ಆಗಿದೆ. ಯಾರಾದರು ಕಲಿಯಲು ಮುಂದೆ ಬಂದರೆ ಈ ಆಟವನ್ನು ಕಲಿಸುತ್ತೇವೆ ಎನ್ನುತ್ತಾರೆ ಮಲ್ಲಯ್ಯನವರು. ದೂರದರ್ಶನ, ಹಾವಳಿಯಿಂದ ಈ ಬಯಲಾಟಗಳು ಪ್ರಯೋಗಗಳು ಕಡಿಮೆಯಾಗಿವೆ. ನಾವೆಲ್ಲರು ಕೂಡಿ ಈ ಕಲೆ ಬೆಳವಣಿಗೆಗೆ ದುಡಿಯಬೇಕಾಗಿದೆ ಎನ್ನುತ್ತಾರೆ ಮಲ್ಲಯ್ಯನವರು. ಅಂದಾಜು ೪೦೦೦ ಪ್ರಯೋಗಗಳನ್ನು ನಾನು ಮಾಡಿದ್ದೇನೆ. ಪ್ರಯೋಗ ಮಾಡುವಾಗ ಸಿಗುವ ಆನಂದ ಜನರ ಸ್ಪಂದನ ಹೇಳತೀರದು. ಆ ಸಂತೋಷವನ್ನು ಹೇಳತೀರದು. ಕೇವಲ ೨೦೦ ರೂಪಾಯಿ ಗೌರವ ಧನ ಪಡೆಯುತ್ತಿದ್ದ ನಾವು ತಂಡ ಮುರಿಯುವ ವೇಳೆಯಲ್ಲಿ ೬೦೦೦ ರೂಪಾಯಿವರೆಗೆ ಗೌರವ ಧನ ಪಡೆದು ನಾವು ಆರ್ಥಿಕವಾಗಿ ತೊಂದರೆ ಇಲ್ಲದಂತೆ ಜೀವನ ನಡೆಸಿದ್ದೇವೆ. ಕಲಾಸೇವೆಯಿಂದ ನೆಮ್ಮದಿ ದೊರೆಯುತ್ತದೆ ಎನ್ನುತ್ತಾರೆ ಮಲ್ಲಯ್ಯನವರು. ಇಂತಹ ಪ್ರತಿಭಾವಂತ ಕಲಾವಿದನಿಗೆ ಸರ್ಕಾರದಿಂದ ದೊರೆಯುವ ಯಾವದೇ ಪ್ರಶಸ್ತಿಗಳು ದೊರೆತಿರುವುದಿಲ್ಲಾ. ಇಂತಹ ಕಲಾವಿದನನ್ನು ಬೆಳೆಸಿ ಪುರಸ್ಕರಿಸುವ ಕೆಲಸವಾಗಬೇಕಾಗಿದೆ.

**ಮಲ್ಲಯ್ಯ ಬಸವಲಿಂಗಯ್ಯ ಹಿಡಕಲ್ಲ,**
**ಸಾ : ಮಧುರಖಂಡಿ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

# ಮಲ್ಲಪ್ಪ ಬಸಪ್ಪ ಗಣಿ

ಜಮಖಂಡಿ ತಾಲೂಕಿನ ನಾವಲಗಿ ಗ್ರಾಮ ಕಲಾವಿದರ ತವರೂರ. ಎಲ್ಲ ಕಲಾ ಪ್ರಕಾರಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ ವಿಶೇಷ ಗ್ರಾಮದಲ್ಲಿ ತಂದೆ ಬಸಪ್ಪ ತಾಯಿ ಪಾರ್ವತೆವ್ವರ ಎರಡನೆಯ ಮಗನಾಗಿ ೧೯೫೦ರಲ್ಲಿ ಮಲ್ಲಪ್ಪ ನಾವಲಗಿಯಲ್ಲಿ ಜನಿಸಿದರು. ತಂದೆ ಬಸಪ್ಪ ಪ್ರಸಿದ್ಧ ಕರಡಿ ಮಜಲು ಕಲಾವಿದ. ಕಲಾವಿದರ ಹೊಟ್ಟೆಯಲ್ಲಿ ಹುಟ್ಟಿ ಬಂದ ಮಲ್ಲಪ್ಪನವರಿಗೆ ಕಲೆಯ ಬಗ್ಗೆ ವಿಶೇಷವಾದಂತ ಆಸಕ್ತಿ ಮೂಡಿತು. ಕಲೆಗಾಗಿ ಏನಾದರೂ ಹೊಸದನ್ನು ಹುಡುಕುವ ಮನಸ್ಸು ಮಲ್ಲಪ್ಪನವರದು. ಅವರ ಶೋಧನೆ ಸಿಕ್ಕದ್ದು ಉತ್ತರ ಕರ್ನಾಟಕದ ಪ್ರಸಿದ್ಧ ಬಯಲಾಟವಾದ "ಸಂಗ್ಯಾ ಬಾಳ್ಯ". ಈ ಬಯಲಟವನ್ನು ಆಯ್ಕೆ ಮಾಡಿಕೊಂಡು ಹಲವಾರು ಸಮಾನ ವಯಸ್ಕ ಗೆಳೆಯರನ್ನು ಕಲೆಹಾಕಿ ಆ ಯುವಕರ ತಂಡಕ್ಕೆ ತಾವೇ ಮುಖಂಡರಾಗಿ ಶ್ರೀ ಹನುಮಾನ ನಾಟ್ಯ ಸಂಘ ಎಂಬ ಸಂಘ ಕಟ್ಟಿ ಈ ಸಂಘದ ಮೂಲಕ ತಾವೇ 'ಗಂಗೆ'ಯ ಪಾತ್ರವನ್ನು ಸಮರ್ಥವಾಗಿ ಅಭಿನಯಿಸಿ ಯಶಸ್ವಿ ಕಲಾವಿದನೆನಿಸಿಕೊಂಡರು.

'ಸಂಗ್ಯಾ ಬಾಳ್ಯಾ' ಬಯಲಾಟದಲ್ಲಿ ಗಂಗೆ ಕಥಾ ನಾಯಕಿ ಈ ಸಾಮಾಜಿಕ ಬಯಲಾಟದಲ್ಲಿ ಗಂಗೆಯ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ 'ಸಂಗ್ಯಾ ಬಾಳ್ಯಾ' ಬಯಲಾಟಕ್ಕೆ ನಾವಲಗಿ ಸಂಗ್ಯಾ ಬಾಳ್ಯಾ ಎಂಬ ಹೆಸರು ಬರುವಂತೆ ಶ್ರಮಿಸಿದ ಕೀರ್ತಿ ಮಲ್ಲಪ್ಪನವರದು. ಇವರ ಜೊತೆಯಾಗಿಯೇ ಭೀಮಪ್ಪ ಕಟಗೇರಿ, ಬಸಪ್ಪ ಹಳಬರ, ಸದಪ್ಪ ಬಿಳಿಗಾಂವಿ, ಹಣಮಂತ ಗಣಿ, ಹಣಮಂತ ಕಂಚು, ಸದಪ್ಪ ಶೇಗುಣಿಸಿ ಸದಪ್ಪ ಹಲ್ಯಾಳ ಇವರುಗಳ ಈ ಕಂಪನಿಯಲ್ಲಿ ತಮಗೆ ಕೊಟ್ಟಂತ ಪಾತ್ರಗಳನ್ನು ಸಮರ್ಥವಾಗಿ ಅಭಿನಯಿಸಿ ಈ ಬಯಲಾಟಕ್ಕೊಂದು ಹೊಸ ರೂಪ ತಂದು ಕೊಟ್ಟರು.

ಕೇವಲ ಒಂದು ಮನೆಯನ್ನು ನಡೆಸಲಾಗದ ಇಂದಿನ ಆಧುನಿಕ ಯುಗದಲ್ಲಿ ಬೇರೆ ಬೇರೆ ಮನಸ್ಸುಗಳನ್ನು ಕೂಡಿಸಿ ಸಂಘ ನಡೆಸುವುದೆಂದರೆ ಕಷ್ಟದ ಮಾತೇ ಸರಿ. ಅಂತರದಲ್ಲಿಯೂ ಸಹ ಸತತವಾಗಿ ನಾಲ್ಕು ದಶಕಗಳಿಂದ ಈ ಬಯಲಾಟದ ಗುಂಗು ಬಡಿಸಿಕೊಂಡ ಮಲ್ಲಪ್ಪನವರು. ಈ ಕಲೆ ಉಳಿವಿಗಾಗಿ ಹಲವಾರು ಯುವಕರಿಗೆ ಈ ಬಯಲಾಟದ ತರಬೇತಿ ನೀಡಿ ಯಶಸ್ವಿ ನಿರ್ದೇಶಕರು ಎನಿಸಿಕೊಂಡಿದ್ದಾರೆ. ಇವರ ನೇತೃತ್ವದಲ್ಲಿ ಈ ಬಯಲಾಟ ಆಕಾಶವಾಣಿಯಲ್ಲಿ ಪ್ರಸಾರವಾಗಿದೆ ಮತ್ತು "ನಾವಲಗಿ ಸಂಗ್ಯಾ ಬಾಳ್ಯ" ಎಂಬ ಧ್ವನಿ ಸುರುಳಿಗಳು ಸಹ ಬಿಡುಗಡೆಗೊಂಡಿವೆ. ಹುಲಿ ಹೊಟ್ಟೆಯಿಂದ ಹುಲಿಯೇ ಹುಟ್ಟುತ್ತದೆ ಎನ್ನುವಂತೆ ಕಲಾವಿದನ ಹೊಟ್ಟೆಯಲ್ಲಿ ಕಲಾವಿದ ಹುಟ್ಟಿ ನಾಡಿನ ತುಂಬೆಲ್ಲ ಹೆಸರು ಮಾಡಿರುವದು ಸಾಮಾನ್ಯ ಮಾತಲ್ಲ. ಹಲವಾರು ಎಡರು ತೊಡರುಗಳು ಬಂದರು, ಅಂಜದೆ ಅಳುಕದೆ ಧೈರ್ಯದಿಂದ ಸಂಘ ನಡೆಸಿದ ಕೆಲವೇ ಕೆಲವು ಹಿರಿಯರ ಕಲಾವಿದರಲ್ಲಿ ಮಲ್ಲಪ್ಪ ಗಣಿಯವರು ಒಬ್ಬರು. ಇಂತಹ ಪ್ರಬುದ್ಧ ಕಲಾವಿದನ ಅಭಿನಯ ನೋಡಿ ಬೆರಗಾದವರು ಹಲವು ಜನರಾದರೆ ಇವರು ಹೆಂಗಸು ಎಂದು ಅವಡಿ ಕಚ್ಚಿಕೊಂಡವರು ಸಾವಿರಾರು ಜನ ಹಲವಾರು ಸಂಘ ಸಂಸ್ಥೆಗಳು. 'ಬಹುಮುಖಿ ಕಲಾ ಸಾರ್ವಭೌಮ', 'ಕಲಾ ಪ್ರವೀಣ', 'ಶ್ರೇಷ್ಠ ಕಲಾವಿದ' ಪ್ರಶಸ್ತಿ ನೀಡಿ ಗೌರವಿಸಿವೆ. ಇವರ ಅಭಿನಯವನ್ನು ನೋಡಿ ಹಲವಾರು ಮುಖಂಡರು, ಸಾಹಿತಿಗಳು, ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹಿಸಿದ್ದಾರೆ.

ಶಾಂತಸ್ವಭಾವದ ಮಲ್ಲಪ್ಪನವರು ಶಾಂತತೆಯಿಂದಲೆ ಎಲ್ಲವನ್ನು ಸಾಧಿಸಿಕೊಂಡವರು. ಶಾಂತತೆಯು ಅವರ ವಿಶೇಷ ಗುಣವೆಂದು ಹೇಳಿದ್ದರೆ ತಪ್ಪಾಗಲಿಕ್ಕಿಲ್ಲ ಇಂತಹ ಶ್ರೇಷ್ಠ ಕಲಾವಿದನನ್ನು ಗುರುತಿಸಿ ಪ್ರೋತ್ಸಾಹಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಮಲ್ಲಪ್ಪ ಗಣಿ, ರಂಗಕಲಾವಿದರು,<br>
ಸಾ : ನಾವಲಗಿ,<br>
ತಾ : ಜಮಖಂಡಿ, ಜಿ : ಬಾಗಲಕೋಟೆ.

# ಶಿವಪ್ಪ ಕಳ್ಳೆನ್ನವರ

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮುಗಳಖೋಡ ಎಂಬ ಪುಟ್ಟ ಗ್ರಾಮದಲ್ಲಿ ತಂದೆ ಗೂಳಪ್ಪ, ತಾಯಿ ಲಕ್ಕವ್ವ ಎಂಬ ದಂಪತಿಗಳ ಉದರದಲ್ಲಿ ೧-೬-೧೯೫೦ರಲ್ಲಿ ಜನಿಸಿದರು. ಬಡತನ ಕುಟುಂಬದಲ್ಲಿ ಜನಿಸಿದ ಇವರು ಹಲವಾರು ತೊಂದರೆ ನಡುವೆಯೂ ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದರು.

೧೯೭೪ರ ಸುಮಾರಿಗೆ ಕಾಡಪ್ಪ ಹಡಪದ ನಾರಾಯಣ ಆಸಂಗಿ ಎಂಬ ವಿದ್ಯಾ ಗುರುಗಳನ್ನು ಮಾಡಿಕೊಂಡು ಈ ಬಯಲಾಟಗಳಲ್ಲಿ ಅಭಿನಯಿಸುವ ಹವ್ಯಾಸ ಬೆಳೆಸಿಕೊಂಡರು. ವೀರ ಸಿಂಧೂರ ಲಕ್ಷ್ಮಣ ನಾಟಕದಲ್ಲಿ ಲಕ್ಷ್ಮಣ ಪಾತ್ರ, ರೇಣುಕಾದೇವಿ ಮಹಾತ್ಮೆ ಬಯಲಾಟದಲ್ಲಿ ಜಮದಗ್ನಿ ಪಾತ್ರ ನಾಗರ ಪಂಚಮಿ ಬಯಲಾಟದಲ್ಲಿ ರಾಜಶೇಖರನ ಪಾತ್ರ ನಿರ್ವಹಿಸಿ ಕಲಾಪ್ರೇಕ್ಷಕರ ಪ್ರೀತಿಗೆ ಪಾತ್ರರಾಗಿದ್ದಾರೆ.

ಶ್ರೀ ಬಸವೇಶ್ವರ ನಾಟ್ಯ ಸಂಘ ಬಂಡಿ ಗಣಿ ಇವರ ಕಂಪನಿಯಲ್ಲಿ ಸತ್ಯವಾನ ಸಾವಿತ್ರಿ ಬಯಲಾಟದಲ್ಲಿ ಯಮಧರ್ಮನ ಪಾತ್ರ, ಸಂತ ಸಕ್ಕೂಬಾಯಿ ಬಯಲಾಟದಲ್ಲಿ ಮಾಧವರಾಯನ ಪಾತ್ರ ನಿರ್ವಹಿಸುತ್ತಾ ಬಂದಿದ್ದಾರೆ. ಅದು ಅಲ್ಲದೆ ಸಮರ್ಥ ಸದ್ಗುರು ಗಿರಿಮಲ್ಲೇಶ್ವರ ನಾಟ್ಯ ಸಂಘ, ಬಡಚಿ, ತಾ : ಅಥಣಿ ಇವರ ಕಂಪನಿಯಲ್ಲಿಯ ಮಹಾಸತಿ ಅನಸೂಯಾ ಬಯಲಾಟದಲ್ಲಿ ಅತ್ರಿಮುನಿ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿ ಪ್ರಬುದ್ಧ ಕಲಾವಿದರೆನಿಸಿಕೊಂಡಿದ್ದಾರೆ. ಇಷ್ಟೆಲ್ಲಾ ಪಾತ್ರಗಳನ್ನು ಬೇರೆ ಬೇರೆ ಕಂಪನಿಯಲ್ಲಿ ನಟಿಸಿದರು. ಇವರ ಯಮಪಾತ್ರ ಎಲ್ಲರ ಗಮನವನ್ನು ಸೆಳೆದಿದೆ. ದೊಡ್ಡ ಶರೀರ ಹಾಗೂ ಶರೀರಕ್ಕೆ ತಕ್ಕಂತೆ ಮೈಮಾಟ ಹೊಂದಿದ ಶಿವಪ್ಪ ಯಮನ ಪಾತ್ರಕ್ಕೆ ಹೇಳಿಮಾಡಿಸಿದ ವ್ಯಕ್ತಿ ಎಂದು ಹೇಳಬಹುದು.

ಮೊದಲು ಈ ಅಭಿನಯದ ಹುಚ್ಚು ಬಡಿಸಿಕೊಂಡ ಇವರು ೧೯೭೪ರಿಂದ ಇಲ್ಲಿಯವರೆಗೆ ವಿವಿಧ ಕಂಪನಿಯಲ್ಲಿ ತಮ್ಮ ಕಲಾಸೇವೆಯನ್ನು ಸಾದರ ಪಡಿಸುತ್ತಾ ಬಂದಿದ್ದಾರೆ. ಒಂದು ಪ್ರಯೋಗಕ್ಕೆ ಸಂಭಾವನೆ ನಿಗದಿ ಮಾಡಿ ರಂಗ ಪ್ರಯೋಗಕ್ಕೆ ಹೋಗುವ ಇವರು ಬಹಳಷ್ಟು ಕಂಪನಿಗಳು ಇವರ ಅಭಿನಯದ ತಂತ್ರಕ್ಕೆ ಮಾರು ಹೋಗಿವೆ ಎಂದು ಹೇಳಬಹುದು. ಅಂದಾಜು ೮೦೦೦ ಪ್ರಯೋಗ ಮಾಡಿರುವ ಇವರು ಒಂದು ಪ್ರಯೋಗದಿಂದ ಮತ್ತೊಂದು ಪ್ರಯೋಗಕ್ಕೆ ವಿಶೇಷವಾದುದನ್ನು ಹೊಸದನ್ನು ಪ್ರೇಕ್ಷಕರಿಗೆ ಉಣಬಡಿಸುತ್ತಾರೆಂದು ಅವರ ನಾಟಕವನ್ನು ನೋಡಿದ ಹಲವಾರು ಹಿರಿಯರು ಹೇಳುತ್ತಾರೆ. ಇವರ ಅಭಿನಯ ಹಾಗೂ ಕಲಾ ಪ್ರಬುದ್ಧತೆಯನ್ನು ನೋಡಿ ಚಿಕ್ಕಲಗುಂಡಿ, ನಾವಲಗಿ, ಚಿಮ್ಮಡ, ಜಗದಾಳ, ಮುಗಳಖೋಡ, ಮಹಾಲಿಂಗಪುರಗಳಲ್ಲಿ ಹಲವಾರು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ.

**ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ :**

೧೯೭೪ ರಿಂದ ೨೦೦೦ನೇ ಇಸ್ವಿವರೆಗೆ ನಾಟಕ, ಬಯಲಾಟಗಳಂಥ ಕಲೆಯಲ್ಲಿ ತಮ್ಮನ್ನು ತೊಡಗಿಸಿ ಆ ಕಲೆ ಉಳಿವಿಗಾಗಿ ಪರಿಶ್ರಮ ಪಟ್ಟದ್ದಕ್ಕಾಗಿ ಇವರ ಕಲೆಯನ್ನು ಪರಿಗಣಿಸಿ ೨೦೦೧ ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಇವರು ಅಕಾಡೆಮಿ ಪ್ರಶಸ್ತಿ ನೀಡಿ ಸನ್ಮಾನಿಸಿವೆ.

**ಕಲಾವಿದನ ಅಭಿಪ್ರಾಯ :** ಆಧುನಿಕ ವಿದ್ಯಮಾನಗಳಿಂದ ಜನಪದ ಕಲೆಗೆ ತೊಂದರೆಯಾಗಿದೆ. ಈ ಕಲೆ ಉಳಿವಿಗೆ ಹಲವಾರು ಜನ ನಿಸ್ವಾರ್ಥ ಸೇವೆ ಮಾಡಬೇಕು ಎಂಬುದು ಇವರ ಬಯಕೆ. ಕಲಾ ಆರಾಧನೆಯಿಂದ ನಮಗೆ ಸಮಾಜದಲ್ಲಿ ಉನ್ನತ ಸ್ಥಾನ ದೊರೆಯುತ್ತದೆ ಎನ್ನುವದು ಇವರ ಅಭಿಪ್ರಾಯವಾಗಿದೆ. ಕರ್ನಾಟಕ, ಗೋವಾ, ಮಹಾರಾಷ್ಟ್ರಗಳಲ್ಲಿ ನಾನು ಕಲಾಪ್ರದರ್ಶನ ನೀಡಿದ್ದೇನೆ ಪ್ರದರ್ಶನ ನೀಡಿದ ಸ್ಥಳದಲ್ಲಿ ದೊರೆತ ಗೌರವವನ್ನು ನಾನು ಜೀವನದಲ್ಲಿ ಮರೆಯುವದಿಲ್ಲಾ ಎನ್ನುತ್ತಾರೆ ಶಿವಪ್ಪ ಕಳ್ಳೆನ್ನವರು.

**ಶಿವಪ್ಪ ಗೂಳಪ್ಪ ಕಳ್ಳೆನ್ನವರ,**<br>
**ಸಾ : ಮುಗಳಖೋಡ,**<br>
**ತಾ : ಮುಧೋಳ, ಜಿ : ಬಾಗಲಕೋಟೆ.**

## ಶಿವಪ್ಪ ಯಲ್ಲಪ್ಪ ಮರೆನ್ನವರ

ಸುಮನಸು ಪ್ರೇಮ

ಈಹ ಮಲ್ಲವ್ವ ತಾ

ಎಂದು ಹಾಡಿ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುವ ಕಲೆ ಶಿವಪ್ಪ ಮರೆನ್ನವರ ಹತ್ತಿರ ಇದೆ. ಬಣ್ಣ ಬಡಿದು ರಂಗ ಸಜ್ಜಿಕೆಗೆ ಬಂದು ಹಾಡು ಹೇಳಿದರೆ ಪ್ರೇಕ್ಷಕರು ಎದ್ದು ಕುಣಿಯುವಂತೆ ಆಗುತ್ತಿತ್ತು ಅನ್ನುತ್ತಾರೆ ಚಿಕ್ಕ ಹಂಚಿನಾಳದ ಹಿರಿಯರು. ಮೂಲ ಉದ್ಯೋಗವಾದ ಒಕ್ಕಲುತನದ ಜೊತೆಗೆ ಸಂಗೀತದ ಗುಂಗು ಹಚ್ಚಿಕೊಂಡ ಶಿವಪ್ಪನವರು ಮೂಲತಃ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಚಿಕ್ಕ ಹಂಚಿನಾಳದವರು. ತಂದೆ ಯಲ್ಲಪ್ಪ, ತಾಯಿ ನಂದೆವ್ವ ಎಂಬ ದಂಪತಿಗಳ ಉದರದಲ್ಲಿ ೨-೫-೧೯೪೭ರಲ್ಲಿ ಈ ದಂಪತಿಗಳ ಮೂರನೇಯ ಸುಪುತ್ರನಾಗಿ ಜನಿಸಿದರು.

ಪ್ರಥಮವಾಗಿ ಸಂಪೂರ್ಣ ಹೇಮರಡ್ಡಿ ಮಲ್ಲಮ್ಮ ಬಯಲಾಟದಲ್ಲಿ ಬಸಮ್ಮನ ಪಾತ್ರ ನಿರ್ವಹಿಸಿ ಜನ ಮೆಚ್ಚುಗೆ ಗಳಿಸಿದರು. ಕೇವಲ ಪಾತ್ರವನ್ನು ನಿರ್ವಹಿಸದೇ ತಮ್ಮ ಹುಟ್ಟೂರಿನಲ್ಲಿ ಒಂದು ತಂಡವನ್ನು ಕಟ್ಟಿದರು. ಹಲವಾರು ಯುವ ಕಲಾವಿದರನ್ನು ತರಬೇತಿಗೊಳಿಸಿದರು. ತಾವು ಬಯಲಾಟ ಮಾಡುವದನ್ನು ನಿಲ್ಲಿಸಿದ ನಂತರ ದಿವಾನ್ ಮಾಸ್ತರ ಗಲಗಲಿ. ಮಲ್ಲಪ್ಪ ಮಾಸ್ತರ ಚಿಕ್ಕಲಕಿ ಇವರನ್ನು ಗುರುಗಳನ್ನಾಗಿ ಮಾಡಿಕೊಂಡು ಹಾರ್ಮೋನಿಯಂ ವಿದ್ಯೆ ಕಲಿತರು. ಈ ವಿದ್ಯೆಯನ್ನು ಪರಿಪೂರ್ಣವಾಗಿ ಕಲಿತ ನಂತರ ತಮ್ಮ ಊರಲ್ಲಿ ಶ್ರೀಮಲ್ಲಿಕಾರ್ಜುನ ನಾಟ್ಯ ಸಂಘ ಚಿಕ್ಕ ಚಂಚಿನಾಳ ಎಂಬ ಸಂಘ ಕಟ್ಟಿ ತಾವೇ ಗುರುಗಳಾಗಿ ಹೇಮರಡ್ಡಿ ಮಲ್ಲಮ್ಮ ಬಯಲಾಟವನ್ನು ಪ್ರಾರಂಭಿಸಿದರು. ಈ ತಂಡದಲ್ಲಿ ಹಲವಾರು ಯುವಕರು ಉತ್ತಮ ಅಭಿನಯದಿಂದ ಉತ್ತಮ ನಿರ್ದೇಶನದಲ್ಲಿ ನಡೆದ ಈ ತಂಡ ಯುವ ಜನ ಮೇಳಗಳಲ್ಲಿ ಸತತವಾಗಿ ೩ ವರ್ಷ ವಿಭಾಗ ಮಟ್ಟದ

ಪ್ರಶಸ್ತಿ ಪಡೆದುಕೊಂಡಿತು. ಕೆಲವೇ ಕೆಲವು ದಿನಗಳಲ್ಲಿ ಈ ತಂಡದ ಕೀರ್ತಿ ಎಲ್ಲಡೆಗೆ ಹರಡಿತು. ಈ ತಂಡದಲ್ಲಿದ್ದ ಹಲವಾರು ಯುವಕರು ಪ್ರಾಪಂಚಿಕ ಅಡಚಣೆಯಿಂದ ತಂಡ ಮುರಿದು ಹೋಯಿತು. ತಂಡ ಮುರಿದು ಹೋದರೂ ಹೆದರದ ಶಿವಪ್ಪ ಹಲವಾರು ತಂಡಗಳಿಗೆ ನಿರ್ದೇಶಕರಾಗಿ ಕಲಾ ಸೇವೆಯನ್ನು ಮುಂದೆ ವರಿಸಿದ್ದಾರೆ. ಯಂಡಿಗೇರ, ಕಣಬೂರ. ಸನಾಳ ತಂಡಗಳಲ್ಲಿ ಹಾರ್ಮೋನಿಯಂ ಗುರುಗಳಾಗಿ ತಮ್ಮ ಸೇವೆಯನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶದ ಮೂಲೆಗಳಲ್ಲಿ ಕಲಾ ಪ್ರದರ್ಶನ ನೀಡಿ ಉತ್ತಮ ಕಲಾವಿದರೆನಿಸದ್ದಾರೆ. ಈ ಬಯಲಾಟದ ಜೊತೆಗೆ ಭಜನೆ ಹಾಡುವದನ್ನು ರೂಢಿಸಿಕೊಂಡ ಇವರು ರೇಡಿಯೋ ಹಾಗೂ ದೂರದರ್ಶನದಲ್ಲಿ ತಮ್ಮ ಕಲಾಸೇವೆಯನ್ನು ನೀಡಿದ್ದಾರೆ. ಈ ಮಹಿನೀಯರಿಗೆ ಸರ್ಕಾರದಿಂದ ದೊರೆಯುವ ಯಾವ ಸೌಲಭ್ಯವು ದೊರೆತಿರುವದಿಲ್ಲ. ಆದರೆ ಯಾವದಕ್ಕೂ ವಿಚಾರಿಸಿದ ಇವರು ದೇವರ ನಾಮ ಸ್ಮರಣೆಯಿಂದ ನಮಗೆ ಸುಖ ದೊರೆಯುತ್ತದೆ ಎಂದು ಹುರುಪಿನಿಂದ ಕಲಾ ಸೇವೆ ಮಾಡುತ್ತಿದ್ದಾರೆ.

ಶಿವಪ್ಪ ಯಲ್ಲಪ್ಪ ಮರೆನ್ನವರ,
ಸಾ : ಚಿಕ್ಕ ಹಂಚಿನಾಳ,
ತಾ : ಬೀಳಗಿ, ಜಿ : ಬಾಗಲಕೋಟೆ.

## ನಿಂಗಪ್ಪ ಕಲ್ಲಪ್ಪ ನಿರಾಣಿ

ಉತ್ತರ ಕರ್ನಾಟಕದಲ್ಲಿ ಶ್ರೀಕೃಷ್ಣಪಾರಿಜಾತ, ಸಂಗ್ಯಾಬಾಳ್ಯಾ, ಹೇಮರಡ್ಡಿ ಮಲ್ಲಮ್ಮ, ನಿಜಗುಣ ಶಿವಯೋಗಿ ಇಂತ ಕೆಲವೇ ಕೆಲವು ಸಣ್ಣಾಟಗಳಲ್ಲಿ ನೆಲ್ಲೂರ ನಿಂಬೆಕ್ಕ ಒಂದು ಬಯಲಾಟ ವಿಶೇಷವಾದ ಭಕ್ತಿ ಪ್ರಧಾನವಾದ ಬಯಲಾಟ. ನೆಲ್ಲೂರು ನಿಂಬೆಕ್ಕ ನಾಟಕದಲ್ಲಿ ಮಲ್ಲಿಕಾರ್ಜುನನ ಪಾತ್ರ ನಿರ್ವಹಿಸುವವರೇ ನಿಂಗಪ್ಪ ನಿರಾಣಿ.

೧೯೪೪ರಲ್ಲಿ ತಂದೆ ಕಲ್ಲಪ್ಪ ತಾಯಿ ಯಮನವ್ವ ಎಂಬ ದಂಪತಿಗಳಿಗೆ ೪ನೆಯ ಮಗನಾಗಿ ಜನಿಸಿದರು. ಕೃಷಿಪ್ರಧಾನವಾದ ಕುಟುಂಬದಲ್ಲಿ ಹುಟ್ಟಿ ಬೆಳೆದ ಶ್ರೀಯುತರು ಕೇವಲ ೪ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ಒಕ್ಕಲುತನದ ಜೊತೆ ಜೊತೆಯಾಗಿಯೇ ಸಂಗೀತದ ಹುಲಗು ಹಿಡಿಸಿಕೊಂಡರು. ಮೊದಮೊದಲು ಊರಿನಲ್ಲಿ ಶಿವಭಜನೆಯನ್ನು ಕಲಿತು ನಂತರ ಕೆಲವರು ದಿನಗಳ ತರುವಾಯ ನಾವೇಕೆ ಒಂದು ಭಕ್ತಿಪ್ರಧಾನವಾದ ಬಯಲಾಟವನ್ನು ಮಾಡಬಾರದೆಂಬ ಬಯಕೆಯಿಂದ ಬಯಲಾಟದ ಶ್ರೇಷ್ಠ ಕಲಾವಿದ ಬಹುಮುಖ ಪ್ರತಿಭೆಯ ಸಿದ್ಧಗಿರಿಸ್ವಾಮಿ ಮಠಪತಿ ಸಾ : ಮಧುರಖಂಡಿ ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘ ಬಸವ ಹಂಚಿನಾಳ ಎಂಬ ಸಂಘ ಕಟ್ಟಿ ಈ ಸಂಘದ ಮೂಲಕ ಕಲಾ ಪ್ರಪಂಚ ಪ್ರವೇಶ ಮಾಡಿದರು.

ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘ ಬಸವ ಹಂಚಿನಾಳದ ಕಲವಿದರು
ರಾಜೇಂದ್ರ ಚೌದ್ರಿ – ನಿಂಬೆಕ್ಕ
ಗಂಗಪ್ಪ ಬೀಳಗಿ – ಮಹಾಲಿಂಗಮ್ಮ
ಮುತ್ತಪ್ಪ ಗುಡದಿನ್ನಿ – ಸತ್ಯಶೀಲಾ, ಸುಲೋಚನಾ, ಪಾರ್ವತಿ
ದುಂಡಪ್ಪ ಗುಡದಿನ್ನಿ – ಸಿರಿಯಾಳ

ನಿಂಗಪ್ಪ ನಿರಾಣಿ – ಮಲ್ಲಿಕಾರ್ಜುನ

ಶಂಕ್ರಪ್ಪ ತಂಬಾಕ – ಮಹಾಲಿಂಗ

ಯಂಕಪ್ಪ ತಳವಾರ – ನಾಗಾನಂದ

ದುಂಡಪ್ಪ ಮೇಡ್ಲಿ – ಧನಪಾಲ

ಶಿವುಕುಮಾರ ಹೀರೆಮಠ – ಚಿಲ್ಲಾಳ

ಹಾರ್ಮೋನಿಯಂ – ಮುಂಡಲಿಂಕಪ್ಪ ಗಾಣಿಗೇರ

ತಬಲ – ಸಿದ್ಧಯ್ಯ ಮಠಪತಿ

ಈ ಮೇಲೆ ತಿಳಿಸಿದ ಎಲ್ಲ ಕಲಾವಿದರನ್ನು ಮೇಳೈಸಿಕೊಂಡು ಸುಮಾರು ೩೦ ವರ್ಷಗಳಿಂದ ಈ ಕಲಾ ದೇವತೆಯ ಆರಾಧನೆಯನ್ನು ಮಾಡುತ್ತ ನಡೆದವರು ನಿಂಗಪ್ಪ ನಿರಾಣಿ ಅವರು ತಾವು ಬೆಳೆಯುವದರ ಜೊತೆಗೆ ತಮ್ಮ ಕಲಾ ಬಳಗವನ್ನು ಬೆಳೆಸಿದ ನಿಂಗಪ್ಪನವರು ವೃತ್ತಿಯಿಂದ ಕೃಷಿಕರಾದರು, ಪ್ರವೃತ್ತಿಯಿಂದ ಕಲಾವಿದರಾಗಿ ಕಲಾ ಪ್ರಪಂಚಕ್ಕೆ ಹೊಸ, ಹೊಸ ಮೆರಗು ನೀಡಿದವರು.

ಕರ್ನಾಟಕ, ಆಂಧ್ರ, ಗೋವಾ, ಮಹಾರಾಷ್ಟ್ರಗಳಲ್ಲಿ ಅಂದಾಜು ೫೦೦೦ ಪ್ರಯೋಗಗಳನ್ನು ನೀಡಿ ಪ್ರೇಕ್ಷಕರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಈ ಜನಪದ ಕಲೆಯನ್ನು ಉಳಿಸಬೇಕು, ಬೆಳೆಸಬೇಕೆಂಬ ಮಹತ್ವಾಕಾಂಕ್ಷೆ ನನ್ನದು. ಯಾರಾದರು ಕಲಿಯಲು ಮುಂದೆ ಬಂದರೆ ನಾನು ಸ್ವ ಸಂತೋಷದಿಂದ ಕಲೆಯನ್ನು ಕಲಿಸುತ್ತೇನೆ. ಈ ಭಕ್ತಿ ಪ್ರಧಾನವಾದ ಬಯಲಾಟ ಮಾಡುವದರಿಂದ ನಮ್ಮ ಮನಸ್ಸಿಗೆ ನೆಮ್ಮದಿ ಸಿಗತೈತಿ ಎನ್ನುತ್ತಾರೆ ನಿಂಗಪ್ಪ. ಎಂತಹ ತೊಂದರೆಗಳನ್ನು ಬಂದರು ತಂಡವನ್ನು ಮುರಿಯದೇ ಮುನ್ನುಗ್ಗಿಸಿಕೊಂಡು ಬಂದಿದ್ದೇನೆ ಈ ಕಲೆ ಬೆಳೆಯಬೇಕು ಎಂಬುದು ನನ್ನ ಹಿರಿಯಾಸೆ ಯಾಗಿದೆ ಎನ್ನುತ್ತಾರೆ ನಿಂಗಪ್ಪ ನಿರಾಣಿ ಅವರು.

ನಿಂಗಪ್ಪ ಕಲ್ಲಪ್ಪ ನಿರಾಣಿ,<br>ಸಾ : ಬಸವ ಹಂಚಿನಾಳ,<br>ತಾ : ಬೀಳಗಿ, ಜಿ : ಬಾಗಲಕೋಟೆ.

# ಸದಾಶಿವ ಮಲ್ಲಪ್ಪ ಹೂಗಾರ

ಜಮಖಂಡಿಯಿಂದ ಸುಮಾರ ೨೦ ಕಿ. ಮೀ. ಪಶ್ಚಿಮಾಭಿಮುಖವಾಗಿ ಚಲಿಸಿದರೆ ಸಿಗುವ ದೊಡ್ಡ ಊರು ಬನಹಟ್ಟಿ. ಇಂತಹ ದೊಡ್ಡ ಗ್ರಾಮದ ಮಲ್ಲಪ್ಪ ಮತ್ತು ಕೃಷ್ಣವ್ವಾ ಎಂಬ ಶರಣ ದಂಪತಿಗಳ ಉದರದಲ್ಲಿ ೫-೫-೧೯೩೪ರಲ್ಲಿ ಸದಾಶಿವ ಜನಿಸಿದರು. ೫ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಸ್ವ ಗ್ರಾಮದಲ್ಲಿ ಮುಗಿಸಿಕೊಂಡು ತಮ್ಮ ೧೨ನೇ ವಯಸ್ಸಿನಲ್ಲಿ ಶ್ರೀ ಮಲಕಪ್ಪ ಹೂಗಾರ ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಸಂಬಾಳ ವಾದ್ಯವನ್ನು ನುಡಿಸುವುದನ್ನು ಕಲಿತುಕೊಂಡರು. ಕಲಿತ ವಿದ್ಯೆಯನ್ನು ಹಲವಾರು ಮಠಗಳಲ್ಲಿ ಪ್ರದರ್ಶನ ನೀಡಿ ಉತ್ತಮ ಕಲಾವಿದರೆಂದು ಗುರುತಿಸಿಕೊಂಡರು. ಶ್ರೀಕೃಷ್ಣ ಪಾರಿಜಾತದ ದಿಗ್ಗಜರುಗಳಾದ ಕೌಜಲಗಿ ನಿಂಗಮ್ಮ, ಲೋಕಾಪುರದ ದೇಶಪಾಂಡೆ, ದುಂಡಪ್ಪ ಸುಣದೋಳಿ, ಮುರಿಗೆಪ್ಪ ಸೋರಗಾಂವಿ, ಟಕ್ಕಳಕಿ ವಿಠಲರಾವ್, ಜುಮಖಂಡಿ ಅಪ್ಪಾಲಾಲ ಮೊದಲಾದವರ ಪಾರಿಜಾತ ಕಂಪನಿಯಲ್ಲಿ ತಬಲಾ ಸಾತ್ ನೀಡಿ ಉತ್ತಮ ಕಲಾವಿದರೆನಿಸಿಕೊಂಡರು. ಹಲವಾರು ಪೂಜ್ಯರ ಸಮ್ಮುಖದಲ್ಲಿ ಸಂಬಾಳವಾದನ ಹಾಗೂ ತಾಳ ಸಂಗೀತ ಸೇವೆ ಗೈದರು.

ದೇವಾಲಯ, ಮಠಗಳಿಂದ ಸದಾಶಿವರ ಸಂಚಾರ ಸಾಹಿತ್ಯ, ಸಾಂಸ್ಕೃತಿಕ ವಲಯಗಳಲ್ಲಿ ವಿಸ್ತರಿಸಿಕೊಂಡಿದ್ದು, ರಾಜ್ಯದ ರಾಜಧಾನಿಯಿಂದ ದೂರದ ದೆಹಲಿಯವರೆಗೆ ಕೊಲ್ಕತ್ತಾದಿಂದ ಮುಂಬೈವರೆಗೆ ಅವರ ಕಾರ್ಯಕ್ಷೇತ್ರ ಬೆಳೆದು ನಿಂತಿತು. ಸಾರ್ಕ್ ದೇಶಗಳ ದಕ್ಷಿಣ ಏಶಿಯಾ ಉತ್ಸವದಲ್ಲಿ ಅಂತರ ರಾಷ್ಟ್ರೀಯ ಉತ್ಸವದಲ್ಲಿ, ಅಪನಾ ಉತ್ಸವ, ಮದ್ರಾಸ್, ಪಾಂಡಿಚೇರಿ ಹಲವಾರು ಪ್ರಮುಖ ನಗರಗಳಲ್ಲಿ ತಮ್ಮ ಕಲಾ ಪ್ರದರ್ಶನ ನೀಡಿ ನೋಡುಗರಿಗೆ ರಸದೌತಣ ಉಣಬಿಡಿಸಿದ್ದಾರೆ.

ಹಳ್ಳಿಯಲ್ಲಿ ಜನಿಸಿದ ಸದಾಶಿವ ಅವರು ರಾಷ್ಟ್ರಮಟ್ಟದವರೆಗೆ ಹೆಸರು ಮಾಡಿದ್ದು

ಸಾಮಾನ್ಯ ಮಾತೇನಲ್ಲ. ನಾಡಿನ ಹಲವಾರು ಗಣ್ಯಮಾನ್ಯರು ಇವರ ಕಲಾ ಪ್ರದರ್ಶನ ನೋಡಿ ಶಬ್ಬಾಷ್ ಎಂದು ಹುರುಪು ತುಂಬಿದ್ದಾರೆ. ಅದು ಅಲ್ಲದೆ ಕನ್ನಡ ನಾಡಿನಲ್ಲಿ ನಡೆಯುವ ಹಲವಾರು ರಾಷ್ಟ್ರೀಯ ಉತ್ಸವಗಳು ಮೈಸೂರ ಉತ್ಸವ, ಕರಾವಳಿ ಉತ್ಸವ, ನವರಸಪುರ ಉತ್ಸವ, ಹಂಪಿ ಉತ್ಸವ, ಪಟ್ಟದ ಕಲ್ಲು ಉತ್ಸವ ಹೀಗೆ ಹಲವಾರು ಪ್ರದೇಶಗಳಲ್ಲಿ ತಮ್ಮ ಕಲಾ ಸೇವೆ ನೀಡಿದ್ದಾರೆ.

ಮೈಸೂರಿನಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಂಬಾಳ ವಾದನ ನುಡಿಸಿ ಪ್ರೇಕ್ಷಕರನ್ನು ಖುಷಿಪಡಿಸಿದ್ದಾರೆ. ಸದಾ ಚಟುವಟಿಕೆಯಿಂದ ಇರುವ ಶ್ರೀಯುತರು ಅಖಂಡ ೫೦ ವರ್ಷಗಳಿಂದ ಸತತವಾಗಿ ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಯಾವ ಹಮ್ಮು ಬಿಮ್ಮುಗಳಿಲ್ಲದೆ ಸದಾ ಹಸನ್ಮುಖಿಯಾಗಿ ಕಲಾ ದೇವತೆ ಸೇವೆ ಮಾಡುತ್ತಿದ್ದಾರೆ.

ಸದಾಶಿವ ಮಲ್ಲಪ್ಪ ಹೂಗಾರ,
ಸಾ : ಬನಹಟ್ಟಿ,
ತಾ : ಜಮಖಂಡಿ, ಜಿ : ಬಾಗಲಕೋಟೆ.

## ವೆಂಕಪ್ಪ ಅಂಬಾಜಿ ಸುಗತೇಕರ

ಅನುಬಾರದೆನೆಂದನೆ
ಅಂಬಾ ನಿನಗೆ ॥

ಎಂದು ಸ್ತುತಿಪದಗಳನ್ನು ಹಾಡಿ ನಾಡಿನ ತುಂಬೆಲ್ಲಾ ಜನರ ಮನಸ್ಸು ಸೂರೆಗೊಂಡವರು ವೆಂಕಪ್ಪ ಸುಗತೇಕರ ಅವರು ಮೂಲತಃ ಬಾಗಲಕೋಟೆಯವರಾದ ಶ್ರೀಯುತರು ತಂದೆ ಅಂಬಾಜಿ ಹಾಗೂ ತಾಯಿ ಯಲ್ಲಮ್ಮರ ಪ್ರೀತಿಯ ಪುತ್ರರಾಗಿ ೧೯೫೮ರಲ್ಲಿ ಜನಿಸಿದರು. ಓದು ಬರಹ ಬಾರದು. ಇವರು ತಮ್ಮ ಮನೆತನದ ಉದ್ಯೋಗವಾದ ಗೊಂದಲಿ ಹಾಡುಗಾರಿಕೆಯನ್ನು ಇವರ ಸೋದರ ಮಾವಂದಿರಾದ ಶ್ರೀ ಹನಮಂತಪ್ಪ ಗುರುಡಕರ ಸಾ : ಕೆರೂರ ಇವರ ಹತ್ತಿರ ಈ ಗೊಂದಲಿ ಹಾಡುಗಳನ್ನು ಕಲಿತು ನಾಡಿನ ವಿವಿಧ ಭಾಗಗಳಲ್ಲಿ ತಮ್ಮ ಕಲಾಸೇವೆಯನ್ನು ನೀಡಿದ್ದಾರೆ. ೧೯೭೨ ರಿಂದ ಆಕಾಶವಾಣಿ ಕಲಾವಿದರಾಗಿ ಸೇವೆಸಲ್ಲಿಸುತ್ತಿದ್ದು ದೂರದರ್ಶನ ಚಂದನದಲ್ಲಿ ಇವರ ಹಾಡುಗಾರಿಕೆ ಪ್ರಸಾರವಾಗಿದೆ. ಅದು ಅಲ್ಲದೆ ಚಂದನದಲ್ಲಿ ಇವರ ಸಂದರ್ಶನ ಕೂಡ ಆಗಿದೆ. ಈ ಹಾಡುಗಾರಿಕೆ ನಶಿಸಬಾರದೆಂಬ ಉದ್ದೇಶದಿಂದ ತಮ್ಮ ಮಗನಿಗೆ ಹಾಡುಗಾರಿಕೆಯನ್ನು ಕಲಿಸಿದ್ದಾರೆ. ದೆಹಲಿ ಬೆಳಗಾಂವ, ಧಾರವಾಡ, ದಸರಾ ಉತ್ಸವ, ಮೈಸೂರ, ಹಂಪಿ ಉತ್ಸವ, ಚಾಲುಕ್ಯ ಉತ್ಸವ ಹೀಗೆ ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ತಮ್ಮ ಪ್ರದರ್ಶನವನ್ನು ನೀಡಿದ್ದಾರೆ.

ಪರಂಪರಾಗತವಾಗಿ ಕೆಲವು ಮತದವರು ತಮ್ಮ ಮನೆಯ ಮದುವೆ, ಮುಂಜುವೆ ಹಾಗೂ ಹಬ್ಬ ಹರಿದಿನಗಳಲ್ಲಿ ಗೊಂದಲು ಹಾಕಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಇಡಿ ರಾತ್ರಿಯಲ್ಲಾ ದೇವಿಯ ಪುರಾಣಕ್ಕೆ ಸಂಬಂಧಿಸಿದ ಪುರಾಣ ಕತೆಗಳನ್ನು ತಮ್ಮದೆ ಆದ ವಿಶೇಷ ಶೈಲಿಯಲ್ಲಿ ಹಾಡಿ ಸಂದರ್ಭಕ್ಕೆ ತಕ್ಕಂತೆ ಹಾಸ್ಯ

ಚಟಾಕೆಗಳನ್ನು ಹಾರಿಸಿ ನೋಡುಗರನ್ನು ಆನಂದ ಸಾಗರದಲ್ಲಿ ತೇಲಿಸುತ್ತಾ ದೇವಿಯ ಸೇವೆಯಲ್ಲಿ ತೊಡಗುವ ಕಲೆಯನ್ನು ಮೈಗೂಡಿಸಿಕೊಂಡವರು. ಈ ಸುಗತೇಕರ ಅವರು ಈ ಹಾಡುಗಾರಿಕೆಯಿಂದ ನಮ್ಮಲ್ಲಿದ್ದ ದುಗುಡ ದುಮ್ಮಾನ ಮಾಯವಾಗಿ ನೆಮ್ಮದಿ ಸಿಗತೈತಿ ಎನ್ನುತ್ತಾರೆ ಸುಗುತೇಕರ ಕುಟುಂಬದವರು. ಇವರ ಹಾಡುಗಾರಿಕೆಯನ್ನು ಕೇಳಿ ಕಮತಗಿ ಕಂಪನಿಯವರು ಇವರ ಹಾಡುಗಳನ್ನು ಧ್ವನಿ ಸುರಳಿ ಮಾಡಿಕೊಂಡಿದ್ದು ಉತ್ತಮವಾದ ಹಾಡುಗಳ ಸಂಗ್ರಹವೆನಿಸಿದೆ. ಈ ದೇವಿ ಹಾಡುಗಳ ಜೊತೆಯಾಗಿಯೇ ಪುರಂದರದಾಸರ ಪದಗಳು, ಶಿಶುನಾಳ ಷರೀಫ್ ಸಾಹೇಬರ ಪದಗಳು ಹಲವಾರು ಜನಪ್ರಿಯ ಕತೆಗಳನ್ನು ಹೇಳುವ ಕಲೆಯನ್ನು ಮೈಗೂಡಿಸಿಕೊಂಡಿರುವ ಸುಗತೇಕರವರು. ನಾಡಿನ ತುಂಬೆಲ್ಲ ಹೆಸರು ಮಾಡಿದವರು.

**ಪ್ರಶಸ್ತಿಗಳು** : ಇವರ ಅಖಂಡ ೫೦ ವಸಂತಗಳ ಕಲಾ ಸೇವೆಯನ್ನು ಕಂಡು ಬಾಗಲಕೋಟೆ ಜಿಲ್ಲಾ ಆಡಳಿತ ಸನ್ಮಾನಿಸಿ ಗೌರವಿಸಿದೆ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ೨೦೦೪ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಹುಬ್ಬಳ್ಳಿ, ಕೆರೂರ ಬಿಜಾಪೂರ, ಗಜೇಂದ್ರಗಡ, ಬೀಳಗಿ, ಮುಧೋಳಗಳಲ್ಲಿ ಹಲವಾರು ಸಂಘ ಸಂಸ್ಥೆಗಳನ್ನು ಸನ್ಮಾನಿಸಿ ಪುರಸ್ಕರಿಸಿವೆ.

**ಕಲಾವಿದನ ಅಭಿಪ್ರಾಯಗಳು :** ಈ ಕಲೆ ನಶಿಸಬಾರದು ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಿಸಬೇಕು ಈ ಕಲೆ ಉಳಿವಿಗಾಗಿ ನನ್ನ ಮಗನಿಗೆ ಈ ಕಲೆಯನ್ನು ಕಲಿಸಿದ್ದೇನೆಂದು ಅತಿ ಹೆಮ್ಮೆಯಿಂದ ಹೇಳುವರು ವೆಂಕಪ್ಪನವರು.

**ವೆಂಕಪ್ಪ ಅಂಬಾಜಿ ಸುಗತೇಕರ,**
**೩೩ನೇ ಸೆಕ್ಟರ್ ಮನೆ ನಂ. ೧೨೭,**
**RTO ಆಫೀಸ್ ಹಿಂದೆ, ನವನಗರ, ಬಾಗಲಕೋಟೆ,**

## ಕಿಷ್ಟಪ್ಪ ಸೈದಪ್ಪ ಬೆಳ್ಳುಬ್ಬಿ

ತತ್ವ ನೀತಿ ಪದದ ಅರ್ಥ
ತಿಳಿಲಾರ್ದಕ ದಂತ ಕತೆ ಬೇಡತಾರ ಕುಂತ ಜನಾ
ಬೃಷ್ಠ ಕಲಿ ಎಂಬುವಂತ
ಶ್ರೇಷ್ಠವಾದ ಗ್ರಾಮವಿತ್ತು
ಅಷ್ಟ ಶ್ರೀ ಎಂಬುವಂತ ಶ್ರೀಮಂತರ

ಎಂದು ಸ್ವರ ತೆಗೆದು ಹಾಡಿದರೆ ಕುಂತ ನಿಂತ ಜನರೆಲ್ಲಾ ಎದ್ದು ಕುಣಿದಾಡಿ ಬಹುಮಾನ ಕೊಡುತ್ತಿದ್ದರು. ಎತ್ತರ ನಿಲವುಳ್ಳ ನೀಳ ಕಾಯದ ಕಿಷ್ಟಪ್ಪ ಜಮಖಂಡಿ ತಾಲೂಕಿನ ಚಿನಗುಂಡಿಯಲ್ಲಿ ತಂದೆ ಸೈದಪ್ಪ ತಾಯಿ ಬಾಳವ್ವ ಎಂಬ ದಂಪತಿಗಳ ಹೊಟ್ಟೆಯಿಂದ ೧೯೫೨ರಲ್ಲಿ ಜನಿಸಿದರು.

ಈ ಮುಗ್ಧ ಸ್ವಭಾವದ ಬಾಲಕನಿಗೆ ಶಿಕ್ಷಣ ಕಲಿಸುವದು ತಂದೆ ತಾಯಿಗೆ ತೊಂದರೆಯಾಯಿತು. ಕುಲಕಸಬು ಆದ ಕುರಿಕಾಯುವದನ್ನು ನಿರ್ವಹಿಸಲು ಹೇಳಿದ ಪ್ರಕಾರ ಅದರ ಜೊತೆಯಾಗಿಯೇ ಡೊಳ್ಳಿನ ಹಾಡುಗಳನ್ನು ಕಾಶಿರಾಮ ಕಲಬೀಳಗಿ, ರಾಮಚಂದ್ರಪ್ಪ ಯಾದವಾಡರನ್ನು ವಿದ್ಯಾ ಗುರುಗಳನ್ನಾಗಿ ಮಾಡಿಕೊಂಡು ಹಾಡುಗಳನ್ನು ಕಲಿತರು. ಸತತವಾಗಿ ಮೂರು ದಿವಸ ಹಾಡುವಷ್ಟು ಹಾಡುಗಳನ್ನು ನೆನಪಿನ ಬುತ್ತಿಯಲ್ಲಿ ಸಂಗ್ರಹಿಸಿಕೊಂಡಿರುವ ಕೃಷ್ಟಪ್ಪನವರ ಜ್ಞಾಪಕ ಶಕ್ತಿ ಎಲ್ಲರೂ ಮೆಚ್ಚುವಂತಹದು. ಈ ಹಾಡುಗಾರಿಕೆಯನ್ನು ನಮ್ಮ ಆನಂದಕ್ಕಾಗಿ ಹಾಡುತ್ತೇವೆ ಹೊರತಾಗಿ ಮತ್ತಾವುದು ಲಾಭದ ಆಸೆ ನಮಗಿಲ್ಲ ಎನ್ನುತ್ತಾರೆ ಕೃಷ್ಟಪ್ಪನವರು.

ಶ್ರೀ ಅಮೋಘ ಸಿದ್ದೇಶ್ವರ ಡೊಳ್ಳಿನ ಮೇಳಕಟ್ಟಿ, ಆ ತಂಡದಲ್ಲಿ ಯುವಕಲಾವಿದರಾದ ಸಿದ್ದಪ್ಪ ಪೂಜಾರಿ, ಭೀಮಪ್ಪ ಅಂಬಿಸಾಬು ಮುತ್ತಗೇರಿ

ಎಂಬುವಂತಹ ಕಲಾವಿದರನ್ನು ಕೂಡಿಸಿಕೊಂಡು ನಾಡಿನ ತುಂಬೆಲ್ಲಾ ಉತ್ತಮವಾದ ಸೇವೆ ಸಲ್ಲಿಸಿದ್ದಾರೆ. ಪ್ರಸಿದ್ಧ ಡೊಳ್ಳಿನ ಹಾಡುಗಳ ತಂಡಗಳಾದ ತಿಮ್ಮಾಪೂರ, ತೇರದಾಳ, ಬಂಟನೂರ ತಂಡಗಳು ನಮಗೆ ಒಳ್ಳೆಯ ಜೋಡಿ ಎನ್ನುತ್ತಾರೆ, ಸಹ ಕಲಾವಿದರಾದ ಸಂಗಪ್ಪ ಕೂವಳ್ಳಿಯವರು. ಇಷ್ಟೆಲ್ಲ ಸೌಕರ್ಯಗಳಿದ್ದರೂ ಯಾವುದನ್ನು ಬಯಸದೆ ಸಾದಾ ಜೀವನ ನಡೆಸಿಕೊಂಡು ನಮ್ಮ ಸಂತೃಪ್ತಿಗಾಗಿ ಜನರನ್ನು ಸಂತೃಪ್ತಿ ಗೊಳಿಸುವುದಕ್ಕಾಗಿ ಹಾಡುಗಾರಿಕೆ ಮಾಡುವ ಈ ತಂಡ ಸರ್ಕಾರದಿಂದ ಯಾವದೇ ಸಹಾಯ ಸೌಲಭ್ಯವನ್ನು ಪಡೆಯದೇ ಸತತವಾಗಿ ೪೦ ವರ್ಷಗಳಿಂದ ಕಲಾಸೇವೆಯಲ್ಲಿ ತೊಡಗಿಸಿಕೊಂಡು ಈ ಹಾಡುಗಳ ಪರಂಪರೆ ಉಳಿವಿಗೆ ಸಾರ್ಥಕ ಪ್ರಯತ್ನ ಮಾಡುತ್ತಿದ್ದು ಸ್ವಂತ ಪ್ರಯತ್ನದಿಂದ ಎರಡು ಡೊಳ್ಳಿನ ಹಾಡುಗಳ ಧ್ವನಿ ಸುರುಳಿಗಳನ್ನು ಸಹ ಹೊರ ತಂದಿದ್ದು ಇಲ್ಲಿ ದುಡಿಯುತ್ತಿರುವ ಯಾವೊಬ್ಬ ಕಲಾವಿದರಿಗೆ ಯಾವದೇ ಹಮ್ಮು ಬಿಮ್ಮುಗಳಿಲ್ಲದೆ ತಂಡ ಮುನ್ನಡೆಸಿದ್ದಾರೆ. ಕಿಷ್ಟಪ್ಪ ಬೆಳ್ಳುಬ್ಬಿಯವರು ಈ ಡೊಳ್ಳಿನ ಹಾಡುಗಳ ಜೊತೆಯಾಗಿ ಕರ್ಬಲಾ ಪದ ಹಾಗೂ ಮುಂಡಗಿ ಪದಗಳನ್ನು ಹಾಡುವುದು ರೂಢಿಸಿಕೊಂಡಿದ್ದು, ಹಲವಾರು ರೀತಿಯ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಇಂತಹ ಶ್ರೇಷ್ಠ ಕಲಾವಿದರಿಗೆ ಇನ್ನೂವರೆಗೆ ಯಾವದೇ ಸರ್ಕಾರದ ಸೌಲಭ್ಯಗಳು ದೊರೆಕಿಲ್ಲ ಎಂಬುದು ಅವರ ತಂಡದ ಇನ್ನೋರ್ವ ಸದಸ್ಯ ಭೀಮಸಿ ನಾಯಕರ ಅಳಲಾಗಿದೆ. ಹಾಡುವುದರಲ್ಲಿ ಭಗವಂತನನ್ನು ಕಂಡ ಅಪರೂಪದ ಕಲಾ ಪ್ರತಿಭೆ ಕೃಷ್ಟಪ್ಪ ಬೆಳ್ಳುಬ್ಬಿಯವರು.

**ಕಿಷ್ಟಪ್ಪ ಸೈದಪ್ಪ ಬೆಳ್ಳುಬ್ಬಿ,**
**ಸಾ : ಚಿನಗುಂಡಿ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

## ವೀರಪ್ಪ ಸಂಗಪ್ಪ ಶೆಟ್ಟರ

ದ್ರಾಕ್ಷಿ, ದಾಳಿಂಬೆ, ಚಿಕ್ಕು ಹಣ್ಣುಗಳಿಗೆ ಹೆಸರಾದ ಕಲಾದಗಿ ಹಿಂದೊಂದು ದಿನ ಜಿಲ್ಲಾಕೇಂದ್ರವಾಗಿ ನಾಡನ್ನಾಳಿದ ಕೇಂದ್ರ ಸ್ಥಾನ, ತನ್ನದೇ ಆದ ವಿಶಿಷ್ಟತೆಗಳಿಂದ ನಾಡವರನ್ನು ಆಕರ್ಷಿಸುವ ಕಲಾದಗಿಯಲ್ಲಿ ವೀರಪ್ಪ ಶೆಟ್ಟರು ಜನಿಸಿದರು.

ಅಚ್ಚ ಗ್ರಾಮೀಣ ಸೊಗಡಿನಿಂದ ಕೂಡಿದ ಈ ನಾಡಿದಲ್ಲಿ ಹುಟ್ಟಿದ ವೀರಪ್ಪನವರನ್ನು ಜಾನಪದ ಕಲೆಗಳು ಆಕರ್ಷಿಸಿದವರು ಅದರ ಫಲವಾಗಿ ದೊಡ್ಡಾಟಗಳು ಬಹಳ. ಅವರ ಮೇಲೆ ಪರಿಣಾಮ ಬಿರಿದವು. ೧೯೨೭ರ ಸುಮಾರಿಗೆ ಮುದಕಣ್ಣಾ, ಶೆಟ್ಟೆಪ್ಪನವರ, ನೂರಂದಪ್ಪ ಶೆಟ್ಟೆಪ್ಪನವರು, ಹೊಳಬಸಯ್ಯ ಹೀರೆಮಠರಂತಹ ಹಿರಿಯ ಕಲಾವಿದರ ಪ್ರಭಾವಕ್ಕೆ ಒಳಗಾಗಿ ಶ್ರೀಕೃಷ್ಣಪಾರಿಜಾತ, ದೊಡ್ಡಾಟಗಳಲ್ಲಿ ಸ್ತ್ರೀಪಾತ್ರಗಳನ್ನು ಮಾಡುತ್ತಾ ಕಲಾ ಸೇವೆಯಲ್ಲಿ ತೊಗಿದರು. ದೊಡ್ಡಾಟದ ರಂಗ ಪ್ರಯೋಗದ ಎಲ್ಲ ತಂತ್ರಗಾರಿಕೆಯನ್ನು ಬಲ್ಲವರಾಗಿದ್ದ ವೀರಪ್ಪ ಶೆಟ್ಟರು ಬಹು ಬೇಗನೆ ಹೆಸರು ಗಳಿಸಿದರು. ಆಧುನಿಕ ಯುಗದಲ್ಲಿ ಈ ಜಾನಪದ ಕಲೆಗಳು ನಶಿಸುತ್ತವೆಂಬ ಕೊರಗಿನಿಂದ ಬಾಗಲಕೋಟೆಯಲ್ಲಿ ನಟರಾಜ ದೊಡ್ಡಾಟ ಕಲಾವಿದರ ಸಂಘ (ಕೌಲಪೇಟೆ) ಎಂಬ ಸಂಘಕಟ್ಟಿ ಹಲವಾರು ಯುವ ಕಲಾವಿದರನ್ನು ತರಬೇತಿಗೊಳಿಸುವ ಸಾಹಸಕ್ಕೆ ಕೈ ಹಾಕಿದರು. ದೊಡ್ಡಾಟಗಳು ಐತಿಹಾಸಿಕವೇ ಇರಲಿ ಪೌರಾಣಿಕವೆ ಇರಲಿ ಅವುಗಳನ್ನು ಸೂಕ್ಷ್ಮತೆಯಿಂದ ತರಬೇತಿಗಾರರಿಗೆ ತಿಳಿಸಿ ಸಾವಕಾಶವಾಗಿ ರಂಗಮಂಟಪಕ್ಕೆ ತಂದು ಪ್ರೇಕ್ಷಕರಿಂದ ಸೈಎನಿಸಿಕೊಳ್ಳುತ್ತಿದ್ದರು.

ದೊಡ್ಡಾಟದ ಭಾಗವತರಾಗಿ, ನಿರ್ದೇಶಕರಾಗಿ ಉತ್ತಮ ಕೆಲಸಮಾಡುವುದರ ಜೊತೆಗೆ ಹಲವಾರು ಜಾನಪದ ಶೈಲಿಯ ದೊಡ್ಡಾಟ ಬರೆದಿದ್ದಾರೆ. ಒಟ್ಟು ೧೫ ಮೂಡಲ ಪಾಯ ದೊಡ್ಡಾಟ (ನಾಟಕೀಯ ದೊಡ್ಡಾಟಗಳು) ೬ ನಾಟಕಗಳು, ೧೦೦ಕ್ಕೂ ಹೆಚ್ಚು

ನಾಟಕ, ದೊಡ್ಡಾಟ ಕಲೆಗಳ ಕುರಿತು ಲೇಖನಗಳನ್ನು ಬರೆದಿದ್ದು ಅವು ಹಲವಾರು ಪತ್ರಿಕೆಗಳಲ್ಲಿಯೂ ಸಹ ಪ್ರಕಟವಾಗಿವೆ. ಇಷ್ಟೆಲ್ಲ ಕಲೆಯನ್ನು ಕರತಲಾಮಲಕ ಮಾಡಿಕೊಂಡ ವೀರಪ್ಪ ಶೆಟ್ಟರ ಪ್ರಸಿದ್ಧ ಶಿಲ್ಪಿಗಳೂ ಆಗಿದ್ದರು. ಕೇವಲ ಒಂದೇ ಪ್ರಕಾರಕ್ಕೆ ಬಗ್ಗಿ ಕೆಲಸ ಮಾಡುವ ಕಲಾವಿದರನ್ನು ನಾವು ಬಹಳ ಜನರನ್ನು ಕಂಡೊದ್ದೇವೆ. ಇಂತಹ ಎಲ್ಲ ಕಲೆಗಳನ್ನು ಮೈಗೂಡಿಸಿ ಆ ಕಲೆಯ ಬಗ್ಗೆ ಸಮತೋಲನವನ್ನು ಕಾಯ್ದುಕೊಳ್ಳಬೇಕೆಂದರೆ ಕಠಿಣ ಪರಿಶ್ರಮ ಬೇಕು, ತಾಳ್ಮೆ ಬೇಕು ಮತ್ತು ಆ ಕಲೆಯ ಮೇಲೆ ಪ್ರೀತಿ ಬೇಕಾಗುತ್ತದೆ. ಅಂತಹ ಅಪರೂಪದ ಕಲಾ ಪ್ರತಿಭೆ ವೀರಪ್ಪ ಶೆಟ್ಟರು.

ನಟ ನಿರ್ದೇಶಕರಾಗಿದ್ದ ವೀರಪ್ಪ ಶೆಟ್ಟರು ದೊಡ್ಡಾಟಕ್ಕೆ ಬೇಕಾಗುವ ಕತೆಗಳನ್ನು ಆರಿಸಿಕೊಂಡು ಹೊಸ ತಲೆಮಾರಿಗೆ ರುಚಿಸುವ ಹಾಗೆ ದೊಡ್ಡಾಟ ಮತ್ತು ಸಣ್ಣಾಟಗಳನ್ನು ರಚಿಸಿದ್ದಾರೆ. ದೊಡ್ಡಾಟಗಳು ದೊಡ್ಡ ಮಟ್ಟದಲ್ಲಿ ಬೆಳೆಯಲಿ ಮುಂದಿನ ಜನತೆ ದಾರಿದೀಪವಾಗಲಿ ಎಂಬುದು ಅವರ ಹೆಬ್ಬಯಕೆಯಾಗಿತ್ತು. ಇವರ ನಿರ್ದೇಶನದ ದೊಡ್ಡಾಟಗಳು ಬೆಂಗಳೂರ ದೂರದರ್ಶನ ಹಾಗೂ ಧಾರವಾಡ ಮತ್ತು ಗುಲಬರ್ಗಾ ಆಕಾಶವಣಿಯಲ್ಲಿ ಹಲವಾರು ಸಲ ಪ್ರಸಾರಗೊಂಡಿವೆ. ಮೇಘರಾಜ ಬಯಲಾಟ ಮಂಡಳಿ ಬಾದಾಮಿ, ನಟರಾಜ ಕಲಾವಿದರ ಸಂಘ ಬಾಗಲಕೋಟೆ, ಬಾಲಸೇವಾ ದೊಡ್ಡಾಟ ಮ್ಯಾಳ ಕೆರೂರ, ಬಸವದಳ ಗುಲಬರ್ಗಾ ಇತ್ಯಾದಿ ಜಾನಪದ ತಂಡಗಳಿಗೆ ತರಬೇತಿ ನೀಡಿ ಅಟ್ಟದ ಮೇಲೆ ತಂದು ಖುಷಿಪಟ್ಟವರು. ಜಾನಪದ ಕಲೆಗಾಗಿ ತಮ್ಮ ಜೀವನವನ್ನೆ ಮುಡುಪಾಗಿಟ್ಟ ಶ್ರೇಷ್ಠ ಕಲಾವಿದರನ್ನು ಗುರುತಿಸುವಂಥ ಕಾರ್ಯ ಇನ್ನೂವರೆಗೂ ಆಗದೆ ಇರುವದು ಅವರ ಶಿಷ್ಯಬಳಕ್ಕೆ ಬಹಳ ನೋವುಂಟು ಮಾಡಿದೆ. ಒಟ್ಟು ೨೧ ಕೃತಿ ರಚಿಸಿದ್ದು ಅವುಗಳಲ್ಲಿ ಕೇವಲ ೪ ಕೃತಿಗಳು ಮುದ್ರಣಗೊಂಡಿವೆ. ಇನ್ನುಳಿದ ಕೃತಿಗಳನ್ನು ಮುದ್ರಿಸುವ ಜವಾಬ್ದಾರಿ, ಸಂಸ್ಕೃತಿ ವಲಯದಲ್ಲಿರುವ ಎಲ್ಲರ ಜವಾಬ್ದಾರಿಯಾಗಿದೆ. ತಮ್ಮ ಜೀವಿತದ ದಿನಗಳನ್ನು ಬ್ರಹ್ಮಚಾರಿಗಳಾಗಿ ಕಳೆದು, "ಸಮಾಜ ನನಗೇನು ಕೊಟ್ಟಿದೆ ಎನ್ನುವದಕ್ಕಿಂತ ಸಮಾಜಕ್ಕೆ ನಾನೇನು ಕೊಟ್ಟಿದ್ದೇನೆ" ಎಂಬ ತತ್ವದಲ್ಲಿ ಈ ಸಮಾಜಕ್ಕೆ ಅದರಲ್ಲೂ ಈ ಜಾನಪದ ಕಲೆ ಉಳಿವಿಗಾಗಿ ದಣಿವರಿಯದೆ ದುಡಿದ ಪ್ರಾಮಾಣಿಕ ವ್ಯಕ್ತಿ ವೀರಪ್ಪ ಶೆಟ್ಟರು. ಅವರೆಲ್ಲಾ ಕೃತಿಗಳನ್ನು ಒಂದೆಡೆ ಸೇರಿಸಿ ಮುದ್ರಿಸುವ ಕೆಲಸ ಜರೂರಾಗಿ ನಡೆಯಬೇಕು ಅಂದರೆ ಅವರ ಶ್ರಮ ಸಾರ್ಥಕವಾಗುತ್ತದೆ.

ವೀರಪ್ಪ ಸ. ಶೆಟ್ಟರ,
ಕಾಲಪೇಟ, ಬಾಗಲಕೋಟೆ,
ಜಿ : ಬಾಗಲಕೋಟೆ.

# ಕರಿಯಪ್ಪ ನಿಂಗಪ್ಪ ಗದ್ದನಕೇರಿ

ಬಾಲ ಸೇವಾ ದೊಡ್ಡಾಟ ಸಂಘ ಕಟ್ಟಿ, ಈ ಸಂಘದ ಮೂಲಕ ಹೆಸರು ಮಾಡಿದವರು ಕರಿಯಪ್ಪನವರ ಪೂರ್ವಜರು. ಆ ಪರಂಪರೆಯನ್ನು ಮುಂದುವರಿಸಿ ಕೊಂಡು ಬಂದವರು ಕರಿಯಪ್ಪ ಗದ್ದನಕೇರಿಯವರು. ಮೂಲತಃ ಬಾದಾಮಿ ತಾಲೂಕಿನ ಕೆರೂರ ಗ್ರಾಮದವರಾದ ಇವರು ವೃತ್ತಿಯಿಂದ ನೇಕಾರಿಕೆ ಮಾಡಿದವರು. ಪ್ರವೃತ್ತಿಯಿಂದ ಈ ದೊಡ್ಡಾಟ ಕಲೆಗಾಗಿ ತಮ್ಮ ಜೀವನ ಸವೆಸಿದವರು. ತಂದೆ ನಿಂಗಪ್ಪನವರ ಮಾರ್ಗದರ್ಶನದಲ್ಲಿ ಪಾಂಡಪ್ಪ ಕೆನ್ನೂರು ಹಾಗೂ ಪುಂಡಲೀಕ ಪಲ್ಲೇದರನ್ನು ವಿದ್ಯಾ ಗುರುಗಳನ್ನಾಗಿ ಮಾಡಿಕೊಂಡು ದೊಡ್ಡಾಟ ಕಲೆಗಾಗಿ ತಮ್ಮನ್ನು ತೊಡಗಿಸಿಕೊಂಡರು.

ಇಂದ್ರನ ಗರ್ವಭಂಗ, ಜಲಂಧರನ ವಧ, ನಳ-ದಮಯಂತಿ ಸ್ವಯಂವರ, ಭೂಕೈಲಾಸ ಪ್ರಾರ್ಥನೇಯ, ಸುಗಂಧ ಪುಷ್ಪ, ದ್ರುಪದಕನ್ಯೆ, ಹಲವಾರು ದೊಡ್ಡಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿ ಉತ್ತಮ ಕಲಾವಿದರೆನಿಸದ್ದಾರೆ. ಈಗಲೂ ಸಹ ವೀರ ಅಭಿಮನ್ಯುವಾಗಿ ರಂಗ ಪ್ರವೇಶ ಮಾಡಿ ವೀರಾವೇಶದ ಮಾತುಗಳನ್ನಾಡಿ ಪ್ರೇಕ್ಷಕ ಸಮೂಹವನ್ನು ಮಂತ್ರ ಮುಗ್ಧರನ್ನಾಗಿಸುವ ಕಲೆ ಇವರಲ್ಲಿದೆ.

ಬೆಳಗಾಂವಿ, ಧಾರವಾಡ ತುಮ್ಮನಕಟ್ಟಿ, ಬಾಗಲಕೋಟೆ, ಇಲಕಲ್, ರಾಮದುರ್ಗಗಳಂತ ನಗರಗಳಲ್ಲಿ ಇವರ ಕಲಾಪ್ರದರ್ಶನವಾಗಿದೆ ಹಾಗೂ ಆಕಾಶವಾಣಿ ಮತ್ತು ದೂರದರ್ಶಗಳಲ್ಲಿ ಇವರ ಕಲೆ ಪ್ರಸಾರಗೊಂಡಿದೆ. ಸ್ವತಃ ಕಲಾವಿದರಲ್ಲದೆ ಈ ದೊಡ್ಡಾಟ ಕಲೆ ಪರಂಪರೆ ಉಳಿವಿಗೆ ಹಲವಾರು ಶಿಷ್ಯಂದಿರಿಗೆ ಈ ಕಲೆಯನ್ನು ಕಲಿಸಿ ಮುಂದಿನ ಪೀಳಿಗೆಗೆ ಈ ಕಲೆಯ ಬಗ್ಗೆ ಮಾಹಿತಿ ನೀಡಿದ್ದಾರೆ. ಇವರ ಅಭಿನಯ, ಸಂಘಟನೆ ಕಂಡು ಹಲವಾರು ಸಂಘ ಸಂಸ್ಥೆಗಳು ಹಾಗೂ ಜಿಲ್ಲಾ ಆಡಳಿತ ಬಾಗಲಕೋಟೆ

ಇವರನ್ನು ಸನ್ಮಾನಿಸಿ ಗೌರವಿಸಿವೆ. ಆಧುನಿಕ ಯುಗದಲ್ಲಿ ನಶಿಸುತ್ತಿರುವ ಕಲೆ ಬೆಳವಣಿಗೆಗೆ, ಉಳಿವಿಗಾಗಿ ದುಡಿಯುತ್ತಿರುವ ಇವರ ಶ್ರಮ ಸಾರ್ಥಕವಾದದು.

ಕರಿಯಪ್ಪ ನಿಂಗಪ್ಪ ಗದ್ದನಕೇರಿ,
ಶ್ರೀ ಬನಶಂಕರಿ ದೇವಸ್ಥಾನದ ಮುಂದೆ,
ಹೊಸಪೇಟ ಗಲ್ಲಿ, ಕೆರೂರು,
ತಾ : ಬಾದಾಮಿ ಜಿ : ಬಾಗಲಕೋಟೆ.

# ಮುದಕವ್ವ ಪೂಜಾರಿ

"ಎಲ್ಲರಿಗೂ ಎಲ್ಲಮ್ಮ" ಎಂಬ ಹಿರಿಯರ ಮಾತಿನಂತೆ ಅಂಥ ಶಕ್ತಿ ದೇವತೆ ಹಾಡುಗಳನ್ನು ಜನ ಮೆಚ್ಚುವಂತೆ ಹಾಡಿ ತಾನು ಖುಷಿ ಪಟ್ಟು ಕೇಳುಗರನ್ನು ಖುಷಿಪಡಿಸುವ ಕಲೆಯನ್ನು ಮೈಗೂಡಿಸಿಕೊಂಡವರು ಮುದಕವ್ವ ಪೂಜಾರಿ.

ಮೂಲತಃ ಹುನಗುಂದದಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೇ ತಮ್ಮ ತಾಯಿಯವರಿಂದ ಹಾಡುಗಾರಿಕೆಯನ್ನು ಕಲಿತುಕೊಂಡರು. ಒಂದಕ್ಷರ ಕಲಿಯದ ಮುದಕವ್ವ ಹೀಗೆ ಹಾಡುತ್ತಾಳೆಂಬುದನ್ನು ಯಾರು ಸಹ ಊಹಿಸಲಿಲ್ಲ.

ಉದಯಯ್ಯಾಳೆದಲ್ಲಿ ಎದ್ದೆವ್ವ ರೇಣುಕ
ಶಿವನ ಕೈಯಲ್ಲಿ ವರನ ಬೇಡಿದಳು
ನೀ ಯಾರ ಮಗಳ ನೀ ಯಾರ ಸೊಸಿಯವ್ವ
ಎಲ್ಲಿಂದ ಬಂದೆವ್ವ
ತಾಯಿ-ತಂದಿಯ ಹೆಸರ ಹೇಳಽಂದಾನ

ಎಂದು ಚೌಡಕಿ ಬಾರಿಸುತ್ತ ಹಾಡುತ್ತಾ ನಿಂತರೇ ಹಾಡು ಕೇಳಿ ಬಹುಮಾನ ಕೊಡದವರಿಲ್ಲ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವರು ಹಲವರು, ಅವಳ ಅನುಭವದ ಕೈಯಿಂದ ನುಡಿಸುವ ಚೌಡಕಿಯ ನಾದ, ಲಯ, ಗತ್ತು, ಪದ್ಯಕ್ಕೆ ತಕ್ಕಂತೆ ಭಾವನೆ ವ್ಯಕ್ತಗೊಳಿಸುವದನ್ನು ಕೇಳಿಯೇ ಆನಂದಿಸಬೇಕು. ದಿನಾಬೆಳಗಾದರೆ ಊರೆಲ್ಲ ಸುತ್ತಾಡಿ ಬಂದ ಹಣದಿಂದ ಸಂತೃಪ್ತ ಜೀವನ ಸಾಗಿಸುವ ಮುದಕವ್ವ ತನ್ನೊಂದಿಗೆ ಇತರೇ ಸಹಕಾವಿದರಾದ ಹುಲಗವ್ವ ಮತ್ತು ಹುಲಗವ್ವ ಭಾವಿಕಟ್ಟಿಯವರೊಡನೆ ಹಾಡುಗಾರಿಕೆಯಲ್ಲಿ ತೊಡಗಿ ಕೊಂಡಿದ್ದಾಳೆ. ತನ್ನ ಈ ಇಳಿವಯಸ್ಸಿನಲ್ಲಿಯೂ ಸಹ ಹಾಡುಗಾರಿಕೆಯನ್ನು ಬಿಡದೆ ಆ ಹಾಡುಗಳನ್ನು ಹಾಡಿ ತನ್ನ ಆಯುಷ್ಯ ವೃದ್ಧಿಗೊಳಿಸುತ್ತಾ ಜೀವನ ಕಳೆಯುತ್ತಿದ್ದಾಳೆ. ಕೇವಲ ಗ್ರಾಮೀಣ

ಪ್ರದೇಶದಲ್ಲಿ ಸುತ್ತಾಡಿ ಕಾಲಕಳೆಯದೆ ಇಲ್ಲಿಯ ಹಿರಿಯ ಸಾಹಿತಿಗಳ ಮಾರ್ಗದರ್ಶನದಲ್ಲಿ ನಾಡಿನ ರಾಷ್ಟ್ರೀಯ ಉತ್ಸವಗಳಾದ ಮೈಸೂರು ದಸರಾ ಉತ್ಸವ, ಜಿಲ್ಲಾ ಜಾನಪದ ಕಲಾಮೇಳ, ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನಗಳಂತ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿಕೊಳ್ಳುವ ಮೂಲಕ ಈ ನಾಡಿನ ಹಿರಿಮೆಯನ್ನು ಹಾಗೂ ಅವರಲ್ಲಿದ್ದ ಕಲೆಯನ್ನು ನಾಡಿಗೆ ತಿಳಿಸಿದ್ದಾರೆ. ಧಾರವಾಡ, ಗುಲಬುರ್ಗ, ಬೆಂಗಳೂರು ಆಕಾಶವಾಣಿಗಳಲ್ಲಿ ಇವರ ಹಾಡುಗಳು ಹಲವಾರು ಸಲ ಪ್ರಸಾರಗೊಳ್ಳುವುದರ ಮೂಲಕ ಮುದಕವ್ವ ಒಬ್ಬಳು ಶ್ರೇಷ್ಠ ಕಲಾವಿದೆ ಎಂಬುದನ್ನು ಸಾಬೀತು ಗೊಳಿಸಿವೆ. ಮಲ್ಲಿಕಾರ್ಜುನ ಹಿರೇಮಠರ "ಲಕ್ಕವ್ವನ ಮಂದಿ" ಕತೆ ನಾಟಕವಾಗಿ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾಯಿತು. ಈ ನಾಟಕದ ಪ್ರದರ್ಶನದಲ್ಲಿ ಮುದಕವ್ವ ಚೌಡಕಿ ಪದಗಳು ನಾಟಕಕ್ಕೆ ಒಳ್ಳೆಯ ಕಳೆಯನ್ನು ತಂದವು. ಇಂತಹ ಶ್ರೇಷ್ಠ ಕಲಾವಿದೆಯ ಹಾಡುಗಳನ್ನು "ಜಾನಪದ ಲೋಕದ" ಸಂಸ್ಥಾಪಕರಾದ ಡಾ. ಎಚ್. ಎಲ್. ನಾಗೇಗೌಡರು ಧ್ವನಿ ಸಂಗ್ರಹಗೊಳಿಸಿ ಕೊಂಡಿದ್ದಾರೆ. ಸುಮಾರು ಆರೇಳು ದಶಕಗಳಿಂದ ಹಾಡುಗಾರಿಕೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ಉತ್ಸಾಹದ ಜೀವನ ನಡೆಸುತ್ತಿರುವ ಮುದಕವ್ವನನ್ನು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ, ಪುರಸ್ಕರಿಸಿ, ಪ್ರೋತ್ಸಾಹ ನೀಡಿ ಬೆಳೆಸಿವೆ.

ಬಾಗಲಕೋಟ ಜಿಲ್ಲಾ ಆಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರ ತಾಯಮ್ಮ ಮತ್ತು ಎಸ್. ಸಿ. ಮಲ್ಲಯ್ಯ ಜಾನಪದ ಕಲಾವಿದರ ಪ್ರಶಸ್ತಿ ಹಾಗೂ ಸಾಹಿತ್ಯ "ಸಮಾವೇಶ ಹುನಗುಂದದ ಸುವರ್ಣ ಸಂಭ್ರಮ ಪ್ರಶಸ್ತಿ" ಜೊತೆಗೆ ೨೦೦೬ರಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಪ್ರಶಸ್ತಿ ನೀಡಿ ಸನ್ಮಾನಿಸಿವೆ.

ಮುದಕವ್ವ ಮಾ. ಪೂಜಾರಿ,
ಬಾಬು ಜಗಜೀವನರಾಮ ನಗರ,
ಸಾ : ಹುನಗುಂದ, ತಾ : ಹುನಗುಂದ, ಜಿ : ಬಾಗಲಕೋಟೆ.

## ಸೋನುಬಾಯಿ ಗೋ. ಬೋಜಪ್ಪಗೋಳ

ಜಗದಂಬೆ ಜಗನ್ಮಾತೆ ಮಾಡುವೆ ನಿಮ್ಮ ಸ್ತುತಿ
ಸರ್ವ ವಿದ್ಯಾಕ ಅಧಿಪತಿ

ಎಂಬ ನಾಗೇಶಿ ಪರ ಚೌಡಕಿ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ಖುಷಿ ಪಡಿಸುವವರು ಸೋನುಬಾಯಿ ಬೋಜಪ್ಪಗೋಳ ಇವರು ಜಮಖಂಡಿ ತಾಲೂಕಿನ ಹುನ್ನೂರಿನ ತಂದೆ ಗೋವಿಂದಪ್ಪ, ತಾಯಿ ಗೌರವ್ವ ಎಂಬ ದಂಪತಿಗಳ ಉದರದಲ್ಲಿ ೧೯೫೦ರ ಸುಮಾರಿಗೆ ಜನಿಸಿದರು. ಬಡತನದಲ್ಲಿ ಹುಟ್ಟಿದ ಕುಮಾರಿಗೆ ವಿದ್ಯಾಭ್ಯಾಸ ಮಾತ್ರ ನಿಲುಕದ ಮಾತಾಗಿ ಹೋಯಿತು. ಮುಂದೆ ಹಲವಾರು ವರ್ಷಗಳು ಕಳೆದ ನಂತರ ಈ ಕಲೆಗಾರಿಕೆ ಬೆನ್ನು ಹತ್ತಿ ಕಲಿಯಬೇಕೆಂಬ ಆಸೆಯಿಂದ ರೇವಣಸಿದ್ಧಪ್ಪ ಮೀಸಿ ಲಕ್ಷ್ಮಪ್ಪ ಆಣಿ ಸಾ : ಹುನ್ನೂರ ಇವರನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಚೌಡಕಿ ಹಾಡುಗಳನ್ನು ಕಲಿತು ಮುಂದೆ ಬಂದು ಚೌಡಕಿ ಹಾಡುಗಳ ಮೇಳಶಟ್ಟಿ ತಂಡದ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸಿ ಉತ್ತಮ ಕಲಾವಿದರು ಎನಿಸಿಕೊಂಡಿದ್ದಾರೆ. ಸ್ತ್ರೀಪರ ಹಾಡುಗಳನ್ನು ಹಾಡುವ ಇವರ ತಂಡಕ್ಕೆ ತೀಕೋಟಾ ಗೌರವ್ವನ ತಂಡ ಭಲೇ ಜೋಡಿ ಎಂದು ಹೇಳುವಾಗ ಭಲೇ ಖುಷಿ ಪಡುವ ಸೋನವ್ವ ಹಾಡುಗಾರಿಕೆ ಕೇಳಿಯೇ ತೃಪ್ತಿ ಹೊಂದಬೇಕು.

ಚೌಡಕಿ ಹಾಡುಗಳಲ್ಲಿ ಬರುವ ಮೆಟ್ಟಲಗಳನ್ನು ಸಮಯಕ್ಕೆ ತಕ್ಕಂತೆ ಹಾಡಿ ಜನರಿಂದ ಆಯೇರಿ ಪಡೆಯುವ ಕಲೆ ಸೋನವ್ವನಲ್ಲಿದೆ. ಪ್ರಥಮ ಬಾರಿಗೆ ಬನಹಟ್ಟಿಯಲ್ಲಿ ಹಾಡುಗಾರಿಕೆಯನ್ನು ಪ್ರಾರಂಭಿಸಿದ ಇವರು ಇಲ್ಲಿಯವರೆಗೆ ಹಾಡುಗಾರಿಕೆಯಲ್ಲಿಯೇ ಕಾಲ ಕಳೆದು ಬಹುದೂರ ನಡೆದು ಬಂದು ಜಿಲ್ಲೆಯ ಕೆಲವೇ ಕೆಲವು ಚೌಡಕಿ ಮೇಳಗಳಲ್ಲಿ ಹುನ್ನೂರಿ ಮೇಳದ ಹೆಸರು ಮೇಲ್ಮಟ್ಟದಲ್ಲಿ ನಿಲ್ಲುತ್ತದೆ ಎಂದು ಹೇಳಬೇಕಾಗುತ್ತದೆ.

ಕೈಯಲ್ಲಿ ಚೌಡಕಿ ಹಿಡಿದು ರಂಗ ಸಜ್ಜಿಕೆ ಬಂದು "ಹುಟ್ಟಿ ಬಂದೇ ಎಲ್ಲಮ್ಮನಾಗಿ" ಎಂದು ಪದೆ ಹೇಳಿದರೆ ಇವರ ಕಂಠ ಮಾಧುರ್ಯ ಕೇಳಿ ಆನಂದರಾಗದವರನ್ನು ನಾನೆಂದು ಕಂಡಿರುವುದಿಲ್ಲಾ. ಈ ಪ್ರಬುದ್ಧ ಕಲೆಯನ್ನು ಕಂಡು ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಹಾಗೂ ನಾಡಿನ ತುಂಬೆಲ್ಲ ಪ್ರಸಿದ್ಧಿಯನ್ನು ಪಡೆದಿರುತ್ತಾರೆ. ಇವರು ಹಾಡುಗಳು ಹಲವಾರು ಸಲ ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಪ್ರಸಾರಗೊಂಡಿವೆ. ಸುಮಾರು ೩೦ ವರ್ಷಗಳಿಂದ ಅಂದಾಜು ೨೦೦೦ರ ಹಾಡುಗಾರಿಕೆಯ ಕಾರ್ಯಕ್ರಮಗಳನ್ನು ಮಾಡಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರ ಅಗಾಧ ಕಲೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಕರೆದು ಸನ್ಮಾನಿಸಿ ಗೌರವಿಸಿವೆ. ಈ ಕಲಾವಿದರಿಗೆ ಕರ್ನಾಟಕ ಸರ್ಕಾರ ಕೊಡಮಾಡುವ ಮಾಸಾಶನ ಮಾತ್ರ ದೊರೆಯುತ್ತಿದ್ದು. ಇನ್ನಿತರ ಯಾವುದೇ ಸರ್ಕಾರಿ ಪ್ರಶಸ್ತಿಗಳು ದೊರೆತಿರುವುದಿಲ್ಲಾ.

**ಸೋನುಬಾಯಿ ಗೋ. ಬೋಜಪ್ಪಗೋಳ,**
**ಸಾ : ಹುನ್ನೂರ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

# ದುರ್ಗವ್ವ ತಿಮ್ಮಪ್ಪ ಗದಿಗೆಪ್ಪಗೋಳ

ಜಮಖಂಡಿ ತಾಲೂಕಿನ ಹೂನ್ನೂರಿನ ತಿಮ್ಮಪ್ಪ ಮತ್ತು ಯಮನವ್ವ ಎಂಬ ದಂಪತಿಗಳ ಉದರದಲ್ಲಿ ೧೮-೯-೧೯೫೦ರಲ್ಲಿ ದುರ್ಗವ್ವ ಜನಿಸಿದಳು. ಹುನ್ನೂರು ಗ್ರಾಮ ಚಿಕ್ಕದಾದರು ಕಲಾ ಕ್ಷೇತ್ರದಲ್ಲಿ ತನ್ನದೆ ಹೆಸರು ಮಾಡಿದ ಕಲಾವಿದರು ಊರು. ಬಡತನದಲ್ಲಿಯೇ ಬೆಳೆದು ಬಂದ ದುರ್ಗವ್ವನಿಗೆ ಈ ಚೌಡಕಿ ಹಾಡುಗಾರಿಕೆ ಆಕರ್ಷಣೆಗೊಂಡವು.

ರೇವಣಸಿದ್ದಪ್ಪ ಮೀಸಿ, ಸಾ : ಜಮಖಂಡಿ ಮತ್ತು ಲಕ್ಷ್ಮಣ ಶಿ. ಆನಿ, ಸಾ : ಹುನ್ನೂರು ಇವರುಗಳನ್ನು ವಿದ್ಯಾಗುರುಗಳನ್ನಾಗಿ ಮಾಡಿಕೊಂಡು ಚೌಡಕಿ ಹಾಡುಗಳನ್ನು ಕಲಿತರು. ಪ್ರಥಮ ಬಾರಿಗೆ ಜಮಖಂಡಿ ತಾಲೂಕಿನ ಬನಹಟ್ಟಿ ಎಂಬ ನಗರದಲ್ಲಿ ಕಲಾ ದೇವತೆ ವೇದಿಕೆ ಮೇಲೆ ನಿಂತು ತಮ್ಮ ಕಂಚಿನ ಕಂಠದಿಂದ ಹಾಡುವದನ್ನು ಪ್ರಾರಂಭಿಸಿದರು.

ಹುಟ್ಟಿ ಬಂದಿ ಎಲ್ಲಮ್ಮನಾಗಿ
ನಿನ್ನ ಮದುವೆ ಮಾಡಿ ಕೊಟ್ಟಾರವಾ
ಜಮದಗ್ನಿಗೆ

ಎಂದು ಚೌಡಕಿಗೆ ತಾಳ ಮೇಳೈಸಿಕೊಂಡು ಹಾಡತೊಡಗಿದರೆ ಎಲ್ಲ ನೋಡುಗರಿಗೆ ಸಂತೋಷವನ್ನು ಮಾಡುವಂತ ವಾತಾವರಣ ಸೃಷ್ಟಿಯಾಗುತ್ತದೆ. "ಖುಷಿ ಪಡುವದು ಧರ್ಮ ಖುಷಿಪಡಿಸುವದು ಪರರ ಧರ್ಮ" ಎಂಬ ಮಾತಿನಂತೆ ಎಲ್ಲ ನೋಡುಗರನ್ನು ಸಂತೋಷಗೊಳಿಸುವ ಕಲೆ ದುರ್ಗವ್ವನಲ್ಲಿ ಇದೆ. ಪ್ರಸಿದ್ಧಿ ಚೌಡಕಿ ಹಡುಗಾರ್ತಿ ತೀಕೋಟಾದ ಗೌರವ್ವ ಚಲವಾದಿ (ಹರದೇಶಿ) ಗಂಡು ಪದಗಳನ್ನು ಹಾಡುವ ಅವರಿಗೆ ನಮಗೆ ಬಲು ಜೋಡಿ. ಸತತವಾಗಿ ೩ ರಾತ್ರಿಗಳ ಕಾಲ ಅವರೊಂದಿಗೆ ವಿರುದ್ಧ ಪದಗಲನ್ನು

ಹಾಡಿ ಜನರಿಂದ ಬಹುಮಾನ ತೆಗೆದುಕೊಂಡಿದ್ದೆವೆಂದು ದುರ್ಗವ್ವ ತಮ್ಮ ಹಾಡಿನ ಅನುಭವವನ್ನು ಹಂಚಿಕೊಳ್ಳುತ್ತಾರೆ. ಓದು ಬರಹ ಬಾರದ ದುರ್ಗವ್ವ ಸುಮಾರು ಸಾವಿರಾರು ಪದಗಳನ್ನು ಕಂಠಪಾಠಹಾಡಿ ಹಾಡುವುದನ್ನು ನೋಡಿದರೆ ಅನಿಸುತ್ತದೆ. ಎಂತಹ ನೆನಪಿನ ಶಕ್ತಿ ಇದೆ ಎಂದು ಸುಮಾರು ೪ ದಶಕಗಳಿಂದ ಚೌಡಕಿ ಮೇಳ ಕಟ್ಟಿ ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ನಾಡಿನ ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ತಮ್ಮ ಕಲಾ ಸೇವೆಯನ್ನು ಮಾಡಿ ಜನರ ಮನ್ನಣೆಗೆ ಒಳಗಾಗಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಇವರ ಹಾಡುಗಾರಿಕೆ ಹಲವಾರು ಸಲ ಪ್ರಸಾರಗೊಂಡಿವೆ. ಸುಮಾರು ದಿನಗಳಿಂದ ಈ ಕಲಾ ಸೇವೆಯಲ್ಲಿ ತೊಡಗಿಕೊಂಡಿರುವ ಇವರು ಈ ಚೌಡಕಿ ಮೂಲ ಹಾಡುಗಳನ್ನು ಎಳ್ಳಷ್ಟು ಚ್ಯುತಿಬರದಂತೆ ಹಾಡುತ್ತ ಹಲವಾರು ಯುವ ಕಲಾವಿದರಿಗೆ ಈ ಮೂಲ ಹಾಡುಗಳನ್ನು ಕಲಿಸಬೇಕೆಂಬ ಬಯಕೆ ಹೊಂದಿದ್ದು ಯುವ ಕಲಾವಿದರು ಮುಂದೆ ಬರಬೇಕು ಈ ಕಲೆ ನಮ್ಮಿಂದ ನಶಿಸಿಹೋಗಬಾರದೆಂದು ಆತಂಕ ವ್ಯಕ್ತ ಪಡಿಸುತ್ತಾಳೆ ದುರ್ಗವ್ವ.

ಕಲಾ ಸೇವೆ ಮಾಡುವದರಿಂದ ನೆಮ್ಮದಿಯಿಂದ ಕಾಲ ಕಳೆಯಬಹುದುದೆಂದು ವಿನಮ್ರವಾಗಿ ಹೇಳುವ ಇವರ ಮಾತು ಕೇಳಿದರೆ ಅಷ್ಟು ಸಂತೋಷವಾಗುತ್ತದೆ. ಇನ್ನು ಹಾಡುಗಳನ್ನು ಕೇಳಿದರೆ ಮತ್ತಷ್ಟು ಸಂತೋಷ. ಇಂತಹ ಹಿರಿಯ ಕಲಾವಿದೆಯನ್ನು ಸನ್ಮಾನಿಸಿವೆ. ಕೇವಲ ಕರ್ನಾಟಕ ಸರ್ಕಾರ ಕೊಡಮಾಡುವ ಮಾಸಾಶನದಿಂದ ತೃಪ್ತಿ ಜೀವನ ನಡೆಸುತ್ತ ಈ ಹಾಡುಗಾರಿಕೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತ ಬಂದ ಈ ಕಲಾ ಚೇತನಕ್ಕೆ ಇನ್ನಷ್ಟು ಪ್ರೋತ್ಸಾಹ ದೊರೆಯಬೇಕಾಗಿದೆ.

**ದುರ್ಗವ್ವ ತಿ. ಗದಿಗೆಪ್ಪಗೋಳ,**
**ಸಾ : ಹುನ್ನೂರ,**
**ತಾ : ಜಮಖಂಡಿ, ಜಿ : ಬಾಗಲಕೋಟೆ.**

## ಜಕ್ಕವ್ವ ಸತ್ಯಪ್ಪ ಶಿರಬೂರ

ಗಂಡಸರು ಗಂಡುಪದ ಹೇಳುವದು. ಹೆಂಗಸರು ಹೆಣ್ಣ ಪದ ಹೇಳುವದು ಮೊದಲಿನಿಂದ ಬಂದ ಪದ್ಧತಿ. ಆದರೆ ಹೆಣ್ಣು ಮಗಳು ಗಂಡು ಪದ ಹೇಳಿ ಪ್ರೇಕ್ಷಕರನ್ನು ಹುರುದುಂಬಿಸುವ ಕಲೆಯನ್ನು ಹೊಂದಿದವಳು ಜಕ್ಕವ್ವ ಶಿರಬೂರ.

ಮೂಲತಃ ಬಿಜಾಪೂರ ತಾಲೂಕಿನ ಕೃಷ್ಣಾಜನದಿ ತೀರ ಪ್ರದೇಶವಾದ ಶಿರಬೂರಿನ ಸತ್ಯಪ್ಪ ಮತ್ತು ಹೊಳಿಯವ್ವ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು. ಕಡು ಬಡತನದಲ್ಲಿ ಜನಿಸಿದ ಜಕ್ಕವ್ವನಿಗೆ ವಿದ್ಯೆ ನಿಲುಕದ ಮಾತಾಗಿತ್ತು. ತಂದೆ ಸತ್ಯಪ್ಪ ಗೀ ಗೀ ಹಾಡುಗಳನ್ನು ಕಲಿಯಬೇಕೆಂದು ಶ್ರೀ ಈಶ್ವರಪ್ಪ ಗಲಗಲಿ ಇವರಲ್ಲಿ ಹಾಡು ಕಲಿಯುತ್ತಿದ್ದನು. ಬಹಳ ದಿನಗಳವರೆಗೆ ಹಾಡುಗಳನ್ನು ಕಲಿಸಿದರು. ಸತ್ಯಪ್ಪನಿಗೆ ಹಾಡುಗಳು ಬರದಾದವು. ಸಿಟ್ಟಿಗೆದ್ದ ಈಶ್ವರಪ್ಪ ಬೈಗಳುಗಳ ಸುರುಮಳೆಯನ್ನು ಕೇಳಿ ಜಕ್ಕವ್ವ ಈಶ್ವರಪ್ಪನವರೇ ನೀವು ನಮ್ಮ ತಂದೆಯವರನ್ನು ಬೈಯಕೂಡದು. ಎರಡು ದಿನ ಸಮಯ ಕೊಡಿರಿ ಆ ಹಾಡು ನಾನು ಹಾಡಿ ತೋರಿಸುತ್ತೇನೆಂದು ಹೇಳಿದಾಗ ಈಶ್ವರಪ್ಪ ಗಾಬರಿಯಾಗಿ ಆಕೆಯ ಮಾತು ಕೇಳಿ ಎರಡು ದಿನ ಸಮಯಕೊಟ್ಟನು. ಮುಂದೆ ಎರಡು ದಿನದನಂತರ ಹಾಡು ಹೇಳಿದಾಗ ಈಶ್ವರಪ್ಪ ಹಾಗೂ ಸತ್ಯಪ್ಪ ಇಬ್ಬರೂ ಗಾಬರಿಯಾಗಿ ಅಂದಿನಿಂದ ಸತ್ಯಪ್ಪ ಹಾಡುಕಲಿಯುವದನ್ನು ನಿಲ್ಲಿಸಿ ಜಕ್ಕವ್ವನಿಗೆ ಗೀ ಗೀ ಹಾಡು ಕಲಿಸಲು ಪ್ರಾರಂಭಿಸಿದರು. ಹರದೇಶಿ (ಗಂಡು) ಹಾಡುಗಳನ್ನು ಕಲಿತು ನಾಡಿನ ತುಂಬೆಲ್ಲ ಹೆಸರು ಮಾಡಿದರು. ಕೇವಲ ೮ ವರ್ಷಗಳಲ್ಲಿ ಈ ಹಾಡುಗಾರಿಕೆ ಕಲಿತು ಜಕ್ಕವ್ವ ಪ್ರಸಿದ್ಧ ನಾಗೇಶಿ (ಹೆಣ್ಣು) ತಂಡಗಳಾದ ಕೆಸರಗೊಪ್ಪ ರಾಣವ್ವ, ಮಧುರ ಬಂದಿ ರಾಯಪ್ಪ, ಗೆನ್ನೂರ ಲಚ್ಚವ್ವ, ಬಾಡಗಿಯ ಗಂಗವ್ವ, ಯಂಕಂಚಿಯ ಮನವ್ವರಂತ ಪ್ರಸಿದ್ಧ ತಂಡಗಳನ್ನು ಎದುರಿಸಿ ಸಮರ್ಥವಾಗಿ ಅವರ ವಿರುದ್ಧ ಹಾಡು ಹೇಳಿ ಬಹುಮಾನ ಪಡೆಯುತ್ತಿದ್ದರು.

ಪ್ರಥಮ ಬಾರಿಗೆ ಬೀಳಗಿ ತಾಲೂಕಿನ ಯಡಹಳ್ಳಿಯಲ್ಲಿ ಶ್ರೀ ಹಜರತ ದರ್ಗಾದ ಉರುಸಿನಲ್ಲಿ ಹಾಡುಗಾರಿಕೆಯನ್ನು ಪ್ರಾರಂಭಿಸಿದ ಜಕ್ಕವ್ವ ಮರಳಿ ಹಿಂದೆ ನೋಡಲೇ ಇಲ್ಲ ಸತತವಾಗಿ ೯ ದಿನಗಳವರೆಗೆ ಹಾಡುಗಾರಿಕೆ ಮಾಡಿದ ಕೀರ್ತಿ ಇವಳದು. ಕರ್ನಾಟಕ, ಮಹಾರಾಷ್ಟ್ರ ಭಾಗದಲ್ಲಿರುವ ಎಲ್ಲ ನಾಗೇಶಿ ಹಾಡುಗಳ ತಂಡಗಳಿಗೆ ಹಿರಿಯರಾಗಿರುವ ಜಕ್ಕವ್ವನವರ ಹಾಡುಗಳನ್ನು ಕೇಳದ ಜನರು ಈ ಭಾಗದಲ್ಲಿ ಇಲ್ಲ. ಅಥಣಿಯಲ್ಲಿ ಸತತ ೩ ತಿಂಗಳ ಕಾಲ ಥೇಟರ್ ಹಾಡುಗಾರಿಕೆ ಮಾಡಿದ್ದಾರೆ. ಅದು ಅಲ್ಲದೆ ಶಿರಹಟ್ಟಿ, ಧಾರವಾಡಗಳಲ್ಲಿ ಥೇಟರ್ ಹಾಡುಗಾರಿಕೆ ಮಾಡಿದ್ದಾರೆ. ಹಾಡು ಹೇಳುವುದರ ಜೊತೆಗೆ ಹಾಡಿಗೆ ತಕ್ಕಂತೆ ಲಯಬದ್ಧವಾಗಿ ಹಾಡುಗಳನ್ನು ಹೇಳಿ ಜನರನ್ನು ಮಂತ್ರ ಮುಗ್ಧಗೊಳಿಸಿ ಅವರಿಂದ ಆಯೇರಿ ಪಡೆದುಕೊಳ್ಳುತ್ತಿದ್ದರು. ಇವರ ಹಾಡುಗಾರಿಕೆಯನ್ನು ಕಂಡು ಒಂದು ದಿನಕ್ಕೆ ಅಂದಿನ ಕಾಲದಲ್ಲಿ ಸುಮರ ೧೦,೦೦೦ದಷ್ಟು ಬಹುಮಾನ ಆಗಿವೆ. ಅದು ಅಲ್ಲದೆ ಧೋತರ, ಪಟಕ ಆಯೇರಿ ಮಾಡಿ ಪ್ರೋತ್ಸಾಹಿಸಿದವರು ನಮ್ಮ ಜನ. ಅವರ ಪ್ರೋತ್ಸಾಹವನ್ನು ಎಷ್ಟು ಕೊಂಡಾಡಿದರು ಕಡಿಮೆ ಎಂದು ಸೌಮ್ಯದಿಂದ ಹೇಳುವಾಗ ಜಕ್ಕವ್ವನವರ ಕಣ್ಣಲ್ಲಿ ಆನಂದದ ಬಾಷ್ಪಗಳು ಬರುತ್ತಿದ್ದವು.

ಇಂತಹ ಶ್ರೇಷ್ಠ ಕಲಾವಿದೆಯ ಕಲೆಯನ್ನು ಕಂಡ ಹಲವಾರು ಜನರು ಸಂಘ ಸಂಸ್ಥೆಗಳು ಪ್ರೋತ್ಸಾಹಿಸಿದ್ದಾರೆ. ಆದರೆ ಏನು ಮಾಡುವದು ಧ್ವನಿ ಬಿದ್ದ ಕಾರಣ ಹಾಡುಗಾರಿಕೆಯನ್ನು ನಿಲ್ಲಿಸಿದ್ದೇನೆಂದು ಅತಿ ದುಃಖದಿಂದ ಹೇಳುವ ಜಕ್ಕವ್ವ ಮನದಲ್ಲಿ ಬಹಳ ನೊಂದುಕೊಂಡಂತೆ ಕಾಣುತ್ತದೆ. ಇವರು ಅಖಂಡ ಕಲಾಸೇವೆಯನ್ನು ಕಂಡು ಸನಾದಿ ಅಪ್ಪಣ್ಣ ಕಲಾಕಾರ ಸಂಘ ಬೀಳಗಿ, ಗ್ರಾಮೀಣ ರಂಗ, ತರಂಗ, ಅಂಗನವಾಡಿ, ಆತ್ಮಾನಂದ ಗೆಳೆಯರ ಬಳಗ ಸುರೇಬಾನ, ಕನ್ನಡ ಸಾಹಿತ್ಯ ಪರಿಷತ್ತು, ಬೀಳಗಿ ಚುಟುಕು ಸಾಹಿತ್ಯ ಪರಿಷತ್ತು ಬೀಳಗಿ ಸನ್ಮಾನಿಸಿ ಪ್ರೋತ್ಸಾಹಿಸಿವೆ.

ಈ ಕಲೆ ಉಳಿಸಬೇಕು ಬೆಳೆಸಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ ಜಕ್ಕವ್ವ ಈ ಗೀ ಗೀ ಹಾಡುಗಾರಿಕೆಯ ಬಗ್ಗೆ ವಿಶೇಷವಾದ ಅಭಿಮಾನ ಮತ್ತು ಕಳಕಳಿಯನ್ನು ಇಟ್ಟುಕೊಂಡು ಬಾಳಿ ಬೆಳೆದವಳು. ಇಂತಹ ಹಿರಿಯ ಕಲಾಚೇತನಕ್ಕೆ ಸೂಕ್ತ ಅವಕಾಶಗಳು ಸಿಗಬೇಕು ಎನ್ನುವದು. ಅವರ ಮನಸ್ಸಿಗೆ ಆಸೆ ಹಾಗೂ ಎಲ್ಲ ಅಭಿಮಾನಿಗಳ ಒತ್ತಾಯವು ಆಗಿದೆ.

ಜಕ್ಕವ್ವ ಸತ್ಯಪ್ಪ ಶಿರಬೂರ,
ಸಾ : ಸಿದ್ದಾಪೂರ,
ತಾ : ಬೀಳಗಿ, ಜಿ : ಬಾಗಲಕೋಟೆ.

# ಹಣಮಂತ ದುಂಡಪ್ಪ ಬಿರಾದಾರ

ನಾಳಿ ಬಂದದ್ದು ನಮ್ಮ ನಿಮ್ಮ ಪಾಲಿಗೆ
ತಾಳಿಗೆ ಬಲು ಮೇಳಿಗೆ
ಕುರಿ ಕಾಯಾವಾ ಬೈತಾನ ತೋಳಿಗೆ

ಎಂದು ಹಾಡ ಪ್ರಾರಂಭಿಸಿದರೆ ಮುಗಿತು ಸತತ ೩ ದಿನಗಳವರೆಗೆ ಆಗಷ್ಟು ಹಾಡಿನ ಸಂಗ್ರಹ ಹಣಮಂತ ಬಿರಾದಾರ ಇವರಲ್ಲಿ ಇದೆ. ಇವರು ಬೀಳಗಿ ತಾಲೂಕಿನ ಕೊಲೂರು ಎಂಬ ಗ್ರಾಮದ ತಂದೆ ದುಂಡಪ್ಪ ತಾಯಿ ಯಮನವ್ವ ಎಂಬ ದಂಪತಿಗಳ ಉದರದಲ್ಲಿ ೧೯೩೮ರಲ್ಲಿ ಜನಿಸಿದರು. ಶಾಲೆಯ ಕಟ್ಟೆಯೂ ಹತ್ತದ ಹಣಮಂತ ಗೀ ಗೀ ಹಾಡುಗಳನ್ನು ಕೇಳಿ ಆ ಹಾಡುಗಳನ್ನು ಹಾಡುವ ಕಲೆಯನ್ನು ಹುಸೇನಸಾಬ ತೊನಿಸ್ಯಾಳ ಸಾ : ಕೋಲೂರ ಇವರಿಂದ ಕಲಿತರು. ಇವರು ಕೇವಲ ಹರದೇಶಿ ಹಾಡುಗಳನ್ನು ಹಾಡುತ್ತಿದ್ದರು. ಇವರ ಜೊತೆ ನಾಗೇಶ ಹಾಡುಗಳನ್ನು ಬ್ಯಾಡಗಿಯ ಗಂಗವ್ವ, ಮಹಾಲಿಂಗಪೂರದ ಯಮನವ್ವ, ಮದರಖಂಡಿ ರಾಯಪ್ಪ, ಕೆಸರಗೊಪ್ಪ ರಾಣವ್ವ, ಇವರು ನಮ್ಮೊಂದಿಗೆ ಉತ್ತಮ ಸ್ಪಧೆ ನೀಡುತ್ತಿದ್ದರು. ಸತತವಾಗಿ ೭ ದಿನಗಳವರೆಗೆ ಹಾಡಿದ ಕೀರ್ತಿ ನಮ್ಮದು. ಕರ್ನಾಟಕ ಬೆಳಗಾಂವ, ಗುಲಬುರ್ಗಾ, ಬಿಜಾಪೂರ ಹಾಗೂ ಹಲವಾರು ಪಟ್ಟಣಗಳಲ್ಲಿ ತಿಕೇಟು ಹಚ್ಚಿ ಹಾಡಿದ್ದೇವೆ ಎಂದು ಹೆಮ್ಮೆಯಿಂದ ಹೇಳುವಾಗ ಹಣಮಂತ ಅವರ ಕಣ್ಣಲ್ಲಿ ಆನಂದದ ಬಾಷ್ಪ ಬರುತ್ತವೆ.

ಓದು ಬರಹ ಬಾರದ ನಾನು ಈ ಕಲೆಯ ಉಳಿವಿಗಾಗಿ ಹಲವಾರು ಯುವಕರಿಗೆ ಕಲಿಸಬೇಕೆಂಬ ಬಯಕೆ ನನ್ನದು. ಆದರೆ ಯುವಕರು ಆಸಕ್ತಿ ತೋರುವುದಿಲ್ಲವೆಂದು ತಮ್ಮ ಅಳಲು ತೋಡಿಕೊಂಡರು. ಸ್ವ ಗ್ರಾಮವಾದ ಕೊಲೂರಿನಲ್ಲಿ ತಂಡ ಕಟ್ಟಿ ಸೈಯದ ಸಾಬ ತೋನಿಸ್ಯಾಳ ನಬಿಸಾಬ ಮುಲ್ಲಾ ಇವರನ್ನು ಕೂಡಿಕೊಂಡು ನಾಡಿನ ಉದ್ದಗಲಕ್ಕೂ

ಕಲಾಸೇವೆ ಮಾಡಿದ್ದಾರೆ. ಸರ್ಕಾರಿ ಕಾರ್ಯಕ್ರಮಗಳಾದ ಯುವ ಜನ ಮೇಳದಲ್ಲಿ ಭಾಗವಹಿಸಿ ತಾಲೂಕು ಜಿಲ್ಲೆ, ರಾಜ್ಯ ಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಸುಮಾರ ೨೦ ವರ್ಷದ ಬಾಲಕನಾಗಿದ್ದಾಗ ಹಾಡುವುದನ್ನು ಪ್ರಾರಂಭಿಸಿದ ಇವರು ಸುಮಾರು ೬೦೦೦ ಪ್ರಯೋಗಗಳನ್ನು ಮಾಡಿದ್ದಾರೆ. ಯಾವದೇ ಆಸೆಗೆ ಒಳಗಾಗದೆ ತಮ್ಮ ಹವ್ಯಾಸ ಮಾಡಿಕೊಂಡು ಈ ಕಲೆಯ ಉಳಿಯಲು ಎಲೆಯ ಮರೆಯ ಕಾಯಿಯಂತೆ ಸೇವೆ ಮಾಡುತ್ತಾ ನಡೆದು ಇತರೇ ಕಲವಿದರಿಗೆ ಮಾದರಿಯಾಗಿದ್ದಾರೆ. ವೃತ್ತಿಯಿಂದ ಕೃಷಿಕನಾದರೂ ಪ್ರವೃತ್ತಿಯಿಂದ ಗೀ ಗೀ ಕಲಾವಿದನಾಗಿ ಈ ಭಾಗದಲ್ಲಿ ಪ್ರಸಿದ್ಧಿ ಪಡೆಯುವುದರ ಜೊತೆಗೆ ನಾಡಿಗೆ ಹಾಗೂ ಈ ಕಲೆ ಬೆಳವಣಿಗೆಗೆ ದುಡಿದವರಲ್ಲಿ ಇವರು ಒಬ್ಬರು. ಇಂತ ಪ್ರವೀಣ ಕಲಾವಿದನಿಗೆ ಸರ್ಕಾರದಿಂದ ಸಿಗುವಂತ ಯಾವದೇ ಸಹಾಯ, ಸಹಕಾರಗಳು ಇನ್ನೂವರೆಗೂ ಸಿಕ್ಕಿರುವುದಿಲ್ಲ. ಇಂತಹ ಎಲೆಯಮರೆಯ ಕಾಯಿಯಂತಿರುವ ಬಡಕಲಾವಿದನಿಗೆ ಗುರುತಿಸುವ ಕೆಲಸಗಳು ನಡೆಯಬೇಕಾಗಿದೆ.

**ಹಣಮಂತ ದುಂಡಪ್ಪ ಬಿರಾದಾರ,**<br>
**ಸಾ : ಕೋಲೂರ,**<br>
**ತಾ : ಬೀಳಗಿ, ಜಿ : ಬಾಗಲಕೋಟೆ.**

# ಸೈದುಸಾಬ ಹುಸೇನಸಾಬ ತೊನಿಶ್ಯಾಳ

ಬೀಳಗಿ ತಾಲೂಕಿನ ಕೋಲಾರ ಗ್ರಾಮ ಕೃಷ್ಣೆಯ ದಡದಲ್ಲಿ ಸಮೃದ್ಧವಾದ ವಾತಾವರಣವಿರುವ ಪುಟ್ಟಗ್ರಾಮ, ಈ ಗ್ರಾಮಕ್ಕೆ ವಿಶೇಷವಾದಂತಹ ಇತಿಹಾಸವಿದೆ. ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ವಾತಾವರಣ ಇರುವಂತಹ ಈ ಊರಿನ ರಾಜಬಿ ಮತ್ತು ಹುಸೇನಸಾಬ ಎಂಬ ಮುಸ್ಲಿಂ ದಂಪತಿಗಳ ಉದರದಲ್ಲಿ ೧೯೪೨ರಲ್ಲಿ ಸೈದುಸಾಬ ಜನಿಸಿದರು.

ವಂಶಪರಂಪರಾಗತವಾಗಿ ಬಳುವಳಿಯಾಗಿ ಬಂದ ಗೀ ಗೀ ಹಾಡುಗಳನ್ನು, ಲಾವಣಿ ಹಾಡುಗಳನ್ನು ಅವರ ತಂದೆಯವರ ಮಾರ್ಗದರ್ಶನದಲ್ಲಿ ಕಲಿತು ಆ ಹಾಡುಗಳನ್ನು ಲಯಬದ್ಧವಾಗಿ ಹಾಡಿ ಜನರ ಪ್ರೀತಿಗೆ ಪಾತ್ರರಾದರು. ಹರದೇಶಿ (ಗಂಡಿನಪರ) ಪದಗಳನ್ನು ಹಾಡುವುದನ್ನು ರೂಢಿಸಿಕೊಂಡು ಬೆಳೆದ ಸೈದುಸಾಬ ಮೇಳ ಲಾವಣಿ ಒಂಟಿ ಲಾವಣಿ ಪದಗಳನ್ನು ಹಾಡುವುದನ್ನು ಮುಖಪಾಠ ಮಾಡಿಕೊಂಡರು. ಓದು ಬರಹಬಾರದ ಅಕ್ಷರದ ಗಂಧ ಗಾಳಿಯನ್ನು ಬಡೆಯಿಸಿಕೊಳ್ಳದ ಸೈದು ಸಾಬ ಸುಮಾರು ಆರುನೂರು ಪದಗಳನ್ನು ಹಾಡಿ ಆ ಪದಗಳ ಅರ್ಥವನ್ನು ಜನರಿಗೆ ತಿಳಿಸಿ ಹೇಳುವಷ್ಟು ಪರಿಣಿತಿ ಪಡೆದಿರಬೇಕಾದರೆ ಅವರು ಈ ಕಲೆಯ ಬಗ್ಗೆ ಇಷ್ಟ ಪ್ರೀತಿ  ಎಂತಹದು ಎಂದು ತಿಳಿಯುತ್ತದೆ. ಗೀ ಗೀ ಹಾಡುಗಳನ್ನು ಪ್ರಧಾನವಾಗಿ ಹಾಡುವದರ ಜೊತೆಯಾಗಿಯೇ ಕರ್ಬಲಾಪದ, ಬಬಲಾದಿ ಸದಾಶಿವಪ್ಪಯ್ಯನವರ ಕಾಲ ಜ್ಞಾನದ ಪದ (ಮುಂಡಗಿ ಪದ) ಭಜನೆ ಹಾಡುಗಳನ್ನು ಹಾಡಿ ಜನರಿಗೆ ಖುಷಿಪಡಿಸುವುದು ಇವರ ಮೂಲ ಉದ್ದೇಶವಾಗಿದೆ.

ಪ್ರಸಿದ್ಧ ನಾಗೇಶಿ (ಹೆಣ್ಣಿನ ಪರ ಹಾಡುವವರು) ಪದ ಹೇಳುವ ತಂಡಗಳಾದ ಬಾಡಗಿ ಗಂಗವ್ವ, ಮಹಾಲಿಂಗಪೂರದ ಯಮನವ್ವ ಮದುರಖಂಡಿ ರಾಯಪ್ಪ,


ಕೆಸರಗೊಪ್ಪ ರಾಣವ್ವರಂತ ಘಟಾನುಘಟಿಗಳೊಂದಿಗೆ ಹಾಡುಗಾರಿಕೆ ಮಾಡಿ ನೋಡುಗರಿಂದ ಪಟಕಾ ಆಯೇರಿ ಮಾಡಿಸಿಕೊಂಡ ಅನುಭವವನ್ನು ಹೇಳುವ ಸೈದುಸಾಬರು ದೀರ್ಘ ಕಾಲದವರೆಗೆ ಈ ಕಲೆಗಾಗಿ ಜೀವ ಸವೆಸಿದವರು. ಸತತವಾಗಿ ಏಳು ದಿನಗಳವರೆಗೆ ಹಾಡುವಷ್ಟು ಪದಗಳ ಸಂಗ್ರಹ ಇವರಲ್ಲಿದೆ. ಬಹಳಷ್ಟು ಹಾಡುಗಳನ್ನು ಇವರ ತಂದೆಯವರೇ ಬರೆದು ಕಲಿಸಿದ್ದಾರೆ. ಇವರ ತಂದೆಯವರು ಪ್ರಸಿದ್ಧ ಗೀ ಗೀ ಕವಿಯಾಗಿ ಈ ಭಾಗದಲ್ಲಿ ಹಲವಾರು ಜನರಿಗೆ ಮಾರ್ಗದರ್ಶ ನೀಡುವುದರ ಜೊತೆಗೆ ಈ ಕಲೆಗಾಗಿ ದುಡಿದವರು. ಅವರ ಈ ಹಾಡುಗಾರಿಕೆ ಹಾಗೂ ಗೀ ಗೀ ಹಾಡುಗಳನ್ನು ರಚಿಸುವ ಕಲೆಯನ್ನು ಮೈಗೂಡಿಸಿಕೊಂಡು ಬಂದಿರುವ ಸೈದುದಾಬ ಮೇಳ ಕಟ್ಟಿ ನಾಡಿನ ತುಂಬೆಲ್ಲಾ ಸಂಚರಿಸಿ ಕಲಾ ಸೇವೆ ಮಾಡಿದ್ದಾರೆ. ಕೆಲವು ಪ್ರಮುಖ ನಗರಗಳಲ್ಲಿ ಟಿಕೇಟು ಹಚ್ಚಿ ಹಾಡುಗಾರಿಕೆಯನ್ನು ಮಾಡಿದ ಕೀರ್ತಿ ಇವರದು. ಸುಮಾರು ಮೂರು ತಲೆಮಾರಿನಿಂದ ಬಳುವಳಿಯಾಗಿ ಬಂದ ಹಾಡುಗಾರಿಕೆಯನ್ನು ಮುಂದಿನ ಯುವ ಪೀಳಿಗೆಗೆ ಕಲಿಸಬೇಕೆಂಬ ಬಯಕೆ ಇವರಲ್ಲಿದೆ. ಆದರೆ ಕಲಿಯುವ ಮನಸ್ಸುಗಳಿಲ್ಲವೆಂದು ನನ್ನ ತಲೆಮಾರಿಗೆ ಈ ಕಲೆ ಮುಗಿಯಿತು ಎಂದು ವಿನಮ್ರವಾಗಿ ಹೇಳುವ ಸೈದು ಸಾಬ ಭಾಷೆ ಮತ್ತು ಮಾತನಾಡುವ ಶೈಲಿ ಬಿರುಸಾದರೂ ಹೃದಯವಂತ, ಗುಣವಂತ ಎಂದು ಹೇಳಬಹುದು. ಇಷ್ಟೆಲ್ಲ ದಿನಗಳನ್ನು ಕಲೆಗಾಗಿ ಕಳೆದಿರುವ ಇವರಿಗೆ ಸರ್ಕಾರದಿಂದ ದೊರೆಯುವ ಯಾವ ಸೌಲಭ್ಯವನ್ನು ಪಡೆದುಕೊಳ್ಳದವನು ನಾನು ಎಂಬ ಕೊರಗು ಅವರಲ್ಲಿ ಎದ್ದು ಕಾಣುತ್ತದೆ. ಇಂತಹ ಪ್ರತಿಭೆಗಳನ್ನು ಹೆಕ್ಕಿ ತೆಗೆದು ಪ್ರೋತ್ಸಾಹಿಸುವದು ಇಂದಿನ ಅವಶ್ಯಕತೆಯಾಗಿದೆ.

ಸೈಯದಸಾಬ ಹು. ತೋನಿಶ್ಯಾಳ,
ಸಾ : ಕೋಲೂರ,
ತಾ : ಬೀಳಗಿ, ಜಿ : ಬಾಗಲಕೋಟೆ.

## ಗ್ರಂಥ ಋಣ :


* ಕನ್ನಡ ನಾಡಿನ ಕಲಾವಿದರು
  – ಶ್ರೀ ವೀರೇಂದ್ರ ಶೀಲವಂತ
* ಶ್ರೀಕೃಷ್ಣ ಪಾರಿಜಾತ ಒಂದು ಅಧ್ಯಯನ
  – ಡಾ. ಶ್ರೀರಾಮ ಇಟ್ಟಣ್ಣವರ
* ಶ್ರೀಕೃಷ್ಣಪಾರಿಜಾತ : ಪ್ರಾತಿನಿಧಿಕ ಕಂಪನಿಗಳು
  – ಸಂ. ಶಿವಾನಂದ ಶೆಲ್ಲಿಕೇರಿ
* ಶ್ರೀ ವಲ್ಲಭ
  – ಸಂ. ಪ್ರೊ. ವಿಶ್ವನಾಥ ವಂಶಾಕೃತಮಠ
  ಡಾ. ಶೀಲಾಕಾಂತ ಪತ್ತಾರ


* ಸಂದರ್ಶಿಸಿದ ಕಲಾವಿದರು
  ಶ್ರೀ ಮಲ್ಲಿಕಾರ್ಜುನ ಮುದಕವಿ ಸಾ : ದಾದನಟ್ಟಿ
  ಶ್ರೀ ಸಿದ್ದಪ್ಪ ಮುಗಳಖೋಡ, ಸಾ : ಮುಗಳಖೋಡ
  ಶ್ರೀಮತಿ ಚಂಪಾಬಾಯಿ ಸುಳೆ ಸಾ : ಜಮಖಂಡಿ
  ಶ್ರೀ ಶ್ರೀಶೈಲ ಚ. ಪಟ್ಟಣಶೆಟ್ಟಿ ಸಾ : ನಾವಲಗಿ
  ಶ್ರೀ ಸತ್ಯಪ್ಪ ಚಿಗರಿ ಸಾ : ಲಿಂಗನೂರ



ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ-ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ.


ಕೆರೆಮನೆ ಶಂಭು ಹೆಗಡೆ
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು